ಗಾಯನಗಂಗೆ

ಡಾ. ಗಂಗೂಬಾಯಿ ಹಾನಗಲ್



■ ರೇಖಾ ಹೆಗಡೆ ಅರವಿಂದ್

ಪ್ರಸಾರಾಂಗ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಗಾಯನ ಗಂಗೆ
ಡಾ.ಗಂಗೂಬಾಯಿ ಹಾನಗಲ್

ರೇಖಾ ಹೆಗಡೆ ಅರವಿಂದ್

ಪ್ರಸಾರಾಂಗ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು

ಕುಲಪತಿಗಳ ಮಾತು

ಸಾಂಸ್ಕೃತಿಕ ಲೋಕವನ್ನು ಬೆಳೆಸುವ ಕುಸುಮಗಳು

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು 2009ರಲ್ಲಿ ಸ್ಥಾಪಿತಗೊಂಡು ಸಂಗೀತ, ನೃತ್ಯ, ನಾಟಕಾದಿ ಪ್ರದರ್ಶನ ಕಲೆಗಳ ಸಂರಕ್ಷಣೆ, ಏಳಿಗೆ, ಬೆಳವಣಿಗೆಗೆ ತನ್ನನ್ನು ತೊಡಗಿಸಿಕೊಂಡು ಬರುತ್ತಿದೆ. ಕಲೆಗಳು ಮನುಷ್ಯನ ಮನಸ್ಸಿಗೆ ಮುದ ನೀಡುವುದಲ್ಲದೆ, ಜ್ಞಾನಚಿಂತನೆಗೆ ಎಡೆ ಮಾಡಿಕೊಟ್ಟು ಪರಿಪೂರ್ಣ ಮಾನವನನ್ನಾಗಿಸುತ್ತದೆ. ಕಲೆಗಳ ಸಹಚರ್ಯದಿಂದ ಮಕ್ಕಳ ವಿದ್ಯಾಭ್ಯಾಸ ಉತ್ತಮ ಗುಣಮಟ್ಟ ಸಾಧಿಸಿರುವುದು ಇಂದಿನ ಸಂಶೋಧನೆಗಳಿಂದ ಸಾಬೀತಾಗಿದೆ. ಮುಖ್ಯವಾಗಿ ಕರ್ನಾಟಕ ರಾಜ್ಯ ಸಾಂಸ್ಕೃತಿಕ ನೆಲೆಬೀಡು. ಇನ್ನು ಮೈಸೂರು ಸಾಂಸ್ಕೃತಿಕ ನಗರಿ ಎಂದೇ ಖ್ಯಾತಿ ಗಳಿಸಿದೆ. ಈ ನೆಲೆಯಲ್ಲಿ ನಿಂತಿರುವ ಈ ವಿಶ್ವವಿದ್ಯಾಲಯ ಅನೇಕ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ಅವುಗಳನ್ನು ಸಾಕಾರಗೊಳಿಸುವಲ್ಲಿ ಮುನ್ನಡೆದಿದೆ.

ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಇರುವ ಪಠ್ಯ ವಿಚಾರಗಳೊಂದಿಗೆ ಸಂಗೀತ ನೆಲೆಯ ತಾಂತ್ರಿಕತೆಗಳು, ಧ್ವನಿಸಂಸ್ಕರಣೆ, ಸೃಜನಶೀಲತೆ ಇವುಗಳನ್ನು ಅಳವಡಿಸಿಕೊಳ್ಳುವ ಉದ್ದೇಶವಿದೆ. ಪ್ರಸಾರಾಂಗದ ಮೂಲಕ ಮತ್ತಷ್ಟು ಪುಸ್ತಕಗಳು ಬೆಳಕು ಕಂಡು ಜ್ಞಾನಲೋಕಕ್ಕೆ ಆಕರಗಳಾಗಿ ನಿಲ್ಲಬೇಕಿದೆ. ಇದಲ್ಲದೆ, ವಿಶ್ವವಿದ್ಯಾಲಯ ತ್ರೈಮಾಸಿಕ ಪತ್ರಿಕೆಯೊಂದನ್ನು ಹೊರತರುವ ಉದ್ದೇಶವನ್ನು ಹೊಂದಿದೆ.

ಈ ಹಿಂದೆ ನಮ್ಮ ಸಂಗೀತ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದ ಡಾ. ಹನುಮಣ್ಣ ನಾಯಕ ದೊರೆ ಅವರ ಅವಧಿಯಲ್ಲಿ ಪ್ರಸಾರಾಂಗದ ಮೂಲಕ ಪುಸ್ತಕ ಪ್ರಕಟಣಾ ಕಾರ್ಯ ಆರಂಭಗೊಂಡು, ಮುದ್ರಣ ಹಂತವನ್ನು ತಲುಪಿದ್ದ ಮೂರು ಪುಸ್ತಕಗಳು ನನ್ನ ಆಡಳಿತದ ಅವಧಿಯಲ್ಲಿ ಲೋಕಾರ್ಪಣೆಗೊಳ್ಳುತ್ತಿವೆ. ಈ ನಿಟ್ಟಿನಲ್ಲಿ ನಾನು ನಿಕಟಪೂರ್ವ ಕುಲಪತಿಗಳಿಗೆ ಹೆಚ್ಚಿನ ಅಭಿನಂದನೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ.

ಹೀಗೆ ಪ್ರಸಾರಾಂಗದ ಮೂಲಕ ಹೊರಬರುತ್ತಿರುವ ಸ್ವರ ಸಾಮ್ರಾಜ್ಞಿ ಪದ್ಮವಿಭೂಷಣ ಡಾ. ಗಂಗೂಬಾಯಿ ಹಾನಗಲ್ ಅವರ ಜೀವನ ಮತ್ತು ಸಂಗೀತ ಸಾಧನ ವಿವರಗಳನ್ನು ಒಳಗೊಂಡಿರುವ 'ಗಾಯನಗಂಗೆ ಡಾ. ಗಂಗೂಬಾಯಿ ಹಾನಗಲ್' ಕೃತಿಯನ್ನು ರೂಪಿಸಿಕೊಟ್ಟಿರುವ ಶ್ರೀಮತಿ ರೇಖಾ ಹೆಗಡೆ ಅರವಿಂದ್ ಅವರಿಗೆ ಅಭಿನಂದನೆಗಳು.

ಡಾ. ಸರ್ವಮಂಗಳ ಶಂಕರ್

ಕುಲಪತಿ

ಗಾಯನ ಗಂಗೆಗಾಗಿ ಪ್ರಸಾರಾಂಗದ ಸರಿಗಮನ...

ಸಂಗೀತ ಮತ್ತು ಪ್ರದರ್ಶಕ ಕಲೆಗೆಂದೇ ಸ್ಥಾಪಿತವಾದ ಐತಿಹಾಸಿಕ ಮಹತ್ವದ ವಿಶ್ವವಿದ್ಯಾಲಯ ನಮ್ಮದು. ಸಂಗೀತವು ಜೀವನವಿಧಿಯಾಗಬೇಕು, ಜೀವನಕ್ಕೆ ಆಸರೆಯಾಗಬಹುದು ಮತ್ತು ನಮ್ಮ ರಾಜ್ಯ-ರಾಷ್ಟ್ರದ ಸಾಂಸ್ಕೃತಿಕ ವಲಯಕ್ಕೆ ಹೊಸ ಆಯಾಮವನ್ನು ತನ್ಮೂಲಕ ನಿರ್ಮಿಸಬೇಕು ಎಂಬೆಲ್ಲ ಮಹತ್ವದ ನಿರ್ಣಯಗಳಿಂದ ಇದು ಸ್ಥಾಪಿತವಾಗಿದೆ. ಈ ಎಲ್ಲ ನಿರ್ಣಯಗಳನ್ನು ಕಾಲಕಾಲಕ್ಕೆ ರೂಪುಗೊಳಿಸುತ್ತಾ ಪರಂಪರೆ ಮತ್ತು ಸಂಪ್ರದಾಯದ ಇಕ್ಕೆಲಗಳ ನಡುವೆ ಈ ಸಂಸ್ಕೃತಿವಾಹಿನಿಯನ್ನು ಹರಿಗೊಡಬೇಕೆಂಬುದು ವಿಶ್ವವಿದ್ಯಾಲಯದ ಪ್ರಮುಖಧ್ಯೇಯ. ಸಮಸಾಮಯಿಕ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಪಠ್ಯಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಅನುಸ್ಥಾಪಿಸಿ ಕಲಾವಲಯದಲ್ಲಿ ನವೋನ್ಮೇಶವನ್ನು ಮತ್ತು ನಾಡಿನ ಕಲಾಪರಂಪರೆಯ ಉತ್ಕರ್ಷವನ್ನು ಸಾಧಿಸಬೇಕು ಎಂಬುದು ಇದರ ಆತ್ಮಸಂದೇಶ. ವಿಶ್ವವಿದ್ಯಾಲಯದ ಧ್ಯೇಯವಾಕ್ಯವೂ ಲಾಂಛನವೂ ಇದನ್ನು ಸಾರಿಹೇಳುತ್ತಿವೆ. ಈ ಎಲ್ಲ ಸಂದೇಶಗಳನ್ನೂ ಪ್ರಯೋಗ, ಶಾಸ್ತ್ರ ಮತ್ತು ಇವುಗಳ ಸಂಕೀರ್ಣಸೂಚಕ ಗ್ರಂಥಗಳನ್ನು ಪ್ರಕಟಿಸುವ ಮಹತ್ಕಾರ್ಯಕ್ಕಾಗಿ ಪ್ರಸಾರಾಂಗವು ಅಂಕುರಗೊಂಡಿರುವುದು ಮಾನ್ಯ ಕುಲಪತಿಗಳಾದ ಡಾ|| ಹನುಮಣ್ಣನಾಯಕ ದೊರೆಯವರ ದಿಗ್ದರ್ಶನದಲ್ಲಿ.

ಭಾರತೀಯ ಸಂಗೀತಕ್ಷೇತ್ರಕ್ಕೆ ಕರ್ನಾಟಕ ಮತ್ತು ಕನ್ನಡಿಗರು ಸಲ್ಲಿಸಿರುವ ಸೇವೆ ಮಹತ್ವವಾದದ್ದು. ಕರ್ನಾಟಕದ ಗಾಯಕ-ವಾದಕ ಪರಂಪರೆಯು ಈ ನಿಟ್ಟಿನಲ್ಲಿ ತಮ್ಮದೇ ಆದ ಪ್ರಮುಖಪಾತ್ರವನ್ನು ರಾಷ್ಟ್ರಮಟ್ಟದಲ್ಲಿ ಮೆರೆದಿದ್ದಾರೆ. ಭಾರತದ ಸ್ವಾತಂತ್ರ್ಯಪೂರ್ವದ ಒಂದು ಶತಮಾನದಷ್ಟು ಹಿಂದೆ ಈ ಕಲೋತ್ಕರ್ಷವನ್ನು ಕಾಲಕಾಲಕ್ಕೆ ರಚಿತವಾದ ಶಾಸ್ತ್ರಗ್ರಂಥಗಳಲ್ಲಿ ನಾವು ಕಾಣಬಹುದು. ಪ್ರದರ್ಶನವೇ ಕಲೆಯ ಜೀವಾಳವಾದರೂ ಕಲೆಗಾರ ಜೀವನದ ಸಾರ್ಥಕ ಸ್ಮರಣೆಯು ಅವರ ಜೀವಿತಕಾಲದಲ್ಲಿ ಮಾತ್ರ ಉತ್ಕರ್ಷವಾಗಿ ಗುರುತಿಸಿ, ಅವರ ಅವಸಾನದ ನಂತರ ಅದನ್ನು ಗುರುಪರಂಪರೆಯಾಗಿ ಮಾತ್ರ ಗೌರವಿಸಿಕೊಳ್ಳುವ ಪರಿಪಾಠವು ಮುಖ್ಯವಾಗಿ ಕರ್ನಾಟಕಸಂಗೀತ ಹಾಗೂ ಅದರ ಜ್ಞಾತಿವಿದ್ಯಾವಲಯದಲ್ಲಿ ನೋಡುತ್ತೇವೆ. ಈ ಗೌರವವನ್ನು ವಿದ್ಯಾಮರ್ಯಾದೆಯಾಗಿ ಶಾಸ್ತ್ರಗ್ರಂಥಗಳಲ್ಲಿ ಜ್ಞಾನಸಂಗ್ರಹವಾಗಿ ಇದೆ. ಆದರೆ ಸಮಸಾಮಯಿಕ ಬದುಕಿನಲ್ಲಿ ಆಗಿಹೋದ ಕಲೆಗಾರರ ಜೀವನಸಾಧನೆಗಳನ್ನು ಆಲೋಚನೆ ಮಾಡುವಾಗ ಕಲಾರಸಿಕರಿಗೂ

ಲೇಖಕರ ಮಾತು

ಸಕಾಲಕ್ಕೆ ನಾನು ಕೇಳಿದ ಎಲ್ಲ ಮಾಹಿತಿಗಳನ್ನು, ಅಪೂರ್ವ ಛಾಯಾಚಿತ್ರಗಳನ್ನು, ಪತ್ರಿಕಾ ವರದಿಯ ಪ್ರತಿಗಳನ್ನು ನೀಡಿದ ಶ್ರೀ ಬಾಬುರಾವ್ ಹಾನಗಲ್, ಮನೋಜ್ ಹಾನಗಲ್ ಮತ್ತು ಕುಟುಂಬದವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಇಂಥದ್ದೊಂದು ಅಧ್ಯಯನಕ್ಕೆ ಅವಕಾಶ ಒದಗಿಸಿದ ಕರ್ನಾಟಕ ರಾಜ್ಯ ಡಾ|| ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇದರ ಕುಲಪತಿಗಳಿಗೆ, ಅಧಿಕಾರಿಗಳಿಗೆ ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿಗೆ ನನ್ನ ಹಾರ್ದಿಕ ಕೃತಜ್ಞತೆಗಳು ಸಲ್ಲುತ್ತವೆ.


–ರೇಖಾ ಹೆಗಡೆ ಅರವಿಂದ್



ಡಾ. ಗಂಗೂಬಾಯಿ ಹಾನಗಲ್ ಅವರ ಗಾಯನಭಂಗಿ



ಪಂ. ಭೀಮಸೇನ ಜೋಶಿ ಅವರೊಂದಿಗೆ



ಶ್ರೀಮತಿ ಕಿಶೋರಿ ಅಮೋನ್‌ಕರ್ ಅವರೊಂದಿಗೆ



ಪಂ. ಜಸ್‌ರಾಜ್ ಅವರೊಂದಿಗೆ

1. ಜೀವನ ಚಿತ್ರ

ಬಾಲ್ಯ ಮತ್ತು ಶಿಕ್ಷಣ

ಭಾರತೀಯ ಸಂಗೀತ ಕ್ಷೇತ್ರದ ಇತಿಹಾಸದಲ್ಲಿ ಕಳೆದ ಶತಮಾನದ ಮೂವತ್ತರ ದಶಕ ಬಹಳ ಪ್ರಮುಖವಾದದ್ದು. ಆ ವರೆಗೆ ಕೇವಲ ಮನೆಗಳಲ್ಲಿ ಹಾಡುತ್ತ, ಕಲಾವಂತಿಕೆಯವರ ಕೋಠಿಗಳಿಗೆ ಸೀಮಿತವಾಗಿದ್ದ ಗಾಯಕಿಯರು ವೇದಿಕೆಯೇರಿದ್ದು ಇದೇ ವೇಳೆಯಲ್ಲಿ. ಈ ದೇಶ ಕಂಡ ಮಹಾನ್ ಗಾಯಕಿಯರ ಒಂದು ಪೀಳಿಗೆ ಈ ಕಾಲ ಘಟ್ಟದಲ್ಲಿ ರೂಪುಗೊಂಡಿತು. ಮೊಗುಬಾಯಿ ಕುರ್ಡೀಕರ್, ಹೀರಾಬಾಯಿ ಬಡೋದೇಕರ್, ಕೇಸರಬಾಯಿ ಕೇರಕರ್, ಬೇಗಂ ಅಖ್ತರ್, ಸಿದ್ಧೇಶ್ವರಿ ದೇವಿ, ರಸೂಲನ್ ಬಾಯಿ, ಡಿ.ಕೆ.ಪಟ್ಟಮ್ಮಾಳ್ ಮತ್ತು ಎಂ. ಎಸ್. ಸುಬ್ಬುಲಕ್ಷ್ಮೀ ಇವರೆಲ್ಲ ಇದೇ ಕಾಲ ಘಟ್ಟದಲ್ಲಿ ವೇದಿಕೆಯೇರಿದ ಸಾಧಕಿಯರು. ಇದೇ ಸಾಲಿಗೆ ಸೇರಿದವರು ಪದ್ಮವಿಭೂಷಣ ಡಾ. ಗಂಗೂಬಾಯಿ ಹಾನಗಲ್.

ಮಹಿಳೆ ಸಾರ್ವಜನಿಕವಾಗಿ ಹಾಡುವುದಾಗಲೀ, ಸಂಗೀತ ಕಲಿಯುವುದಾಗಲೀ ಸಜ್ಜನಿಕೆಯಲ್ಲ ಎಂದೇ ಭಾವಿಸಲಾಗಿದ್ದ ಆ ಕಾಲದಲ್ಲಿ ಈ ಎಲ್ಲ ರಾಗಿಣಿಯರು ಸಂಗೀತ ಕಲಿತರು, ಸಾರ್ವಜನಿಕವಾಗಿ ವೇದಿಕೆಯೇರಿ ಹಾಡಿದರು, ಯಶಸ್ವಿಯಾದರು. ಆ ಮೂಲಕ ಜಾತಿ ಮತ್ತು ಲಿಂಗ ತಾರತಮ್ಯವನ್ನು ಮೆಟ್ಟಿ ನಿಂತರು. ಅವರ ಅಂದಿನ ಪರಿಶ್ರಮದ ಫಲವಾಗಿ ಇಂದು ಸಂಗೀತ ಕ್ಷೇತ್ರದಲ್ಲಿ ಸಾಲು ಸಾಲು ಸಾಧಕಿಯರಿದ್ದಾರೆ: ದೇವಸ್ಥಾನದ ಕಟ್ಟೆಯ ಮೇಲಿನ ಭಜನಾ ಮಂಡಳಿಯಿಂದ ಹಿಡಿದು, ಪ್ರತಿಷ್ಠಿತ ಸಂಗೀತ ಸಮ್ಮೇಳನಗಳವರೆಗೆ ಅವರ ಉಪಸ್ಥಿತಿ ಇದೆ.

ಗಂಗೂಬಾಯಿ ಹುಟ್ಟಿದ್ದು ಧಾರವಾಡದಲ್ಲಿ. ೧೯೧೩ರ ಮಾರ್ಚ್ ೫ ರಂದು. ತಂದೆ ಚಿಕ್ಕೂರಾವ್ ನಾಡಗೀರ್. ತಾಯಿ ಅಂಬಾಬಾಯಿ. ಗಂಗೂಬಾಯಿ ಅವರ ಮುತ್ತಜ್ಜ ನರಗುಂದ ಸಂಸ್ಥಾನದಲ್ಲಿ ಮುನ್ಸೀಫರಾಗಿದ್ದರು. ೧೮೫೭ರಲ್ಲಿ ಬ್ರಿಟೀಷರ ವಿರುದ್ಧ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಸಂಸ್ಥಾನಿಕರಾಗಿದ್ದ ಬಾಬಾ ಸಾಹೇಬ ಅವರೊಂದಿಗೆ ಪಾಲ್ಗೊಂಡರು. ತಮ್ಮ ಬೆನ್ನಟ್ಟಿದ್ದ ಬ್ರಿಟಿಷ್ ಸೈನಿಕರಿಂದ ತಪ್ಪಿಸಿಕೊಂಡು ಭೂಗತರಾದವರು ಆ ಮೇಲೆ ಮತ್ತೆ ಕಾಣಿಸಿಕೊಳ್ಳಲಿಲ್ಲ. ದಾರಿ ಕಾಣದ ಗಂಗವ್ವ (ಗಂಗೂಬಾಯಿ ಅವರ ಮುತ್ತಜ್ಜಿ. ಇವರ ಹೆಸರನ್ನೇ ಗಂಗೂಬಾಯಿಯವರಿಗೂ ಇಟ್ಟಿದ್ದು) ಇಂದಿನ ಹಾವೇರಿ ಜಿಲ್ಲೆಯ ಹಾನಗಲ್‌ಗೆ ಬಂದು ನೆಲೆಸಿದರು. ಆ ಊರ ಹೆಸರೇ

ಅವರ ಮನೆತನದ ಅಡ್ಡ ಹೆಸರಾಯಿತು. ಅವರ ಕುಟುಂಬ ಧಾರವಾಡಕ್ಕೆ ಬಂದಿದ್ದು ಯಾವಾಗ ಮತ್ತು ಹೇಗೆ ಎಂಬ ವಿವರಗಳು ತಿಳಿದುಬರುತ್ತಿಲ್ಲ.

ಧಾರವಾಡದ ಶುಕ್ರವಾರ ಪೇಟೆಯಲ್ಲಿ ಅಂಬಾಬಾಯಿ ಅವರ ಸ್ವಂತ ಮನೆ. ಇಲ್ಲೇ ಗಂಗೂಬಾಯಿ ಅವರು ತಮ್ಮ ಬಾಲ್ಯವನ್ನು ಕಳೆದದ್ದು. ಅಂಬಾಬಾಯಿ ಸ್ವತಃ ಉನ್ನತ ಶ್ರೇಣಿಯ ಗಾಯಕಿಯಾಗಿದ್ದರು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅವರು ರಾಣಿಬೆನ್ನೂರಿನ ಶ್ಯಾಮಾಚಾರ್ಯ ಮತ್ತು ಹರಪನಹಳ್ಳಿಯ ಇಮಾಂ ಸಾಹೇಬ ಅವರಿಂದ ಕಲಿತಿದ್ದರು. ಹಿಂದುಸ್ತಾನಿ ಸಂಗೀತದ ಗುಂಗು ಧಾರವಾಡಕ್ಕಿನ್ನೂ ಕಾಲಿಡುತ್ತಿದ್ದ ಕಾಲವದು. ಮೈಸೂರು ಸಂಸ್ಥಾನ ಸಂಗೀತ, ಸಾಹಿತ್ಯ ಮತ್ತು ಲಲಿತ ಕಲೆಗಳಿಗೆ ರಾಜಾಶ್ರಯ ನೀಡುತ್ತಿತ್ತು. ಆಗ ಮೈಸೂರಿನ ಒಡೆಯರು ಹಿಂದುಸ್ತಾನಿ ಸಂಗೀತಕ್ಕೂ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರ ಫಲವಾಗಿ ಉತ್ತರಭಾರತದಿಂದ ಹಲವಾರು ಸಂಗೀತಗಾರರು ಮೈಸೂರಿಗೆ ಆಗಾಗ ಭೇಟಿ ಕೊಡುತ್ತಿದ್ದರು. ಹಾಗೆ ಉತ್ತರಭಾಗದಿಂದ ಮೈಸೂರಿಗೆ ಬರುವವರಿಗೆ ಧಾರವಾಡ ಮಧ್ಯಂತರ ವಿಶ್ರಾಂತಿ ತಾಣ. ಹಾಗೆ ಕಲಾವಿದರು ಬಂದಾಗ ಧಾರವಾಡದ ಸಂಗೀತ ಶ್ರೋತೃಗಳು ಬೈಠಕ್ ಏರ್ಪಡಿಸುತ್ತಿದ್ದುದು, ಮುಂದೆ ಧಾರವಾಡದಲ್ಲಿ ಹಿಂದುಸ್ತಾನಿ ಸಂಗೀತ ನೆಲೆಗೊಳ್ಳಲು ಕಾರಣವಾಯಿತು.

ಉಸ್ತಾದ್ ಅಬ್ದುಲ್ ಕರೀಂ ಖಾನರು (ಕಿರಾಣಾ ಘರಾಣೆಯ ಮೂಲ ಪುರುಷರು) ಅಂಬಾಬಾಯಿ ಅವರ ಸಂಗೀತದ ಅಭಿಮಾನಿಯಾಗಿದ್ದರು. ಮೀರಜ್‌ನಲ್ಲಿ ವಾಸವಾಗಿದ್ದ ಅವರು ತಮ್ಮ ಮೈಸೂರು ಪ್ರವಾಸದಲ್ಲಿ ಧಾರವಾಡದ ಅಂಬಾಬಾಯಿ ಅವರ ಮನೆಗೆ ಭೇಟಿ ನೀಡಿ ಅವರಿಂದ ಹಾಡಿಸಿ ಸಂತೋಷಪಡುತ್ತಿದ್ದರಂತೆ. ಇಂತಹುದೇ ಒಂದು ಸಂದರ್ಭದಲ್ಲಿ ಪುಟ್ಟ ಬಾಲಕಿ ಗಂಗೂಬಾಯಿ ಅವರಿಂದಲೂ ಹಾಡಿಸಿದ ಅಬ್ದುಲ್ ಕರೀಂ ಖಾನರು 'ಗಲಾ ಅಚ್ಛಾ ಹೈ. ಖೂಬ್ ಖಾನಾ, ಖೂಬ್ ಗಾನಾ (ಧ್ವನಿ ಚೆನ್ನಾಗಿದೆ. ಚೆನ್ನಾಗಿ ತಿಂದು ಚೆನ್ನಾಗಿ ಹಾಡಬೇಕು!)' ಎಂದು ಆಶೀರ್ವಾದ ಮಾಡಿದ್ದರು. ಮುಂದೆ ಈ ಹುಡುಗಿ ತನ್ನ ಘರಾಣೆಯ ಹೆಸರನ್ನು ಅಜರಾಮರವಾಗಿಸುವ ಸಾಧನೆ ಮಾಡುತ್ತಾಳೆ ಎಂಬುದು ಬಹುಶಃ ಆಗ ಅಬ್ದುಲ್ ಕರೀಂ ಖಾನರಿಗೂ ಅನ್ನಿಸಿರಲಾರದು.

ಕರ್ನಾಟಕಿ ಅಲ್ಲ ಹಿಂದುಸ್ತಾನಿ

ಸಂಗೀತದ ನಾದವಿದ್ದ ಮಗಳಿಗೆ ಅಂಬಾಬಾಯಿ ಕರ್ನಾಟಕ ಸಂಗೀತವನ್ನು ಕಲಿಸಲಾರಂಭಿಸಿದರು (೧೯೨೩). ಆದರೆ ಇದು ಆಕೆಗಲ್ಲ ಎಂಬುದು ಅಂಬಾಬಾಯಿ ಅವರ ಸೂಕ್ಷ್ಮ ಬುದ್ಧಿಗೆ ಗೊತ್ತಾಗಲು ಬಹಳ ಕಾಲವೇನೂ ಬೇಕಾಗಲಿಲ್ಲ. ಶುಕ್ರವಾರ ಪೇಟೆಯ ವೀರಭದ್ರೇಶ್ವರ ಗುಡಿಯ ಎದುರಿಗಿದ್ದ ರಾಷ್ಟ್ರೀಯ ಶಾಲೆಗೆ ಗಂಗೂಬಾಯಿ ಹೋಗುತ್ತಿದ್ದರು. ಆಗ ತಾನೇ ಗ್ರಾಮಾಫೋನುಗಳ ಯುಗ ಆರಂಭವಾಗಿತ್ತು. ಅಂಗಡಿಗಳಲ್ಲಿ

ಹಚ್ಚುತ್ತಿದ್ದ ಗ್ರಾಮಾಫೋನಿನ ಹಾಡುಗಳನ್ನು ಅವರು ತಾಸು ತಾಸಾದರೂ ನಿಂತು ಕೇಳುತ್ತಿದ್ದರು. ಅಷ್ಟೇ ಅಲ್ಲ ಅವನ್ನು ಕಲಿತು ಬಂದು ತಾಯಿಯ ಮುಂದೆ ಹಾಡಿ ತೋರಿಸುತ್ತಿದ್ದರು. ಅವರ ಮನೆಯ ಹತ್ತಿರವೇ ಶ್ರೀಪಾದರಾವ್ ತಾಮಣಕರ ಅವರ ಹಾರ್ಮೋನಿಯಂ ರಿಪೇರಿ ಅಂಗಡಿ ಇತ್ತು. ಅವರು ಗ್ರಾಮಾಫೋನ್ ಧ್ವನಿಮುದ್ರಿಕೆಗಳನ್ನೂ ಮಾರುತ್ತಿದ್ದರು. ಪರಿಚಯಸ್ಥರಾಗಿದ್ದ ಅವರ ಅಂಗಡಿಯಲ್ಲಿ ಕೂತು ಕಿವಿ ತಣಿಯುವಷ್ಟು ಹಾಡುಗಳನ್ನು ಕೇಳುತ್ತಿದ್ದರು. ಹೀಗೆ ಕೇಳಿ ಕೇಳಿ ಕಂಠಸ್ಥವಾಗಿದ್ದ ಕೆಲವು ಹಾಡುಗಳೆಂದರೆ 'ರಾಧೆ ಕೃಷ್ಣ ಬೋಲೆ ಮುಖಸೆ', 'ಆನಬಾನ ಜಿಯಾಯೆ ಮಿಲಾ'.

ಆಗ ಧಾರವಾಡ, ಬೆಳಗಾವಿ ಸುತ್ತಮುತ್ತ ಹಿಂದುಸ್ತಾನಿ ಸಂಗೀತದ ಪ್ರಭಾವ ನಿಧಾನವಾಗಿ ಹೆಚ್ಚುತ್ತಿತ್ತು. ಅಬ್ದುಲ್ ಕರೀಂ ಖಾನ್, ಭಾಸ್ಕರ ಬುವಾ ಬಖಲೆ (ಇವರು ಧಾರವಾಡದಲ್ಲಿ ಶಿಕ್ಷಕರಾಗಿದ್ದರು) ಮಾಸ್ಟರ್ ಕೃಷ್ಣರಾವ್ ಮುಂತಾದವರ ಬೈಠಕ್ಕುಗಳು ಮೇಲಿಂದ ಮೇಲೆ ಧಾರವಾಡದಲ್ಲಿ ನಡೆಯುತ್ತಿದ್ದವು. ಹೀಗೆ ವಾತಾವರಣದಲ್ಲಿ ತುಂಬಿದ್ದ ಹಿಂದುಸ್ತಾನಿ ಸಂಗೀತವನ್ನೇ ಮಗಳಿಗೆ ಕಲಿಸುವ ತುಂಬ ಮಹತ್ವದ ನಿರ್ಧಾರವನ್ನು ಅಂಬಾಬಾಯಿ ಮಾಡಿದರು. ಶುಕ್ರವಾರಪೇಟೆಯ ರಾಷ್ಟ್ರೀಯ ಶಾಲೆಯಲ್ಲಿ ಗಂಗೂಬಾಯಿ ಕಲಿತದ್ದು ಕೇವಲ ಐದನೇ ತರಗತಿಯವರೆಗೆ ಮಾತ್ರ. ಇದೇ ಅವಧಿಯಲ್ಲಿ, ೧೯೨೪ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಅಲ್ಲಿ ತಮ್ಮ ಶಾಲೆಯಿಂದ ಶಿಕ್ಷಕರು ಕರೆದುಕೊಂಡು ಹೋದ ನಾಲ್ವರು ಹುಡುಗಿಯರಲ್ಲಿ ಒಬ್ಬಳಾಗಿ ನಿಂತು ಗಂಗೂಬಾಯಿ ಸ್ವಾಗತಗೀತೆ ಹಾಡಿದರು. ಗಾಂಧೀಜಿಯವರನ್ನು ಹತ್ತಿರದಿಂದ ನೋಡಿದ ಆ ನೆನಪನ್ನು ಅವರು ಜತನದಿಂದ ಕಾಯ್ದುಕೊಂಡಿದ್ದರು.

ಧಾರವಾಡದ ಶುಕ್ರವಾರಪೇಟೆಯೆಂದರೆ ಕಟ್ಟಾ ಸಂಪ್ರದಾಯಸ್ಥ ಬ್ರಾಹ್ಮಣರ ಓಣಿ. ತಾಯಿ ಅಂಬಾಬಾಯಿ ಅವರು ಕಲಾವಂತ ಸಂಪ್ರದಾಯದಂತೆ ಬ್ರಾಹ್ಮಣರಾಗಿದ್ದ ಚಿಕ್ಕರಾವ್ ನಾಡಿಗೇರ್ ಅವರ ಉಪಪತ್ನಿಯಾಗಿದ್ದರೂ, ಮಡಿವಂತರ ಬಾಯಲ್ಲಿ 'ಗಾನೆವಾಲಿ'. ಗಂಗಾಮತಸ್ಥ ಜನಾಂಗಕ್ಕೆ ಸೇರಿದವರು ಎಂಬ ಕಾರಣಕ್ಕೊ ಅಥವಾ ಹಾಡುವವರು ಎಂಬ ಕಾರಣಕ್ಕೊ (ಮಹಿಳೆಯರು ಹಾಡುವುದು ಆ ಕಾಲದಲ್ಲಿ ಅಪರಾಧವೇ ಆಗಿತ್ತು!) ಅವರಿಗೆ ಅಕ್ಕಪಕ್ಕದ ಮನೆಗಳ ಪ್ರವೇಶ ನಿಷಿದ್ಧವಾಗಿತ್ತು. ಅಲ್ಲದೇ ಪುಟ್ಟ ಹುಡುಗಿ ಗಂಗೂಬಾಯಿ ಅವರ ಹಿತ್ತಿಲಿನಿಂದ ಎಲ್ಲ ಮಕ್ಕಳಂತೆ ಮಾವಿನ ಕಾಯಿಯನ್ನೋ, ಪೇರಲಕಾಯಿಯನ್ನೋ ಕಿತ್ತು ತಿನ್ನುವಂತೆ ಇರಲಿಲ್ಲ. ಶುಕ್ರವಾರಪೇಟೆಯಲ್ಲಿ ಆಗಾಗ ನಡೆಯುತ್ತಿದ್ದ ಸಂಗೀತ ಕಾರ್ಯಕ್ರಮಗಳಿಗೆ ಅಂತಹ ಶ್ರೇಷ್ಠ ಗಾಯಕಿಯಾಗಿದ್ದ ಅಂಬಾಬಾಯಿ ಅವರನ್ನು ಕರೆಯುತ್ತಿರಲಿಲ್ಲವಂತೆ. ಆಕೆ ತಮ್ಮ ಮನೆಯ ಕಟ್ಟೆಯ ಮೇಲೆ ಕುಳಿತು ಸಂಗೀತ ಕೇಳುತ್ತಿದ್ದರಂತೆ. ಈ ರೀತಿಯ ಜಾತಿ ತಾರತಮ್ಯ ಮತ್ತು ಅದರಿಂದಾದ ಅವಮಾನಗಳು ಗಂಗೂಬಾಯಿ ಅವರ ಬಾಲ್ಯದುದ್ದಕ್ಕೂ ಕಾಡಿದವು. ನಾಡಿಗೇರ

ಚಿಕ್ಕರಾವ್ ಅವರ ಆಶ್ರಯವಿದ್ದರೂ ಸಹ ಮನೆಯ ಆರ್ಥಿಕ ಪರಿಸ್ಥಿತಿ ಹೇಳಿಕೊಳ್ಳುವಷ್ಟು ಚೆನ್ನಾಗೇನೂ ಇರಲಿಲ್ಲ. ಅಂಬಾಬಾಯಿ ಅವರಿಗೆ ಶ್ರೀಮಂತರ ಮನೆಯ ಸಮಾರಂಭಗಳಲ್ಲಿ ಹಾಡಿದಾಗ ದೊರಕುತ್ತಿದ್ದ ಪುಟ್ಟ ಸಂಭಾವನೆಯನ್ನು ಬಿಟ್ಟರೆ ಬೇರೆ ಆದಾಯದ ಮೂಲವೇ ಇರಲಿಲ್ಲ. ಈ ಎಲ್ಲ ಹಿನ್ನೆಲೆಯನ್ನು ಗಮನಿಸಿದರೆ ಮಗಳನ್ನು ಹಿಂದುಸ್ತಾನಿ ಸಂಗೀತಗಾರ್ತಿಯನ್ನಾಗಿ ಮಾಡಬೇಕೆಂಬ ಅಂಬಾಬಾಯಿ ಅವರ ನಿರ್ಧಾರ ಬಹಳ ಮಹತ್ವದ್ದು ಮತ್ತು ದಿಟ್ಟತನದ್ದಾಗಿ ಕಾಣುತ್ತದೆ.

ಹುಬ್ಬಳ್ಳಿಗೆ ಸ್ಥಳಾಂತರ

ಧಾರವಾಡಕ್ಕಿಂತ ಹುಬ್ಬಳ್ಳಿ ದೊಡ್ಡ ಊರು ಅಂದೂ ಇಂದೂ. ಅಲ್ಲಿ ಮಗಳಿಗೆ ಹಿಂದುಸ್ತಾನಿ ಸಂಗೀತ ಕಲಿಸಲು ಯಾರಾದರೂ ಸಿಗಬಹುದು ಎಂದು ಯೋಚಿಸಿ ಅಂಬಾಬಾಯಿ ತಮ್ಮ ಕುಟುಂಬವನ್ನು ಧಾರವಾಡದಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಿದರು. ಧಾರವಾಡದ ಸ್ವಂತ ಮನೆ ಬಿಟ್ಟು ಹುಬ್ಬಳ್ಳಿಯ ಗಣೇಶಪೇಟೆಯ ಬಾಡಿಗೆ ಮನೆಗೆ ಅಂಬಾಬಾಯಿ ಕುಟುಂಬ ಸ್ಥಳಾಂತರಗೊಂಡು ಎರಡು ವರ್ಷವಾದರೂ ಗಂಗೂಬಾಯಿ ಅವರಿಗೆ ಸಂಗೀತ ಕಲಿಸುವವರು ಸಿಕ್ಕಲಿಲ್ಲ. ಸಂಗೀತ ಕಲಿಯುವ ಸಲುವಾಗಿ ಶಾಲೆಯನ್ನಂತೂ ಬಿಟ್ಟಾಗಿತ್ತು. ಈ ಅವಧಿಯಲ್ಲಿ ಶ್ಯಾಮಲಾಲ್ ಮತ್ತು ಪ್ರತಾಪಲಾಲ್ ಅವರಿಂದ ಕಥಕ್ ನೃತ್ಯವನ್ನು ಕಲಿಸುವ ಪ್ರಯತ್ನವನ್ನು ಅಂಬಾಬಾಯಿ ಮಾಡಿದರಾದರೂ ಮುಂದೆ ನೃತ್ಯ ಮಾಡುವುದರಿಂದ ಕಂಠಕ್ಕೆ ತೊಂದರೆಯಾಗುತ್ತದೆ ಎಂದು ಯಾರೋ ಹೇಳಿದರು ಎಂದು ನೃತ್ಯ ಕಲಿಕೆಯನ್ನೇ ಬಿಡಿಸಿದರು. ಅದರಿಂದ ಒಳ್ಳೆಯದೇ ಆಯಿತು ಎನ್ನಬೇಕು. ಕಥಕ್ ನೃತ್ಯಕ್ಕಾದ ನಷ್ಟ ಹಿಂದುಸ್ತಾನಿ ಸಂಗೀತ ಕ್ಷೇತ್ರಕ್ಕೆ ಲಾಭವಾಗಿ ಪರಿಣಮಿಸಿತು.

ಹುಬ್ಬಳ್ಳಿಯ ದತ್ತೋಪಂತ ದೇಸಾಯಿ ಅವರು ಒಳ್ಳೆಯ ಸಂಗೀತಪ್ರೇಮಿ. ಯಾವುದೇ ಗುರುಗಳಿಂದ ಸಂಗೀತ ಕಲಿತವರಾಗಿರಲಿಲ್ಲ. ಆದರೆ, ಆ ಬಗ್ಗೆ ಓದಿ ಮತ್ತು ಸಂಗೀತ ಕಛೇರಿಗಳನ್ನು ಕೇಳಿ ಸೂಕ್ಷ್ಮ ತಿಳುವಳಿಕೆಯನ್ನು ಸಂಪಾದಿಸಿದ್ದರು. ಅನೇಕ ಕಲಾವಿದರೊಂದಿಗೆ ಅವರಿಗೆ ಸ್ನೇಹವಿತ್ತು. ಅವರು ಗಂಗೂಬಾಯಿ ಅವರನ್ನು ಹುಲಗೂರ ಕೃಷ್ಣಾಚಾರ್ಯ (೧೯೨೮) ಎಂಬುವವರಲ್ಲಿ ಸಂಗೀತ ಕಲಿಸಲು ಸೇರಿಸಿದರು. ದುರ್ಗದ ಬೈಲಿನಲ್ಲಿ ಜವಳಿ ವ್ಯಾಪಾರಿಯಾಗಿದ್ದ ಬಿ. ಬಾಬು ಅವರ ಅಂಗಡಿಯ ಮಹಡಿಯ ಮೇಲೆ ಇದ್ದ ಸಾಲು ಮನೆಗಳೊಂದರಲ್ಲಿ ಕೃಷ್ಣಾಚಾರ್ಯರು ಸಂಗೀತ ಕಲಿಸುತ್ತಿದ್ದರು. ಗಣೇಶಪೇಟೆಯಿಂದ ದುರ್ಗದ ಬೈಲಿಗೆ ಗಂಗೂಬಾಯಿ ಪ್ರತಿದಿನ ಹೋಗಿ ಸಂಗೀತ ಕಲಿಯಲಾರಂಭಿಸಿದರು. ಒಂದು ವರ್ಷದಲ್ಲಿ ಸುಮಾರು ಅರವತ್ತು ಬಂದಿಷ್‌ಗಳನ್ನು ಗಂಗೂಬಾಯಿ ಕಲಿತರು. ಮಗಳ ಸಂಗೀತ ಪಾಠ ಸುಗಮವಾಗಿ ನಡೆದಿದೆ ಎಂದು ಅಂಬಾಬಾಯಿ ಸಮಾಧಾನ ಪಡುವಷ್ಟರಲ್ಲಿ ಒಂದು ಕಹಿ ಘಟನೆ ನಡೆದು, ಕೃಷ್ಣಾಚಾರ್ಯರಲ್ಲಿ ಸಂಗೀತ ಕಲಿಕೆ

ನಿಲ್ಲುವಂತಾಯಿತು.

ಸ್ವತಃ ಸಂಗೀತಗಾರ್ತಿಯಾಗಿದ್ದ ಅಂಬಾಬಾಯಿ, ಮಗಳು ಹಿಂದುಸ್ತಾನಿ ಸಂಗೀತ ಕಲಿಯಲು ಶುರು ಮಾಡುತ್ತಿದ್ದಂತೆ, ತನ್ನ ಕರ್ನಾಟಕ ಶೈಲಿಯ ಅಭ್ಯಾಸದಿಂದ ಮಗಳ ಗಾಯನದ ಮೇಲೆ ವ್ಯತಿರಿಕ್ತ ಪರಿಣಾಮ ಆಗಬಾರದೆಂದು ಭಾವಿಸಿ ಹಾಡುವುದನ್ನೇ ನಿಲ್ಲಿಸಿಬಿಟ್ಟರು. ಮನೆಯಲ್ಲಿ ಮಾತ್ರವಲ್ಲ, ಮದುವೆ ಮನೆಗಳಲ್ಲಿ, ಶ್ರೀಮಂತರ ಮನೆಯ ಕಾರ್ಯಕ್ರಮಗಳಲ್ಲಿ ಹಾಡುವುದನ್ನೂ ಆಕೆ ನಿಲ್ಲಿಸಿಬಿಟ್ಟರು. ಖ್ಯಾತನಾಮರಿಂದ ಭೇಷ್ ಅನಿಸಿಕೊಂಡಿದ್ದು, ತನಗಿದ್ದ ಜನಪ್ರಿಯತೆ ಯಾವುದೂ ಮಗಳನ್ನು ಸಂಗೀತಗಾರ್ತಿಯನ್ನಾಗಿ ಮಾಡಬೇಕೆಂಬ ಅವರ ಅದಮ್ಯ ಇಚ್ಛೆಗೆ ಅಡ್ಡಿಯಾಗಲಿಲ್ಲ. ಅಂತಹ ತ್ಯಾಗಮಯಿ ತಾಯಿ ಆಕೆ.

ಸಂಗೀತ ಕಲಿಕೆಯ ಆರಂಭದ ದಿನಗಳು

ಗಂಗೂಬಾಯಿ ಅವರಿಗೆ ತಾಳದ ಮೇಲೆ ಇನ್ನೂ ಹಿಡಿತ ಸಿಕ್ಕಿರಲಿಲ್ಲ. ತಾಳ ಮತ್ತು ಸ್ವರದ ತಿಳುವಳಿಕೆಯಿದ್ದ ತಾಯಿ ಅಂಬಾಬಾಯಿ ಮಗಳು ಹಾಡುವಾಗ ಬೆನ್ನು ತಟ್ಟುತ್ತ ತಾಳ ಹಿಡಿಯುತ್ತಿದ್ದರು. ಒಮ್ಮೆ ಕೃಷ್ಣಾಚಾರ್ಯರಲ್ಲಿ ಸಹಜವಾಗಿ ಕೇಳಿಕೊಂಡರು 'ಗಂಗೂನ ತಾಳ ಕಚ್ಚಾ ಅದ, ಸ್ವಲ್ಪ ಸುಧಾರ್‍ಸಬೇಕು' ಎಂದು. ಇದರಿಂದ ತಮಗೆ ಅವಮಾನವಾಯಿತು ಎಂದುಕೊಂಡ ಗುರುಗಳು, ಸಿಟ್ಟಿಗೆದ್ದು ಗಂಗೂಬಾಯಿಯವರ ಸಂಗೀತಪಾಠ ನಿಲ್ಲಿಸಿದರು. ಕಾರಣ ಕೇಳಿದಾಗ 'ಒಂದು ವರ್ಷದ ಗುರುದಕ್ಷಿಣೆ ಎಂದು ೧೨೦ ರೂಪಾಯಿ ಈಗಲೇ ಕೊಡಬೇಕು' ಎಂದರು. ಅಷ್ಟು ದೊಡ್ಡಮೊತ್ತದ ಹಣವನ್ನು ಆಕೆ ಕೊಟ್ಟಾರಾದರೂ ಹೇಗೆ? ದಾರಿ ಕಾಣದ ಅಂಬಾಬಾಯಿ ತನ್ನ ಕೈಲಿದ್ದ ಐದು ತೊಲೆ ತೂಕದ ಬಂಗಾರದ ಬಳೆಗಳನ್ನು ಮಾರಿ ಬಂದ ಒಂದು ನೂರು ರೂಪಾಯಿ ನೀಡಿ, ಉಳಿದ ಮೊತ್ತವನ್ನು ನೀಡುವುದಾಗಿ ಹೇಳಿದರೂ ಹುಲಗೂರು ಕೃಷ್ಣಾಚಾರ್ಯರು ಕೇಳಲಿಲ್ಲ. ಗಂಗೂಬಾಯಿ ಅವರ ಸಂಗೀತ ಶಿಕ್ಷಣ ನಿಂತಂತಾಯಿತು.

ಮತ್ತೆ ಹುಡುಕಾಟ

ಈ ಬಾರಿಯೂ ಗಂಗೂಬಾಯಿ ಅವರ ಸಹಾಯಕ್ಕೆ ಬಂದವರು ದತ್ತೋಪಂತ ದೇಸಾಯಿ ಅವರೇ. ಗಂಗೂಬಾಯಿ ಪ್ರತಿಭಾವಂತೆ ಎಂಬುದು ಅವರಿಗೆ ಈಗಾಗಲೇ ಮನವರಿಕೆ ಆಗಿತ್ತು. ಅದೃಷ್ಟಕ್ಕೆ ರಾಮಭಾವು ಕುಂದಗೋಳಕರ ಯಾನೆ ಸವಾಯಿ ಗಂಧರ್ವ ಅವರಲ್ಲಿ ವಿಶೇಷ ಸ್ನೇಹವೂ ಇತ್ತು. ರಾಮಭಾವು ಕುಂದಗೋಳಕರ ಅವರು ಅಬ್ದುಲ್ ಕರೀಂ ಖಾನರ ಶಿಷ್ಯತ್ವ ಪಡೆಯುವಲ್ಲಿಯೂ ದತ್ತೋಪಂತರು ಮತ್ತು ಅವರ ಕುಟುಂಬದ ಪಾತ್ರ ಬಹಳ ಮಹತ್ವದ್ದು. ಒಟ್ಟಾರೆಯಾಗಿ ಇಬ್ಬರಲ್ಲಿಯೂ ಆತ್ಮೀಯತೆ, ಸಲುಗೆ ಇತ್ತು. ಈ ವೇಳೆಗಾಗಲೇ ರಾಮಭಾವು ಗಾಯಕ– ನಟರಾಗಿ ಪ್ರಖ್ಯಾತರಾಗಿದ್ದರು.

ಅವರಿಂದ ಗಂಗೂಬಾಯಿಗೆ ತಾಲೀಮು ಸಿಗಲಿ ಎಂಬ ಆಸೆಯಿಂದ ದತ್ತೋಪಂತರು ಗಂಗೂಬಾಯಿ ಮತ್ತು ಅಂಬಾಬಾಯಿ ಅವರನ್ನು ಸವಾಯಿ ಗಂಧರ್ವರಿಗೆ ಪರಿಚಯಿಸಿದರಾದರೂ, ಸವಾಯಿ ಗಂಧರ್ವರು ಪಾಠ ಹೇಳಲು ಒಪ್ಪಲಿಲ್ಲ. ಹೀರಾಬಾಯಿ ಬರೋಡೇಕರ ಅವರ ನಾಟಕ ಮಂಡಳಿಯಲ್ಲಿ ಕೆಲಸ ಮಾಡುತ್ತಿದ್ದ ಅವರು ನಾಟಕ ಪ್ರದರ್ಶನಕ್ಕಾಗಿ ಸದಾ ತಿರುಗಾಟದಲ್ಲಿ ಇರುತ್ತಿದ್ದರು. ಸ್ವತಃ ಗುರುಕುಲ ಪದ್ಧತಿಯಲ್ಲಿ ಸಂಗೀತ ಕಲಿತಿದ್ದರು. ತಿರುಗಾಟದ ಮಧ್ಯೆ ಪಾಠ ಮತ್ತು ಕಲಿಕೆ ಸಮರ್ಪಕವಾಗಲಿಕ್ಕಿಲ್ಲ. ಹಾಗಾಗಿ 'ಹೇಗೆ ಕಲಿಸಲು ಸಾಧ್ಯ? ಬೇಡ' ಎಂದಿದ್ದರು. ಆದರೆ ದತ್ತೋಪಂತರು ಬಿಡಬೇಕಲ್ಲ. ಗೆಳೆಯನ ಬೆನ್ನು ಹತ್ತಿದರು. ಅಂತೂ ಸವಾಯಿ ಗಂಧರ್ವರು ತಾವು ಹುಬ್ಬಳ್ಳಿಯಲ್ಲಿ ಇದ್ದಷ್ಟು ದಿನ ಗಂಗೂಬಾಯಿ ಅವರಿಗೆ ಕಲಿಸುವುದು; ಮತ್ತು ಅವರು ತಿರುಗಾಟದಲ್ಲಿದ್ದಾಗ, ದತ್ತೋಪಂತರು, ಅಂಬಾಬಾಯಿ ಮತ್ತು ಅವರ ತಮ್ಮ ರಾಮಣ್ಣ, ಕಲಿತದ್ದನ್ನು ಗಂಗೂಬಾಯಿ ಅವರಿಗೆ ರಿಯಾಜ್ (ಅಭ್ಯಾಸ) ಮಾಡಿಸಬೇಕು ಎಂಬ ಕಟ್ಟುನಿಟ್ಟಿನೊಂದಿಗೆ ಸಂಗೀತಪಾಠ ಮತ್ತೆ ಆರಂಭವಾಯಿತು. ಗಂಗೂಬಾಯಿ ಅವರು ಗಾಯಕಿಯಾಗಿ ರೂಪುಗೊಳ್ಳುವಲ್ಲಿ ಅಂಬಾಬಾಯಿ, ಸೋದರಮಾವ ರಾಮಣ್ಣ ಮತ್ತು ದತ್ತೋಪಂತರ ಪಾತ್ರ ಬಹಳ ಮಹತ್ವದ್ದು. ಸಂಗೀತ ಕಲಿಕೆ, ರಿಯಾಜ್ ಮತ್ತೆ ಕುಟುಂಬ ನಿರ್ವಹಣೆ ಹೀಗೆ ಅಗತ್ಯ ಎನಿಸಿದಾಗೆಲ್ಲ ಗಂಗೂಬಾಯಿ ಅವರಿಗೆ ಈ ಮೂವರು ನೀಡಿದ ಒತ್ತಾಸೆಯನ್ನು ತುಲನೆ ಮಾಡಲು ಸಾಧ್ಯವೇ ಇಲ್ಲ.

ಸವಾಯಿ ಗಂಧರ್ವರ ಶಿಷ್ಯತ್ವ

ದತ್ತೋಪಂತರ ಒತ್ತಾಯಕ್ಕೆ ಮಣಿದು ಗಂಗೂಬಾಯಿ ಅವರಿಗೆ ಸಂಗೀತ ಕಲಿಸಲು ಸವಾಯಿ ಗಂಧರ್ವರು ಒಪ್ಪಿಕೊಂಡ ಮೇಲೆ ಅಂಬಾಬಾಯಿ ಅವರ ಮನೆಯಲ್ಲೇ ಶಾಸ್ತ್ರೋಕ್ತವಾಗಿ 'ಗಂಡಾ ಬಂಧನ' ನಡೆಯಿತು. ಕುಂದಗೋಳದಲ್ಲಿ ಗುರುಗಳ ಮನೆಯಲ್ಲಿ ನಡೆದ ಸಮಾರಂಭದಲ್ಲಿ ೧೦೦೦ ರೂಪಾಯಿ ಗುರುದಕ್ಷಿಣೆಯನ್ನೂ ನೀಡಿ ಗುರುಗಳನ್ನು ಗೌರವಿಸಿದ ನಂತರ ಅಧಿಕೃತ ಪಾಠ ಯಮನ್ ರಾಗದ 'ಗುರು ಬಿನ ಕೈಸೆ ಗುನಗಾವೆ' ಎಂಬ ಬಂದಿಶ್‌ನೊಂದಿಗೆ ಶುರುವಾಯಿತು. ಅಲ್ಲಿಂದ ಮುಂದೆ ಗುರುಗಳು ಹುಬ್ಬಳ್ಳಿಗೆ ಬಂದಾಗಲೆಲ್ಲ ಸಂಗೀತ ಪಾಠ. ಉಳಿದ ಅವಧಿಯಲ್ಲಿ ದತ್ತೋಪಂತರು ಮತ್ತು ಸೋದರ ಮಾವ ರಾಮಣ್ಣ ಗುರುಗಳಾಗುತ್ತಿದ್ದರು.

ಸವಾಯಿ ಗಂಧರ್ವರು ಕಲಿಸುವಲ್ಲಿ ಬಹಳ ಕಟ್ಟುನಿಟ್ಟಿನವರು. ದಿನಾ ಬೆಳಿಗ್ಗೆ ನಸುಕಿನಲ್ಲೆದ್ದು 'ಖರಜ್' ಸಾಧನೆ ಮಾಡಬೇಕು. ವಿವಿಧ ಪಲ್ಟಾಗಳನ್ನು ಒಂದೇ ಉಸಿರಿನಲ್ಲಿ ಆರೋಹ ಮತ್ತು ಅವರೋಹ ಎರಡನ್ನೂ ಹಾಡುವುದು. ಒಂದು ಸ್ವರ ಸಂಗತಿಯನ್ನು ಅವರು ಕಲಿಸಿದರೆಂದರೆ ಅದು ಪರಿಪೂರ್ಣವಾಗಿ, ಅವರು ಹೇಳಿದ ಹಾಗೆಯೇ

ಬರಬೇಕು. ಅಲ್ಲಿಯವರೆಗೆ ತಿಂಗಳಾದರೂ, ಮುಂದಿನ ವಿಷಯ ಎತ್ತಿಕೊಳ್ಳುತ್ತಿರಲಿಲ್ಲ. ಹಾಡಿದ್ದನ್ನೇ ಹಾಡಿ ಹಾಡಿ ಬೇಸರ ಬಂದರೂ ಏನೂ ಅನ್ನುವಂತಿರಲಿಲ್ಲ. ಇದೇ ಕ್ರಮದಲ್ಲಿ ಮೊದಲು ಯಮನ್, ನಂತರ ಪೂರಿಯಾ ಮತ್ತು ಪೂರಿಯಾ ಧನಾಶ್ರೀ ರಾಗಗಳನ್ನು ಕಲಿಸಿದರು.

ಸವಾಯಿ ಗಂಧರ್ವರು ನಾಟಕಗಳ ಪ್ರದರ್ಶನಕ್ಕಾಗಿ ಹೋದರೆಂದರೆ ತಿಂಗಳುಗಟ್ಟಲೆ ಹುಬ್ಬಳ್ಳಿಗಾಗಲೀ ಕುಂದಗೋಳಕ್ಕಾಗಲೀ ಬರುತ್ತಿರಲಿಲ್ಲ. ಆ ಅವಧಿಯಲ್ಲಿ ಮುಂಚೆ ಅವರು ಪಾಠ ಮಾಡಿದ್ದನ್ನು ಪ್ರತಿದಿನ ತಪ್ಪದೇ ಗಂಗೂಬಾಯಿ ಅವರಿಗೆ ರಿಯಾಜ್ ಮಾಡಿಸುತ್ತಿದ್ದವರು ರಾಮಣ್ಣ, ಅಂಬಾಬಾಯಿ ಮತ್ತು ದತ್ತೋಪಂತರು. ದತ್ತೋಪಂತರು ವಿವಿಧ ಪಲ್ಟಾಗಳನ್ನು ಅಭ್ಯಾಸ ಮಾಡಿಸಿದರೆ, ರಾಮಣ್ಣನವರು ಅವನ್ನು ಒಂದೇ ಉಸಿರಿನಲ್ಲಿ ಹೇಳುವಂತೆ ಪ್ರೋತ್ಸಾಹಿಸುತ್ತಿದ್ದರು. ಹಾಡಿ – ಹಾಡಿ ಗಂಗೂಬಾಯಿ ಬೇಜಾರು ಮಾಡಿಕೊಂಡರೆ – ಸ್ವರ ಸಿದ್ಧಿಯಾಗಲು ಈ ರೀತಿಯ ತಾಲೀಮು ಅಗತ್ಯ ಎಂಬ ತಾಯಿಯ ಸಾಂತ್ವನ ಇದ್ದೇ ಇತ್ತು.

ಸವಾಯಿ ಗಂಧರ್ವರು ಹುಬ್ಬಳ್ಳಿಯಲ್ಲಿ ಇದ್ದಾಗ ಅವರ ನಾಟ್ಯ ಸಂಗೀತದ ಅಭ್ಯಾಸಕ್ಕಾಗಿ ಅಂಬಾಬಾಯಿ ಅವರು ತಮ್ಮ ಮನೆಗೆ ಆಹ್ವಾನಿಸುತ್ತಿದ್ದರು. ಅವರು ಹಾಡುತ್ತಿದ್ದ ಹಾಡುಗಳ ಸ್ವರಲಿಪಿಯನ್ನು ಬರೆದಿಟ್ಟುಕೊಂಡು, ಮಗಳಿಗೆ ಅದನ್ನೇ ಕಲಿಸುತ್ತಿದ್ದರು. ಆಕೆ ವೇಗವಾಗಿ ಮತ್ತು ನಿಖರವಾಗಿ ಸ್ವರಗಳನ್ನು ಲಿಪಿಬದ್ಧ ಮಾಡುತ್ತಿದ್ದರು ಎಂದು ಗಂಗೂಬಾಯಿ ತಮ್ಮ ಆತ್ಮಕಥನ 'ನನ್ನ ಬದುಕಿನ ಹಾಡು'ನಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅಬ್ದುಲ್‌ಕರೀಂ ಖಾನರು ಹಾಡುವಾಗಲೂ ಅಂಬಾಬಾಯಿ ಈ ರೀತಿ ಬರೆದುಕೊಳ್ಳುತ್ತಿದ್ದರಂತೆ. ಅವರು ನಿಖರವಾಗಿ ಸ್ವರಗಳನ್ನು ಬರೆಯುತ್ತಿದ್ದು ಖಾನ್‌ಸಾಹೇಬರಿಗೂ ಮೆಚ್ಚುಗೆಯ ವಿಷಯವಾಗಿತ್ತು ಎಂದು ಗಂಗೂಬಾಯಿ ಜ್ಞಾಪಿಸಿಕೊಂಡಿದ್ದಾರೆ. ಸವಾಯಿ ಗಂಧರ್ವ ಶಾಸ್ತ್ರೀಯ ಸಂಗೀತ ಕಛೇರಿಗಳಲ್ಲೂ ಅಂಬಾಬಾಯಿ ಇದೇ ರೀತಿ 'ನೋಟ್ಸ್' ಮಾಡಿಟ್ಟುಕೊಂಡಿದ್ದು, ಗಂಗೂಬಾಯಿ ಅವರ ಸಂಗೀತ ಕಲಿಕೆಗೆ ಬಹಳಷ್ಟು ಸಹಾಯವಾಯಿತು. ಮುಂದೆ ೧೯೩೭ರಲ್ಲಿ ಸವಾಯಿ ಗಂಧರ್ವರು ನಾಟಕ ಕಂಪನಿಯನ್ನು ಬಿಟ್ಟು ಕುಂದಗೋಳಕ್ಕೆ ಬಂದು ನೆಲೆಸುವವರೆಗೂ ಇದೇ ಕ್ರಮದಲ್ಲಿ ಗಂಗೂಬಾಯಿ ಅವರ ಸಂಗೀತ ಶಿಕ್ಷಣ ನಡೆಯಿತು.

ಮೊದಲೇ ಹೇಳಿದಂತೆ, ಅಂಬಾಬಾಯಿ ಅವರ ಮನೆಯ ಆರ್ಥಿಕ ಸ್ಥಿತಿ ಹೇಳಿಕೊಳ್ಳುವಂತಿರಲಿಲ್ಲ. ಸಂಗೀತವನ್ನು ಬಿಟ್ಟರೆ ಬೇರಾವ ಉಪ ಕಸುಬುಗಳೂ ತಾಯಿ–ಮಗಳಿಗೆ ಗೊತ್ತಿರಲಿಲ್ಲ. ಹೀಗಾಗಿ ಕಾರ್ಯಕ್ರಮಗಳಲ್ಲಿ ಹಾಡುವುದು ಪ್ರಮುಖ ಆದಾಯ ಮೂಲವಾಗಿ ಪರಿಣಮಿಸಿತ್ತು. ವಯಸ್ಸನ್ನು ಮೀರಿದ ಸಾಧನೆ ಇದ್ದುದರ ಪರಿಣಾಮ ಕಛೇರಿಗಳು ಕಳೆಗಟ್ಟುತ್ತಿದ್ದವು. ಅಂಬಾಬಾಯಿ ತಮ್ಮ ಮನೆಯಲ್ಲಿ ಪ್ರತಿ ಶನಿವಾರ

ಬೈಠಕ್ ನಡೆಸುತ್ತಿದ್ದರು. ಅಲ್ಲಿ ಹಾಡಿದ ಅನುಭವವೂ ಇತ್ತು. ಹೀಗಾಗಿ ಕಲಿಯಲು ಆರಂಭಿಸಿದ ಕಡಿಮೆ ಅವಧಿಯಲ್ಲೇ ಗಂಗೂಬಾಯಿ ಸಾರ್ವಜನಿಕ ವೇದಿಕೆಯೇರಿದರು. ಇದೆಲ್ಲದರ ಪರಿಣಾಮವಾಗಿ ೧೯೩೧ರಲ್ಲಿ ಮುಂಬೈನ ಗೊರೆಗಾಂವ್‌ನಲ್ಲಿ ಸಂಗೀತ ಕ್ಷೇತ್ರದ ಅನೇಕ ಗಣ್ಯರ ಸಮ್ಮುಖದಲ್ಲಿ ಮೊದಲ ಸಂಗೀತ ಕಛೇರಿ ನಡೆಯಿತು.

ವಿವಾಹ

ಗಂಗೂಬಾಯಿ ಅವರ ಸಂಗೀತವನ್ನು ಕೇಳಿ ಮೆಚ್ಚಿದ ವಕೀಲರಾದ ಗುರುರಾವ್ ಕೌಲಗಿ ಅವರೊಂದಿಗೆ ೧೯೨೯ರಲ್ಲಿ ಮದುವೆಯಾಯಿತು. ಆಗ ಗಂಗೂಬಾಯಿ ಅವರಿಗೆ ಇನ್ನೂ ಹದಿನಾರು ವರ್ಷ ಮಾತ್ರ. ಮದುವೆ ಅಂಬಾಬಾಯಿ ಅವರ ಮನೆಯಲ್ಲಿಯೇ ನಡೆಯಿತು. ಸಂಗೀತ ಪ್ರಿಯರಾಗಿದ್ದ ಅವರು ಮದುವೆಯ ನಂತರವೂ ಗಂಗೂಬಾಯಿ ಅವರು ತಾಯಿಯ ಜತೆಯಿದ್ದು ಸಂಗೀತ ಕಲಿಕೆ – ಸಾಧನೆ ಮುಂದುವರಿಸಲು ಸಮ್ಮತಿಸಿದ್ದರು. ತಂದೆ ಚಿಕ್ಕುರಾವ್ ಮತ್ತು ತಾಯಿ ಅಂಬಾಬಾಯಿ ಇಬ್ಬರಿಗೂ ಇದು ಸಂತಸದ ಸಂಗತಿಯೇ ಆಗಿತ್ತು. ಕೌಲಗಿ ಅವರಿಗೆ ಆ ಹೊತ್ತಿಗಾಗಲೇ ಮದುವೆಯಾಗಿ ಅವರು ಹೆಂಡತಿಯನ್ನು ಕಳೆದುಕೊಂಡಿದ್ದರು. ಗಂಗೂಬಾಯಿ ಅವರನ್ನು ಮದುವೆಯಾದ ಕೆಲ ವರ್ಷಗಳ ನಂತರ ತಮ್ಮ ಅಕ್ಕನ ಮಗಳನ್ನೇ ಮದುವೆಯಾಗುವಂತೆ ಕೌಲಗಿ ಅವರ ತಂದೆ ತಾಯಿ ಒತ್ತಾಯಿಸಿದಾಗ, ಕೌಲಗಿ ಅವರ ಅಕ್ಕನ ಮಗಳನ್ನು ಮದುವೆಯಾಗುವಂತೆ ತಾವೇ ಮನವೊಲಿಸಿದ್ದಾಗಿ ಗಂಗೂಬಾಯಿ ಅವರು 'ನನ್ನ ಬದುಕಿನ ಹಾಡು'ನಲ್ಲಿ ಹೇಳಿದ್ದಾರೆ. ಅವರ ಈ ಔದಾರ್ಯದಿಂದಾಗಿ ಕೌಲಗಿ ಅವರ ತಂದೆ ತಾಯಿ ಗಂಗೂಬಾಯಿ ಅವರನ್ನು ಪ್ರೀತಿ ಆದರಗಳಿಂದ ಕಾಣುವಂತಾಯಿತು. ಔದಾರ್ಯ ಗಂಗೂಬಾಯಿ ಅವರ ಹುಟ್ಟುಗುಣವಿರಬೇಕು. ಅವರ ಬದುಕಿನುದ್ದಕ್ಕೂ ಇದೇ ರೀತಿಯ ಔದಾರ್ಯ ಮತ್ತು ದೊಡ್ಡಗುಣವನ್ನು ಉಳಿಸಿಕೊಂಡು ಬಂದರು. ಮದುವೆ ಅಂಬಾಬಾಯಿ ಅವರ ಮನೆಯಲ್ಲಿಯೇ ನಡೆಯಿತು. ಅವರ ಸಂಪ್ರದಾಯದಂತೆ ಹಸೆಮಣೆಯ ಮೇಲೆ ತಂಬೂರಿಯನ್ನೂ ಇಡಲಾಗಿತ್ತು ಎಂದು 'ಗಂಗಾವತರಣ' ಬರೆದ ದಮಯಂತಿ ನರೇಗಲ್ ದಾಖಲಿಸಿದ್ದಾರೆ. ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಅನುಕೂಲಸ್ಥರು ಎರಡು ಸಂಸಾರ ಹೊಂದಿರುವುದು ಅಪರೂಪವಾಗಲೀ, ಅಪರಾಧವಾಗಲೀ ಆಗಿರಲಿಲ್ಲ. ಅದೇ ರೀತಿ ಕೌಲಗಿ ಅವರ ಎರಡೂ ಕುಟುಂಬಗಳು ಪರಸ್ಪರ ಗೌರವದಿಂದಲೇ ನಡೆದುಕೊಂಡವು.

ತಾಯಿಯ ಸಾವು

ಮದುವೆಯಾದ ಒಂದು ವರ್ಷದಲ್ಲೇ ಮಗಳು ಕೃಷ್ಣಾ, ಗಂಗೂಬಾಯಿ ಅವರ

ಮಡಿಲು ತುಂಬಿದಳು. ಅದಾಗ ಎರಡನೇ ಬಾರಿ ಗಂಗೂಬಾಯಿ ತಾಯಿಯಾಗಲಿದ್ದರು. ಮಗಳ ಬಾಣಂತನ ಮಾಡುವ ಸಂಭ್ರಮದಲ್ಲಿದ್ದ ಅಂಬಾಬಾಯಿಗೆ ಜವರಾಯ ಕಾದಿದ್ದನೆಂಬ ಅಂದಾಜೂ ಇರಲಿಲ್ಲ. ಆಗಾಗ ಕಾಡುತ್ತಿದ್ದ ಹೊಟ್ಟೆನೋವಿಗೆ ಶಸ್ತ್ರಚಿಕಿತ್ಸೆಯೇ ದಾರಿ ಎಂದು ವೈದ್ಯರು ಹೇಳಿದ್ದರು. ಇನ್ನು ಆರು ತಿಂಗಳವರೆಗೆ ತಡೆಯಬಹುದಿತ್ತು. ಆದರೆ, ಮಗಳ ಹೆರಿಗೆ ವೇಳೆಗೆ ತಾನು ಸಂಪೂರ್ಣ ಚೇತರಿಸಿಕೊಳ್ಳುವ ಆಸೆಯಿಂದ ಅಂಬಾಬಾಯಿ ಆದಷ್ಟು ಬೇಗ ಶಸ್ತ್ರಚಿಕಿತ್ಸೆಗೆ ಒಳಗಾಗಲು ಸಿದ್ಧರಾದರು. ಶಸ್ತ್ರಚಿಕಿತ್ಸೆಯೇನೋ ಯಶಸ್ವಿಯಾಯಿತು. ಆದರೆ ಆಸ್ಪತ್ರೆಯಲ್ಲಿರುವಾಗಲೇ ಹೊಲಿಗೆ ಬಿಚ್ಚಿ, ವಿಪರೀತ ರಕ್ತಸ್ರಾವವಾಗಿ ಅಂಬಾಬಾಯಿ ಮರಳಿಬಾರದ ಲೋಕಕ್ಕೆ ಹೋಗಿ ಬಿಟ್ಟರು (೧೯೩೨). ಆಗ ಅವರಿಗೆ ಕೇವಲ ೩೫ ವರ್ಷಮಾತ್ರ.

ಗಂಗೂಬಾಯಿ ಅವರಿಗೆ ಆಕೆ ಕೇವಲ ತಾಯಿ ಆಗಿರಲಿಲ್ಲ. ಗುರು, ಸ್ನೇಹಿತೆ, ಬಂಧು ಎಲ್ಲವೂ ಆಗಿದ್ದರು. ಇಲ್ಲಿಯವರೆಗೆ ಕೈಹಿಡಿದು ನಡೆಸಿದ್ದ ತಾಯಿ ಇಲ್ಲವಾಗಿದ್ದು ಗಂಗೂಬಾಯಿ ಅವರ ಸ್ಥೈರ್ಯವನ್ನೇ ಅಲುಗಾಡಿಸಿಬಿಟ್ಟಿತು. ಹಾಡಲು ಅವರಲ್ಲಿ ಸ್ವರವೇ ಹೊರಡದ ಸ್ಥಿತಿಯುಂಟಾಗಿ ತಾನ್‌ಪುರಾ ನೋಡಿದರೆ ತಾಯಿಯ ನೆನಪಾಗಿ ಕಣ್ಣೀರ ಧಾರೆಯೇ ಬರುತ್ತಿತ್ತು ಹೊರತಾಗಿ ಸ್ವರಮಾಲೆ ಕಟ್ಟಲು ಸಾಧ್ಯವಾಗುತ್ತಿರಲಿಲ್ಲ.

ಅಂಬಾಬಾಯಿ ಇರುವವರೆಗೆ ಸಂಸಾರದ ದೈನಂದಿನ ಕಷ್ಟ–ಸುಖಗಳನ್ನೆಲ್ಲ ಆಕೆಯೇ ನಿಭಾಯಿಸುತ್ತಿದ್ದರು. ಆಕೆ ತೀರಿಕೊಂಡ ಮೇಲೆ ಸಂಸಾರದ ಜವಾಬ್ದಾರಿ ಗಂಗೂಬಾಯಿ ಅವರ ಹೆಗಲೇರಿತು. ಇಬ್ಬರು ಸೋದರ ಮಾವಂದಿರು ಮತ್ತು ಅವರ ಸಂಸಾರ, ತನ್ನ ಎರಡು ಪುಟ್ಟ ಮಕ್ಕಳು ಮತ್ತು ಅಜ್ಜಿ ಇವರೆಲ್ಲರನ್ನು ಸಾಕಬೇಕಾದ ಹೊಣೆ ಗಂಗೂಬಾಯಿ ಅವರಿಗೆ ಬಂತು. ಜೀವನದ ಸಲುವಾಗಿ ಅವರು ಹಾಡಲೇ ಬೇಕಿತ್ತು–ಕಛೇರಿ ನೀಡಲೇ ಬೇಕಾಗಿತ್ತು. ಗಂಗೂಬಾಯಿ ಅವರೊ ತಾಯಿಯನ್ನು ಕಳೆದುಕೊಂಡು ಕಂಗಾಲಾಗಿ ಕುಳಿತುಬಿಟ್ಟಿದ್ದರು. ಅವರನ್ನು ದುಃಖದ ಚಿಪ್ಪಿನಿಂದ ಹೊರತರಲೇ ಬೇಕಾಗಿತ್ತು. ಅದಕ್ಕಾಗಿ ರಾಮಣ್ಣ ಮತ್ತು ದತ್ತೋಪಂತರು ಮಾಡಿದ ಪ್ರಯತ್ನ ನಿಜಕ್ಕೂ ಪ್ರತಿಭಾವಂತರ ಪಾಲಕರೆಲ್ಲರಿಗೂ ಮಾರ್ಗದರ್ಶಿ ಎನಿಸುವಂತಿದೆ.

ಪ್ರತಿ ದಿನ ದತ್ತೋಪಂತರು ತಂಬೂರಿ ಶ್ರುತಿ ಮಾಡಿಕೊಂಡು ಮೀಟುತ್ತ ಕುಳಿತಿರುತ್ತಿದ್ದರು. ರಾಮಣ್ಣ ತಬಲಾವನ್ನು ಶ್ರುತಿ ಮಾಡಿಕೊಂಡು ಕುಳಿತಿರುವುದು. ತಾನ್‌ಪುರಾದ ಧ್ವನಿ ಕೇಳಿಯಾದರೂ ಗಂಗೂಬಾಯಿ ಹಾಡಲಿ ಎಂಬುದು ಅವರ ಆಶಯ. ಪ್ರತಿ ಶನಿವಾರದ ಬೈಠಕ್ ಅನ್ನೂ ಹಾಗೆಯೇ ಮುಂದುವರಿಸಿದರು. ಗಂಗೂಬಾಯಿ ಹಾಡಲೀ ಬಿಡಲಿ ಬೈಠಕ್‌ಗೆ ಬರುತ್ತಿದ್ದ ಸಹೃದಯಿ ಶ್ರೋತೃಗಳು ಸಂಭಾವನೆಯನ್ನು ಮಾತ್ರ ತಪ್ಪದೇ ಕೊಡುತ್ತಿದ್ದರಂತೆ. ಹೀಗಾಗಿ ಗಂಗೂಬಾಯಿ ಒತ್ತಾಯಪೂರ್ವಕವಾಗಿ ತಮ್ಮನ್ನು ತಾವು ಹಾಡಿನಲ್ಲಿ ಮತ್ತೆ ತೊಡಗಿಸಿಕೊಳ್ಳಬೇಕಾಯಿತು. ಆದರೆ ವೇದಿಕೆಯ

ಮೇಲೆ ಹಾಡುವಾಗಲೂ ತಾಯಿಯ ಅಸ್ತಿತ್ವ ಅವರೊಂದಿಗೇ ಇರುವಂತೆ ಭಾಸವಾಗುತ್ತಿತ್ತು. ಕಲ್ಕತ್ತಾದ ಸಂಗೀತ ಸಮ್ಮೇಳನದಲ್ಲಿ ಅಭೂತಪೂರ್ವ ಯಶಸ್ಸು ಗಳಿಸಿದ ಕ್ಷಣದಲ್ಲೂ ಅವರಿಗೇ ತಾಯಿಯದೇ ನೆನಪು. ಯಾರೊ ಭುಜದ ಮೇಲೆ ಕೈ ಇಟ್ಟಂತೆ ಭಾಸವಾಗಿ ನೋಡಿದರೆ, ಅಂದಿನ ಪ್ರಸಿದ್ಧ ಹಿನ್ನೆಲೆ ಗಾಯಕ-ಸಂಗೀತಗಾರ ಕೆ.ಎಲ್. ಸೈಗಲ್: 'ಬಹುತ್ ಸುರೀಲಾ (ಬಹಳ ಮಧುರವಾಗಿ ಹಾಡುತ್ತೀರಿ)' ಎಂದು ಪ್ರಶಂಸಿಸಿದ್ದರು. ತಾಯಿ ತೀರಿಕೊಂಡು ವರ್ಷವಾಗುವುದರಲ್ಲೇ ತಂದೆಯೂ ತೀರಿಕೊಂಡರು. ಇದರಿಂದ ಗಂಗೂಬಾಯಿ ಅವರು ಮತ್ತಷ್ಟು ದುಃಖಿತರಾದರು ಮತ್ತು ದಿಕ್ಕುಗೆಟ್ಟಂತಾದರು.

ಎಚ್.ಎಂ.ವಿ. ಮತ್ತು ಆಕಾಶವಾಣಿ ಧ್ವನಿ ಮುದ್ರಣ

ಇದೇ ಸುಮಾರಿಗೆ ಅಂದರೆ ೧೯೩೨ರ ಅವಧಿಯಲ್ಲಿ ಹಿಸ್ ಮಾಸ್ಟರ್ಸ್ ವಾಯ್ಸ್ ಅಂದರೆ ಎಚ್. ಎಂ.ವಿ. ಕಂಪನಿಯವರು ಧ್ವನಿ ಮುದ್ರಿಸುವ ಸಲುವಾಗಿ ದೇಶಾದ್ಯಂತ ಸಂಗೀತ ಕಲಾವಿದರಿಗಾಗಿ ಹುಡುಕಾಟ ನಡೆಸಿದ್ದರು. (ಈಗ ಟಿ.ವಿ. ಚಾನೆಲ್ಲುಗಳು ರಿಯಾಲಿಟಿ ಶೊಗಾಗಿ ಆಡಿಶನ್ ನಡೆಸುತ್ತವಲ್ಲ ಹಾಗೆ.) ಹಾಗೆ ಹುಡುಕಿಕೊಂಡು ಹುಬ್ಬಳ್ಳಿ-ಧಾರವಾಡಕ್ಕೂ ಬಂದಿದ್ದರು. ಇಲ್ಲಿ ಅಂಬಾಬಾಯಿ ಮತ್ತು ಗಂಗೂಬಾಯಿ ಇಬ್ಬರ ಗಾಯನವನ್ನೂ ಧ್ವನಿ ಮುದ್ರಿಸುವ ನಿರ್ಧಾರ ಮಾಡಿ ಧ್ವನಿಮುದ್ರಣಕ್ಕಾಗಿ ಮುಂಬಯಿಗೆ ಬರುವಂತೆ ತಿಳಿಸಿದ್ದರು, ಒಪ್ಪಂದಕ್ಕೆ ಸಹಿ ಹಾಕಿಯೂ ಆಗಿತ್ತು. ದುರದೃಷ್ಟವಶಾತ್ ಅಂಬಾಬಾಯಿ ಬದುಕಿರಲಿಲ್ಲ. ಧ್ವನಿಮುದ್ರಣಕ್ಕಾಗಿ ಗಂಗೂಬಾಯಿ ಹೋಗಲೇಬೇಕಾಗಿತ್ತು. ರಾಮಣ್ಣನವರ ಜತೆಗೂಡಿ ಮುಂಬಯಿಗೆ ಬಂದ ಗಂಗೂಬಾಯಿ ಅವರನ್ನು ಎಚ್.ಎಂ.ವಿ ಕಂಪನಿಯ ರೂಪ್‌ಜಿ ಎಂಬ ವ್ಯವಸ್ಥಾಪಕರು ಸ್ವಾಗತಿಸಿ ಸ್ಟುಡಿಯೊಕ್ಕೆ ಕರೆದುಕೊಂಡು ಹೋದರು. ಗಂಗೂಬಾಯಿ ಅವರಂತೆ ದೇಶದ ವಿವಿಧ ಭಾಗಗಳಿಂದ ಬಂದಿದ್ದ ಕಲಾವಿದರನ್ನೆಲ್ಲ ಒಂದೇ ವಸತಿಗೃಹದಲ್ಲಿ ಇಳಿಸಲಾಗಿತ್ತು. ಅಂದಿನ ಕಾಲದಲ್ಲಿ ಮೂರು ನಿಮಿಷಗಳ ಧ್ವನಿ ಮುದ್ರಣ ಮಾತ್ರ ಸಾಧ್ಯವಾಗುತ್ತಿತ್ತು. ಅದನ್ನು ಧ್ವನಿ ಮುದ್ರಿಸಲು ಇಂಗ್ಲೆಂಡಿನಿಂದ ತಂತ್ರಜ್ಞರನ್ನು ಯಂತ್ರೋಪಕರಣಗಳ ಸಹಿತ ಕರೆಸಲಾಗಿತ್ತು.

ಪ್ರತಿ ಕಲಾವಿದರೂ ೧೨ ಹಾಡುಗಳನ್ನು ಧ್ವನಿ ಮುದ್ರಿಸಬೇಕಾಗಿತ್ತು. ರಾಗಗಳನ್ನು ಗಂಟೆಗಟ್ಟಲೆ ಹಾಡಿ ಅಭ್ಯಾಸವಾಗಿದ್ದ ಕಲಾವಿದರಿಗೆ ಈ ಮೂರು ನಿಮಿಷಕ್ಕೆ ಹಾಡು ಹೊಂದಿಸುವುದು ಕಷ್ಟವೇ ಆಗಿತ್ತು. ಜತೆಗೆ ಹನ್ನೆರಡು ಹಾಡುಗಳನ್ನು ಮೂರು ನಿಮಿಷಕ್ಕೆ ಸರಿಯಾಗುವಂತೆ ಹೊಂದಿಸುವ ಸವಾಲು ಬೇರೆ. ಒಂದೇ ಕಡೆ ವಸತಿ ಮಾಡಿದ್ದ ಕಲಾವಿದರೆಲ್ಲ ಪರಸ್ಪರ ತಾವು ಹಾಡಲಾಗದ ಹಾಡುಗಳನ್ನು ಇನ್ನೊಬ್ಬರಿಗೆ ನೀಡಿ ಅವರಿಂದ ತಾವು ಹಾಡಬಹುದು ಎನಿಸಿದ್ದನ್ನು ಪಡೆದುಕೊಂಡರು. ಹಾಗೆ

ಗಂಗೂಬಾಯಿ ಅವರು ಸುಹಾಘರಾಯ್ ರಾಗದಲ್ಲಿನ 'ಡಾರ ಡಾರ ಬೋಲೆ' ಎಂಬ ಹಾಡನ್ನು ಕಲಿತು ಧ್ವನಿ ಮುದ್ರಣ ಮಾಡಿಕೊಟ್ಟರು. ಮಿಯಾ ಮಲ್ಹಾರದಲ್ಲಿನ ಒಂದು ರಚನೆ ಅಲ್ಲದೇ ಅಂಬಾಬಾಯಿ ಕಲಿಸಿದ್ದ ಕರ್ನಾಟಕ ಶೈಲಿಯ ನಾಟಕುರಂಜಿ ಹಾಗೂ ಮಧ್ಯಮಾವತಿ ರಾಗದಲ್ಲಿ ಕೃತಿಗಳನ್ನೂ ಅವರು ಹಾಡಿದರು. ಇದರ ಜತೆಗೆ ಮಾಮಾ ವರೇಕರ್ ಅವರು ಕರ್ನಾಟಕ ಶೈಲಿಯನ್ನು ಆಧರಿಸಿ ಸಂಗೀತ ಸಂಯೋಜನೆ ಮಾಡಿದ್ದ ಮರಾಠಿ ಹಾಡುಗಳನ್ನು ಹಾಡಿದರು.

ಜಿ.ಎನ್. ಜೋಶಿ ಎಂಬ ಮರಾಠಿ ಗಾಯಕರು ಎಚ್.ಎಂ.ವಿ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದರು. ಅವರು ಇನ್ನೊಬ್ಬ ಗಾಯಕಿಯೊಂದಿಗೆ 'ಚಕಾಕೆ ಕೋರ ಚಂದ್ರಾಚೆ' ಎಂಬ ಹಾಡನ್ನು ಹಾಡಬೇಕಾಗಿತ್ತು. ಎಷ್ಟು ಪ್ರಯತ್ನ ಮಾಡಿದರೂ ಆ ಗಾಯಕಿಗೆ ಕಪ್ಪು ಐದರ ಪಟ್ಟಿಯಲ್ಲಿ ಜೋಶಿಯವರು ಹಾಡಿದ ನಂತರ ಎತ್ತಿಕೊಳ್ಳಲು ತಿಳಿಯುತ್ತಿರಲಿಲ್ಲ. ಅದನ್ನೇ ಮಾಡಿ ಮಾಡಿ ತಂತ್ರಜ್ಞರು, ಜತೆ ವಾದ್ಯಗಾರರು ಎಲ್ಲರಿಗೂ ರೋಸಿ ಹೋಗಿತ್ತು. ಜೋಶಿ ಅವರು ಗಂಗೂಬಾಯಿ ಅವರಲ್ಲಿ ಆ ಗಾಯಕಿಗೆ ಈ ಭಾಗವನ್ನು ಹಾಡಲು ಕಲಿಸುವಂತೆ ಕೇಳಿಕೊಂಡರು. ಆ ಕಲಾವಿದೆಯ ಭಾವನೆಗೆ ಧಕ್ಕೆ ಆಗಬಹುದೆಂದು ಗಂಗೂಬಾಯಿ ಮೊದಮೊದಲು ಒಪ್ಪಲಿಲ್ಲ. ಬಹಳ ಒತ್ತಾಯದ ಮೇರೆಗೆ ಜೋಶಿಯವರೊಡನೆ ಮೊದಲ ರಿಹರ್ಸಲ್‌ನಲ್ಲೇ ಸರಿಯಾಗಿ ಹಾಡಿದರು. ಧ್ವನಿಮುದ್ರಣದಲ್ಲೂ ನೀವೇ ಹಾಡಿ ಎಂದರು. ಗಂಗೂಬಾಯಿ ಒಪ್ಪಲಿಲ್ಲ; ಆ ಕಲಾವಿದೆಯ ಅವಕಾಶವನ್ನು ತಾನು ಕಸಿದಂತಾಗುತ್ತದೆ ಎಂಬುದು ಅವರ ವಾದವಾಗಿತ್ತು. ಕೊನೆಗೆ ಆ ಕಲಾವಿದೆಯೇ ಕೇಳಿಕೊಂಡರು. ಆ ಹಾಡು ಜೋಶಿ ಮತ್ತು ಗಂಗೂಬಾಯಿ ಅವರ ಧ್ವನಿಯಲ್ಲೇ ಧ್ವನಿಮುದ್ರಣವಾಗಿ ಮುಂದೆ ಮಹಾರಾಷ್ಟ್ರದಲ್ಲಿ ಜನಪ್ರಿಯವಾಯಿತು. ತನಗೊಂದು ಅವಕಾಶ ಸಿಕ್ಕಿದರೆ ಸಾಕು ಎಂದು ಇನ್ನೊಬ್ಬರ ಅವಕಾಶ ಕಸಿಯಲು ಹಿಂಜರಿಯದ ಕಲಾವಿದರಿರುವ ಲಲಿತಕಲಾ ಕ್ಷೇತ್ರದಲ್ಲಿ ಗಂಗೂಬಾಯಿ ಅವರ ನಡವಳಿಕೆ ಅಪರೂಪದ್ದು ಮತ್ತು ಅನುಕರಣೀಯ.

ಹೆಸರಿನ ಗೊಂದಲ

ವಿಚಿತ್ರವೆಂದರೆ, ಈ ಧ್ವನಿಮುದ್ರಣಗಳಲ್ಲಿ ಗಂಗೂಬಾಯಿ ಅವರ ಹೆಸರನ್ನು ಗಂಗೂಬಾಯಿ ಹುಬ್ಳೀಕರ್ ಎಂದು ಕಂಪನಿ ಮುದ್ರಿಸಿತ್ತು. ಗಂಗೂಬಾಯಿ ಅವರ ಸೋದರಮಾವ ಕೃಷ್ಣಪ್ಪ ಅವರಿಗೆ ಇದು ಸರಿ ಅನ್ನಿಸಲಿಲ್ಲ. ಆದ್ದರಿಂದ ಗಂಗೂಬಾಯಿ ಅವರು ಎರಡನೇ ಸಲ ಧ್ವನಿಮುದ್ರಣಕ್ಕೆ ಹೋದಾಗ ತಮ್ಮ ಹೆಸರನ್ನು ಗಂಗೂಬಾಯಿ ಹಾನಗಲ್ ಎಂದು ಹಾಕಲು ಕೇಳಿಕೊಂಡರು. ಆದರೆ ಕಂಪನಿಯವರು ಮಾರಾಟಕ್ಕೆ ತೊಂದರೆ ಆಗುತ್ತದೆ ಬೇಕಾದರೆ ಪೂರ್ತಿ ಹೆಸರನ್ನು ಬದಲಿಸೋಣ ಎಂದರು. ಎರಡನೆಯ

ಧ್ವನಿ ಮುದ್ರಣದಲ್ಲಿ ಹೀಗಾಗಿ ಅವರು ಗಾಂಧಾರಿ ಹಾನಗಲ್ ಆದರು. ಒಟ್ಟಿನಲ್ಲಿ ಮೊದಲ ಎರಡು ವರ್ಷ ಗಂಗೂಬಾಯಿ ಹಾನಗಲ್ ಅವರ ನಿಜವಾದ ಹೆಸರು ಯಾವ ಧ್ವನಿಮುದ್ರಿಕೆಯ ಮೇಲೂ ಅಚ್ಚಾಗಲಿಲ್ಲ!

ಮುಂದೆ ಆಕಾಶವಾಣಿಯ ಕಾರ್ಯಕ್ರಮಗಳಿಂದಾಗಿ ಅವರು ತಮ್ಮದೇ ಹೆಸರಿನಿಂದ ಗುರುತಿಸಿಕೊಳ್ಳುವಂತಾಯಿತು. ೧೯೩೮ರ ಸುಮಾರಿಗೆ ಮುಂಬಯಿಯಲ್ಲಿ ಆಕಾಶವಾಣಿ ಕೇಂದ್ರ ಆರಂಭವಾಗಿತ್ತು. ಅಲ್ಲಿಂದ ದೇಶದ ಅನೇಕ ಸಂಗೀತಗಾರರ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ಆಕಾಶವಾಣಿಗೆ ಹಾಡಲು ಧ್ವನಿ ಪರೀಕ್ಷೆ ಕಡ್ಡಾಯ. ಆದರೆ ಗಂಗೂಬಾಯಿ ಅವರ ಧ್ವನಿ ಪರೀಕ್ಷೆ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂದು ಎಚ್.ಎಂ.ವಿ. ಕಂಪನಿಯ ರೂಪ್‌ಜಿ ಅವರು ಆಕಾಶವಾಣಿಯ ಅಧಿಕಾರಿಗಳಿಗೆ ಹೇಳಿಬಿಟ್ಟಿದ್ದರಂತೆ.

ಆಗ ಕಾರ್ಯಕ್ರಮಗಳನ್ನು ಧ್ವನಿಮುದ್ರಿಸಿ ಪ್ರಸಾರ ಮಾಡುತ್ತಿರಲಿಲ್ಲ. ಎಲ್ಲ ನೇರಪ್ರಸಾರದ ಕಾರ್ಯಕ್ರಮಗಳಾಗಿದ್ದವು. ಇಂತಹ ಒಂದು ಕಾರ್ಯಕ್ರಮದಲ್ಲಿ ಖ್ಯಾತ ಗಾಯಕಿ ಹೀರಾಬಾಯಿ ಬರೋಡೆಕರ್ ಹಾಡಬೇಕಾಗಿತ್ತು. ಅವರಿಗೆ ಅನಾರೋಗ್ಯವಾಗಿ ಹಾಡಲು ಸಾಧ್ಯವಿರಲಿಲ್ಲ. ಆ ವೇಳೆಗೆ ಯಾರನ್ನಾದರೂ ಹಾಡಿಸಲೇ ಬೇಕಿತ್ತು. ಆಗ ಇನ್ನೊಂದು ಕಾರ್ಯಕ್ರಮದ ಸಲುವಾಗಿ ಮುಂಬಯಿಯಲ್ಲಿದ್ದ ಗಂಗೂಬಾಯಿ ಅವರನ್ನು ಕರೆದು ಹಾಡಲು ಹೇಳಿದರು. ಈ ಹುಡುಗಿ ಹೇಗೆ ಹಾಡುತ್ತಾಳೊ ಎಂಬ ಅಳುಕಿತ್ತೇನೊ? ಅವರ ಹೆಸರನ್ನು ಮೊದಲು ಹೇಳಿರಲಿಲ್ಲ. ಹಾಡು ಆರಂಭವಾದ ಕೆಲವೇ ಸಮಯಕ್ಕೆ ಆಕಾಶವಾಣಿ ಕೇಂದ್ರಕ್ಕೆ 'ಇವರು ಯಾರು?' ಎಂದು ವಿಚಾರಿಸಿ ಫೋನ್ ಕರೆಗಳು ಬರಲಾರಂಭಿಸಿದವು! ಕಾರ್ಯಕ್ರಮದ ನಂತರ ಹಾಡಿದವರು ಗಂಗೂಬಾಯಿ ಹಾನಗಲ್ ಎಂದು ಘೋಷಿಸಲಾಯಿತು. ಅಲ್ಲಿಂದ ಮುಂದೆ ಅವರು ಗಂಗೂಬಾಯಿ ಹಾನಗಲ್ ಆಗಿಯೇ ಗುರುತಿಸಿಕೊಳ್ಳಲು ಸಾಧ್ಯವಾಯಿತು.

ಮೊದಲ ಗ್ರಾಮಾಫೋನ್ ಧ್ವನಿಮುದ್ರಣಕ್ಕೆ ಎಚ್.ಎಂ.ವಿ. ಕಂಪನಿ ಯಾವ ಕಲಾವಿದರಿಗೂ ಸಂಭಾವನೆಯನ್ನು ನೀಡಲಿಲ್ಲ. ಅವರ ಊಟ, ವಸತಿಯನ್ನು ನೋಡಿಕೊಂಡು, ಮುಂಬಯಿ ದರ್ಶನದ ವ್ಯವಸ್ಥೆ ಮಾಡಲಾಗಿತ್ತು. ಅಂದಿನ ಸಂದರ್ಭದಲ್ಲಿ ಇವಿಷ್ಟರಿಂದಲೇ ಕಲಾವಿದರು ತೃಪ್ತರಾದರು! ಆಕಾಶವಾಣಿಗೆ ಹಾಡಲು ಶುರು ಮಾಡಿದ್ದು ಆರ್ಥಿಕ ಭದ್ರತೆಯನ್ನು ನೀಡಿತು. ಆಕಾಶವಾಣಿಗೆ ತಿಂಗಳಲ್ಲಿ ಎರಡು ಬಾರಿ ಹಾಡಬೇಕಾಗಿತ್ತು. ಮೊದಲ ಬಾರಿ ೫೦ ರೂಪಾಯಿ ಸಂಭಾವನೆ ದೊರೆತರೆ ನಂತರದ ದಿನಗಳಲ್ಲಿ ೭೫ ರೂಪಾಯಿ ದೊರೆತು ಅವರ ಆರ್ಥಿಕ ಸಮಸ್ಯೆ ಸ್ವಲ್ಪ ನಿಯಂತ್ರಣಕ್ಕೆ ಬಂದಂತಾಯಿತು.

ಆಕಾಶವಾಣಿಗೆ ಹಾಡುವುದೆಂದರೆ ಮೂರು ಬೈಠಕ್ಕುಗಳಲ್ಲಿ ಹಾಡಬೇಕಾಗಿತ್ತು. ಹಾಡುವ ರಾಗದ ಹೆಸರನ್ನು ಮೊದಲೇ ತಿಳಿಸಬೇಕಾಗಿತ್ತು. ಅಂದರೆ ಪ್ರತಿ ತಿಂಗಳಲ್ಲಿ

ಆರು ಬೈಠಕ್ಕುಗಳು– ಆರು ಪ್ರತ್ಯೇಕ ರಾಗಗಳನ್ನೇ ಹಾಡಬೇಕು. ಗುರುಗಳಲ್ಲಿ ನಿಯಮಿತ ಪಾಠ ಬೇರೆ ಸಾಧ್ಯವಾಗುತ್ತಿರಲಿಲ್ಲ. ಹುಬ್ಬಳ್ಳಿಯಿಂದ ಮುಂಬೈಗೆ ಪ್ರತಿ ಹದಿನೈದು ದಿನಕ್ಕೊಮ್ಮೆ ಹೋಗುವುದು. ಹೊಸ– ಹೊಸ ರಾಗಗಳನ್ನು ಅಭ್ಯಾಸ ಮಾಡಿಕೊಳ್ಳುವುದು– ಸಂಸಾರ ನಿರ್ವಹಣೆಯ ಜಂಜಾಟ– ಸಣ್ಣ ಮಕ್ಕಳು– ಒಂದೇ ಎರಡೇ. ಎಲ್ಲವನ್ನೂ ಅದು ಹೇಗೆ ಸರಿದೂಗಿಸಿದರೋ. ಗಂಗೂಬಾಯಿ ಅವರ ಪುಣ್ಯವೋ ಅಂಬಾಬಾಯಿ ಅವರ ಆಶೀರ್ವಾದವೋ; ಮನೆ ನಿರ್ವಹಣೆ ಮತ್ತು ಮಕ್ಕಳ ಪೋಷಣೆಯ ಜವಾಬ್ದಾರಿಯನ್ನು ರಾಮಣ್ಣನವರ ಪತ್ನಿ ಪ್ರೀತಿಯಿಂದ ನಿರ್ವಹಿಸಿದರು. ಈ ಬಗ್ಗೆ ಗಂಗೂಬಾಯಿ ಅವರ ಪುತ್ರ ಬಾಬುರಾವ್ ಹಾನಗಲ್ ಹೇಳುತ್ತಾರೆ –'ನಾವು ಆಕಿಗೇ (ರಾಮಣ್ಣನವರ ಪತ್ನಿ) ಅವ್ವಾ ಅಂತಿದ್ವಿ. ಅವ್ವಾಗ (ಗಂಗೂಬಾಯಿ ಅವರಿಗೆ) ಅಕ್ಕಾ ಅಂತಿದ್ವಿ'. ಇದೊಂದು ಮಾತು ಸಾಕು ಆಕೆ ಅದೆಂತ ವಾತ್ಸಲ್ಯಭರಿತೆ ಎಂಬುದನ್ನು ತೋರಿಸಲು.

ಹೊಸ ರಾಗಗಳನ್ನು ಅಭ್ಯಾಸ ಮಾಡಿಕೊಳ್ಳುವಲ್ಲಿ ದತ್ತೋಪಂತರು ಸದಾ ಬೆನ್ನಹಿಂದೇ ಇರುತ್ತಿದ್ದರು. ಇಂತಹುದೇ ಒಂದು ಸಂದರ್ಭದಲ್ಲಿ ಆಕಾಶವಾಣಿಯಲ್ಲಿ ರಾಗ– ಬಿಭಾಸ ಹಾಡಿದರು. ಸವಾಯಿ ಗಂಧರ್ವರು ಕಲಿಸಿರಲಿಲ್ಲ. ಭಾತ್ಖಂಡೇ ಪುಸ್ತಕ ನೋಡಿ ತಯಾರು ಮಾಡಿಕೊಂಡಿದ್ದರು. ಆಗ ಕುಂದಗೋಳದಲ್ಲಿ ವಿದ್ಯುತ್ ಇರಲಿಲ್ಲ. ರೇಡಿಯೊ ಎಲ್ಲರ ಮನೆಗಳಲ್ಲೂ ಇರುತ್ತಿರಲಿಲ್ಲ. ಹಾಗಾಗಿ ಗುರುಗಳು ಕೇಳಿರುವುದಿಲ್ಲ ಎಂದುಕೊಂಡಿದ್ದರು. ರೈಲಿನಲ್ಲಿ ವಾಪಸ್ ಬರುವಾಗ ಅದೇ ಬೋಗಿಯಲ್ಲಿ ಸವಾಯಿ ಗಂಧರ್ವರು–

'ಇನ್ನೇನು ಬೈಸಿಕೊಳ್ಳುವುದೇ ಗತಿ' ಎಂದುಕೊಳ್ಳುತ್ತಿದ್ದಂತೆಯೇ,

'ಮುಂಜಾನೆ ರೇಡಿಯೊದಾಗ ಯಾವ ರಾಗಾ ಹಾಡಿದಿ' ಕೇಳಿಯೇ ಬಿಟ್ಟರು.

'ಅದಕ್ಕ ನಮ್ಮ ಘರಾಣೆದಾಗ ಬಿಭಾಸ್ ಅಂತಾರೇನು? ನೀ ಏನಾರ ಹಾಡಿ ಬರ್ತಿ, ಮಂದಿ ಇಕಿ ಗುರು ಹಿಂಗೇನ ಕಲಿಸ್ಯಾನ ಅಂತ ನಂಗ ಹೆಸರಿಡ್ತಾರ'. ಅಂದವರೇ ರೈಲಿನಲ್ಲೇ ಬಿಭಾಸ್ ಕಲಿಸಲು ಶುರು ಮಾಡಿಬಿಟ್ಟರು. ಕಿರಾಣಾ ಘರಾಣೆಯಲ್ಲಿ ಬಿಭಾಸ್ ರಾಗದಲ್ಲಿ ಕೋಮಲ ಧೈವತ ಹಚ್ಚುವ ರೂಢಿ ಇಲ್ಲ. ಗಂಗೂಬಾಯಿಯವರಿಗೆ ಇದು ಗೊತ್ತಿರಲಿಲ್ಲ. ಪುಸ್ತಕ ನೋಡಿ ಅಲ್ಲಿದ್ದಂತೆ ಹಾಡಿದ್ದರು. ಇದು ಸಹಜವಾಗಿಯೇ ಗುರುಗಳಿಗೆ ಸಿಟ್ಟು ತರಿಸಿತ್ತು. ಆದರೆ ಆ ಗುರುಗಳ ಸಿಟ್ಟಾದರೂ ಅಂದೆಂಥ ಸಾತ್ವಿಕ ಸಿಟ್ಟಿರಬೇಕು! ಅಲ್ಲೇ ಕಲಿಸಿ, ತಪ್ಪನ್ನು ತಿದ್ದಿದರು.

ಕುಂದಗೋಳಕ್ಕೆ ಬಂದ ಸವಾಯಿ ಗಂಧರ್ವರು

ಗಂಗೂಬಾಯಿಯವರ ಸಂಗೀತಪಾಠ ಕ್ರಮಬದ್ಧವಾಗುವ ದಿನಗಳು ಹತ್ತಿರವಾದವು. ೧೯೩೭ರಲ್ಲಿ ರಾಮಭಾವು ಕುಂದಗೋಳಕರ ಯಾನೆ ಸವಾಯಿ ಗಂಧರ್ವರು ನಾಟಕ ಕಂಪನಿಯನ್ನು ತೊರೆದು ತಮ್ಮ ಊರಾದ ಕುಂದಗೋಳಕ್ಕೆ ಬಂದು ನೆಲೆಸುವ ನಿರ್ಧಾರ

ಮಾಡಿದರು. ಇದೀಗ ಗಂಗೂಬಾಯಿ ಪ್ರತಿ ದಿನ ಸಂಜೆಯ ರೈಲು ಹಿಡಿದು ಕುಂದಗೋಳಕ್ಕೆ ಹೋಗಿ ಸಂಗೀತ ಕಲಿತು ರಾತ್ರಿ ೯ ರ ರೈಲಿಗೆ ವಾಪಸ್ಸು ಬರುವ ವ್ಯವಸ್ಥೆ ಮಾಡಿಕೊಂಡರು. ಸವಾಯಿ ಗಂಧರ್ವರು ಗುರುಕುಲ ಪದ್ಧತಿಯಲ್ಲೇ ಸಂಗೀತ ಅಭ್ಯಾಸ ಮಾಡಿಸುತ್ತಿದ್ದರು. ಭೀಮಸೇನ ಜೋಶಿ, ನೀಲಕಂಠ ಬುವಾ ಗಾಡಗೋಳಿ ಇವರೆಲ್ಲ ಗುರುಗಳ ಮನೆಯಲ್ಲೇ ಇದ್ದು, ಗುರುಗಳ ಸೇವೆ ಮಾಡುತ್ತಾ ಸಂಗೀತ ಕಲಿಯುತ್ತಿದ್ದರು. ಆದರೆ ಗಂಗೂಬಾಯಿ ಮಹಿಳೆ, ಅಲ್ಲದೇ ಮೂರು ಮಕ್ಕಳ ತಾಯಿ. ಗೃಹಿಣಿಯಾಗಿ ಮನೆಯ ಜವಾಬ್ದಾರಿಗಳನ್ನು ಹೆಗಲೇರಿಸಿಕೊಂಡವರು. ಹಾಗಾಗಿ ಗುರುಗಳ ಮನೆಯಲ್ಲಿ ವಾಸ್ತವ್ಯ ಸಾಧ್ಯವಾಗದೇ, ಪ್ರತಿ ದಿನ ಕುಂದಗೋಳಕ್ಕೆ ಹೋಗಿ ಸಂಗೀತ ಕಲಿತು ಬರುತ್ತಿದ್ದರು.

ಅಂದಿನ ದಿನಗಳಲ್ಲಿ ಒಬ್ಬಳೇ ಮಹಿಳೆ ಅದರಲ್ಲೂ ಕತ್ತಲಾದ ಮೇಲೆ ಓಡಾಡುವುದು ಅಸಾಧ್ಯದ ಮಾತೇ ಸರಿ. ಹೀಗಾಗಿ ರಾಮಣ್ಣ ಮತ್ತು ಗಂಗೂಬಾಯಿ ದಿನಾ ಕುಂದಗೋಳಕ್ಕೆ ಹೋಗುತ್ತಿದ್ದರು. ರೈಲ್ವೆ ನಿಲ್ದಾಣದಿಂದ ಗುರುಗಳ ಮನೆ ಸುಮಾರು ಒಂದು ಕಿಲೊಮೀಟರ್ ದೂರ ಅಲ್ಲಿಯವರೆಗೆ ನಡೆದೇ ಹೋಗುವುದು. ವಿದ್ಯುತ್ ಇರದ ಅಂದಿನ ಕಾಲದಲ್ಲಿ ರಾತ್ರಿ ವಾಪಸ್ಸು ಬರುವಾಗ ಪ್ರತಿ ದಿನ ಭೀಮಣ್ಣ (ಭೀಮಸೇನ ಜೋಶಿ) ಹೆಗಲ ಮೇಲೆ ಲಾಟೀನು ಹಿಡಿದು ರೈಲು ಹತ್ತಿಸಲು ಬರುತ್ತಿದ್ದರು. ಹೀಗೆ ಶುರುವಾದ ಗಂಗೂಬಾಯಿ ಹಾನಗಲ್ ಮತ್ತು ಭೀಮಸೇನ ಜೋಶಿ ಅವರ ಸಹೋದರ ಸಂಬಂಧ, ಇಬ್ಬರ ಉಸಿರಿರುವವರೆಗೂ ಮುಂದುವರೆಯಿತು.

ಗುರುಗಳು ಕುಂದಗೋಳಕ್ಕೆ ಬಂದಿದ್ದು ಗಂಗೂಬಾಯಿ ಅವರ ಕಲಿಕೆಗೆ ಹೆಚ್ಚಿನ ಬಲ ತಂದಿತು. ಗುರುಗಳು ಒಂದು ರಾಗ ಆರಂಭಿಸಿದರೆ ಅದರ ಆರೋಹ ಅವರೋಹವನ್ನು ತಾಸುಗಟ್ಟಲೇ ಹಾಡುತ್ತಲೇ ಇರಬೇಕು. ಕೆಲವೊಮ್ಮೆ ರಾಗದ ಒಂದು ಸ್ವರ ಸಂಗತಿ ಅಥವಾ ಪಲ್ಟಾ ಕಲಿಸಿ ಮನೆಯೊಳಗೆ ಹೋಗಿ ಬಿಡುತ್ತಿದ್ದರು. ಶಿಷ್ಯೆ ಅದನ್ನೇ ಹಾಡುತ್ತಿರಬೇಕು. ಮುಂದೆ ಹೋಗುವಂತಿಲ್ಲ. ಅದು ಪಕ್ಕಾ ಆದ ಮೇಲೆ ಅವರು ಹೊರಬರುತ್ತಿದ್ದುದು. ಇನ್ನು ರಾಗ ವಿಸ್ತಾರವಂತೂ ಸವಾಯಿ ಗಂಧರ್ವರ ಅನನ್ಯ ಶೈಲಿ. ಅದನ್ನು ಶಿಷ್ಯೆಗೆ ರೂಢಿಸುವಾಗ 'ಸ್ವರಗಳನ್ನು ದುಡ್ಡು ಬಳಸಿದಂತೆ ಎಚ್ಚರದಿಂದ ಜೋಪಾನವಾಗಿ ಬಳಸಬೇಕು' ಎನ್ನುತ್ತಿದ್ದರು. ರಾಗದ ಒಂದು ಸ್ವರವನ್ನು ಮೊದಲು ಮುಟ್ಟಿ ಅಲ್ಲಿ ವಿನ್ಯಾಸಗಳನ್ನು ಮಾಡುತ್ತ ಮುಂದಿನ ಸ್ವರವನ್ನು ಹೌದೊ ಅಲ್ಲವೊ ಎಂಬಂತೆ ಸ್ಪರ್ಶಿಸಿ ಮತ್ತೆ ಮೊದಲ ಸ್ವರಕ್ಕೇ ಬಂದು ಬಿಡುವುದು. ಹಾಗೆ ಒಂದು ಭಾವ ಸಂಧಾನ ಉಂಟಾದ ಬಳಿಕ ಮುಂದಿನ ಸ್ವರದ ವಿನ್ಯಾಸ. ಹೀಗೆ ನಿಧಾನಕ್ಕೆ ಭವ್ಯ ಸ್ವರ ಸೌಧವನ್ನೇ ನಿರ್ಮಿಸುವ ಆಲಾಪ ಗಂಗೂಬಾಯಿ ಅವರಲ್ಲಿ ಹಾಗೆಯೇ ಹರಿದುಬಂತು. ಈ ಕ್ರಮದಲ್ಲಿ ಒಂದೊಂದು ರಾಗವನ್ನು ತಿಂಗಳು ಗಟ್ಟಲೆ ತಿದ್ದಿ ತೀಡಿ ಗಂಗೂಬಾಯಿ ಅವರ ಕಂಠಕ್ಕೆ ಒಗ್ಗಿಸಿ ಬಿಟ್ಟರು ಸವಾಯಿ ಗಂಧರ್ವರು. ಅರವತ್ತರ

ದಶಕದಲ್ಲಿ ಎಚ್.ಎಂ.ವಿ. ಕಂಪನಿ ಧ್ವನಿ ಮುದ್ರಿಸಿದ ಜೈಜೈವಂತಿ, ಯಮನ್ ಮುಂತಾದ ರಾಗಗಳನ್ನು ಕೇಳಿದರೆ ಈ ತಾಲೀಮಿನ ಮಹತ್ವ ಅರಿವಾಗುತ್ತದೆ. ಕೇವಲ ಆರು ನಿಮಿಷಗಳಲ್ಲಿ ರಾಗದ ಸಂಪೂರ್ಣ ಚಿತ್ರಣವನ್ನೇ ಗಂಗೂಬಾಯಿ ನಮ್ಮೆದುರು ಬಿಚ್ಚಿಡುತ್ತಾರೆ. ಅದಕ್ಕೇ ಮುಂದೆ ವರಕವಿ ದ.ರಾ.ಬೇಂದ್ರೆ ಅವರು 'ನಿಮ್ಮ ಗಂಟಲಾಗ ಶಾಪಗ್ರಸ್ತ ಗಂಧರ್ವ ಕುಂತಾನ' ಎಂದು ಗಂಗೂಬಾಯಿ ಅವರಿಗೆ ಹೇಳಿದ್ದು.

ಗುರುಗಳು ನಾಟಕ ಕಂಪನಿ ಬಿಟ್ಟಿದ್ದು ಸಂಗೀತಕ್ಕೆ ಬಹಳ ಒಳ್ಳೆಯದೇ ಆಯಿತು. ಪುಣೆ– ಮುಂಬಯಿ ಮುಂತಾದೆಡೆ ಸವಾಯಿ ಗಂಧರ್ವರ ಕಛೇರಿಗಳು ಮೇಲಿಂದ ಮೇಲೆ ಜರುಗುತ್ತಿದ್ದವು. ಇಂತಹ ಯಾವ ಸಂದರ್ಭವನ್ನೂ ಗಂಗೂಬಾಯಿ ತಪ್ಪಿಸಿಕೊಳ್ಳುತ್ತಿರಲಿಲ್ಲ. ಯಾವ ರಾಗವೇ ಆಗಲಿ ನುರಿತ ಗಾಯಕ ಕಂಠದಲ್ಲಿ ವೇದಿಕೆಯ ಮೇಲೆ ಮತ್ತೆ ಬೇರೆಯದೇ ರೂಪದಲ್ಲಿ ಹೊಮ್ಮುತ್ತದೆ. ಪಾಠದ ವೇಳೆ ಹೊಳೆಯದ ರಾಗದ ಅದೆಷ್ಟೋ ಸೂಕ್ಷ್ಮ ಸ್ತರಗಳು, ಲಯ ವಿನ್ಯಾಸಗಳು ಅಭ್ಯಾಸಿಗೆ ವೇದಿಕೆಯಲ್ಲಿ ಕಾಣುತ್ತವೆ. ಇಂತಹ ಅಧ್ಯಯನ ಸಾಧ್ಯವಾಗುವುದೇ ಕಛೇರಿಗಳಲ್ಲಿ.

ಮೊದಲೇ ಹೇಳಿದಂತೆ ಸವಾಯಿ ಗಂಧರ್ವರು ಕಟ್ಟುನಿಟ್ಟಿನವರು. ಅವರು ಹೇಳಿದಂತೆ ಹೇಳಿದಷ್ಟು ಸಲ ಅಭ್ಯಾಸ ಮಾಡಬೇಕು. ಇಂತಹ ರಾಗ, ಇಂತಹ ಬಂದಿಶ್ ಕಲಿಸಿ ಎಂದು ಹೇಳುವುದೆಲ್ಲ ಉದ್ಧಟತನ ಎಂದೇ ಭಾವಿಸಲಾಗುತ್ತಿತ್ತು. ಹಾಗಾಗಿ ಗುರುಗಳು ಹೇಳಿದಂತೆ ಹಾಡುವುದು ಮಾತ್ರ. ಅವರನ್ನು ಏನೇ ಕೇಳಲೂ ಗಂಗೂಬಾಯಿ ಅವರಿಗೆ ಭಯ. ಸ್ವಭಾವತಃ ಸವಾಯಿ ಗಂಧರ್ವರು ಸ್ವಲ್ಪ ಮೌನಿಯೇ. ಆಗೀಗ ಏನಾದರೂ ಕೇಳುವುದಿದ್ದರೂ ರಾಮಣ್ಣನವರೇ ಕೇಳುತ್ತಿದ್ದರು.

ಒಮ್ಮೆ ಹೊಸ ರಾಗ ಶುರು ಮಾಡಿದರು. ಪಾಠ ಮುಂದುವರಿಯುತ್ತಲೇ ಹೋಯಿತು. ಗಂಗೂಬಾಯಿ ಅವರಿಗೆ ಆ ರಾಗವನ್ನು ತಾನು ಹಾಡಬಲ್ಲೆ ಎಂಬ ವಿಶ್ವಾಸ ಮೂಡಿತು. ಆದರೆ ರಾಗದ ಹೆಸರು ಗೊತ್ತಿಲ್ಲ. ಇದೇ ಸಮಯಕ್ಕೆ ಆಕಾಶವಾಣಿ ರೆಕಾರ್ಡಿಂಗ್ ಬಂತು. ಮೂರು ಬೈಠಕ್ಕುಗಳಿಗೆ ಸಿದ್ಧರಾಗಬೇಕಲ್ಲ. ಈ ರಾಗವನ್ನೂ ಹಾಡಿದರಾಯಿತು ಎಂದುಕೊಂಡರು. ಆದರೆ ಆಕಾಶವಾಣಿಗೆ ಮುಂಚಿತವಾಗಿ ತಿಳಿಸಬೇಕಿತ್ತು. ಗುರುಗಳನ್ನು ಕೇಳಲು ಭಯ. ಏನು ಮಾಡುವುದು? ರಾಮಣ್ಣನವರು ಮರುದಿನ ಪಾಠಕ್ಕೆ ಹೋದಾಗ ಗುರುಗಳಿಗೆ ಕಾಣುವಂತೆ ಆಕಾಶವಾಣಿ ಫಾರಂ ಅನ್ನು ಬೀಳಿಸಿದರು. ನಿರೀಕ್ಷೆಯಂತೆ ಗುರುಗಳು 'ಅದೇನದು' ಎಂದರು. ಆಗ ರಾಮಣ್ಣ ಆಕಾಶವಾಣಿ ರೆಕಾರ್ಡಿಂಗ್‌ನಲ್ಲಿ ಗಂಗೂಬಾಯಿ ಈ ಹೊಸಾ ರಾಗ ಹಾಡಲು ಬಯಸುವುದಾಗಿ ತಿಳಿಸಿದರು. ಸಿಟ್ಟಿಗೆದ್ದ ಗುರುಗಳು 'ಇಷ್ಟ್ಯಾಕ ಅವಸರ' ಎಂದವರೇ ತಾನ್‌ಪುರಾ ತೆಗೆದುಕೊಂಡು ಹಾಡಲು ಶುರು ಮಾಡಿದರು. ಗಾಯನ ಮುಗಿದ ಮೇಲೆ ರಾಮಣ್ಣ ಮತ್ತೆ ಕೇಳಿದರು 'ಯಾವ ರಾಗ ಗುರುಗಳೇ'. 'ಸುಹಾ, ಸುಹಾ'

ಎನ್ನುತ್ತ ಹೋಗಿಬಿಟ್ಟರು. ಆದರೆ ಆಕಾಶವಾಣಿಯಲ್ಲಿ ಅದೇ ರಾಗವನ್ನು ಹಾಡಲು ಅನುಮತಿಯನ್ನೂ ನೀಡಿದರು.

ಸಂಗೀತ ಕಛೇರಿಗಳು

ಗುರುಗಳ ಸತತ ಮಾರ್ಗದರ್ಶನ ದೊರೆತದ್ದು ಗಂಗೂಬಾಯಿ ಅವರ ಪ್ರತಿಭೆಗೆ ಪುಟ ಇಟ್ಟಂತಾಯಿತು. ಆಕಾಶವಾಣಿಯಲ್ಲಿ ಮತ್ತು ಅಲ್ಲಲ್ಲಿ ಸಂಗೀತ ಕಾರ್ಯಕ್ರಮಗಳಲ್ಲಿ ಹಾಡಿ ಯಶಸ್ವಿಯಾಗಿದ್ದರೂ ಗುರುಗಳ ಎದುರು ಹಾಡಲು ಭಯ. ಒಮ್ಮೆ ಮುಂಬಯಿಯಲ್ಲಿ ಗಣೇಶೋತ್ಸವದಲ್ಲಿ ಸವಾಯಿ ಗಂಧರ್ವರ ಕಛೇರಿ ಏರ್ಪಾಡಾಗಿತ್ತು. ಅಂದು ಗುರುಗಳಿಗೆ ಸಿಕ್ಕಾಪಟ್ಟೆ ಜ್ವರ. ಗಂಗೂಬಾಯಿ ಅವರನ್ನು ಹಾಡುವಂತೆ ತಿಳಿಸಿದರು. ಅವರಿಗೋ ಗುರುಗಳ ಗಾಯನ ಕೇಳಲು ಬಂದವರು ತನ್ನ ಹಾಡನ್ನು ಕೇಳಿಯಾರೇ ಎಂಬ ಅಳುಕು. ಹಾಗಾಗಿ 'ಒಲ್ಲೆ' ಎಂದುಬಿಟ್ಟರು. ಅನಿವಾರ್ಯವಾಗಿ ಸವಾಯಿ ಗಂಧರ್ವರು ಇನ್ನೊಬ್ಬರನ್ನು ಕಳಿಸಿಕೊಟ್ಟರು. ಆದರೆ ಅವರು ಸ್ವಲ್ಪ ಹಾಡುವಷ್ಟರಲ್ಲಿ ಜನರಲ್ಲಿ ಗುಸುಗುಸು ಗದ್ದಲ ಶುರುವಾಗಿ ಬಿಟ್ಟಿತು. ಅನಿವಾರ್ಯವಾಗಿ ಆಯೋಜಕರ ಒತ್ತಾಯದ ಮೇರೆಗೆ ಗಂಗೂಬಾಯಿ ಹಾಡಬೇಕಾಯಿತು. ಅವರು ಗಾಯನ ಶುರು ಮಾಡಿದ್ದೇ ಸದ್ದೆಲ್ಲ ಅಡಗಿ ಜನ ಶಾಂತಚಿತ್ತರಾಗಿ ಆಲಿಸತೊಡಗಿದರು. ಅವರ ಅಂದಿನ ಅಮೋಘ ಗಾಯನಕ್ಕೆ ತೃಪ್ತರಾದ ಗುರುಗಳು ಕಾರ್ಯಕ್ರಮದ ಸಂಭಾವನೆಯನ್ನು ಶಿಷ್ಯೆಗೇ ನೀಡುವಂತೆ ಆಯೋಜಕರಿಗೆ ಹೇಳಿದರು. ಇಲ್ಲಿಂದ ಮುಂದೆ ಗಂಗೂಬಾಯಿ ಅವರಿಗೆ ಗುರುಗಳ ಎದುರೂ ಹಾಡುವ ಆತ್ಮವಿಶ್ವಾಸ ಬಂತು. ಶಿಷ್ಯರು ಚೆನ್ನಾಗಿ ಹಾಡಿದರೆ ಬಾಯಿ ಬಿಟ್ಟು ಹೊಗಳುವುದು ಸವಾಯಿ ಗಂಧರ್ವರ ರೀತಿಯಲ್ಲ. ಬಹುಶಃ ಆ ಕಾಲದ ಎಲ್ಲ ಗುರುಗಳೂ ಹಾಗೇ ಇದ್ದರು. ಹೊಗಳಿಕೆ ಕಲಿಕೆಯ ದಾರಿಗಳನ್ನು ಮುಚ್ಚಿಬಿಡುತ್ತದೆ ಎಂಬುದು ಅದಕ್ಕೆ ಕಾರಣವಿರಬೇಕು. ಆದರೆ ಶಿಷ್ಯೆ ಚೆನ್ನಾಗಿ ಹಾಡಿದರೆ 'ನಡಿ, ಮಸಾಲಿ ಹಾಲು ಕುಡ್ದ್ ಬರೋಣು' ಎನ್ನುತ್ತಿದ್ದರಂತೆ. ಅದು ಅವರು ಶಿಷ್ಯರಲ್ಲಿ ಆತ್ಮ ವಿಶ್ವಾಸ ಬೆಳೆಸುತ್ತಿದ್ದ ರೀತಿ.

ಅಖಿಲ ಭಾರತ ಸಂಗೀತ ಸಮ್ಮೇಳನ

೧೯೩೭ರಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಅವಕಾಶ ಗಂಗೂಬಾಯಿ ಅವರಿಗೆ ಬಂದಿತು. ಗೊರೆಗಾಂವ್ ಬೈಠಕ್ಕಿನಲ್ಲಿ ಗಂಗೂಬಾಯಿ ಅವರ ಗಾಯನವನ್ನು ಕೇಳಿದ ಜದ್ದನ್ ಬಾಯಿ (ಹಿಂದಿ ಚಿತ್ರ ತಾರೆ ನರ್ಗಿಸ್‌ರ ತಾಯಿ) ಕಲ್ಕತ್ತಾದ ಸಂಗೀತ ಸಮ್ಮೇಳನದಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸಿದರು. ಕಲ್ಕತ್ತಾದಲ್ಲಿ ಕಾರ್ಯಕ್ರಮದ ಹಿಂದಿನ ದಿನ ಬೈಠಕ್ಕಿನಲ್ಲಿ ಹಾಡುವಂತೆ ಗಂಗೂಬಾಯಿ ಅವರಿಗೆ ಸೂಚಿಸಲಾಯಿತು. ಅವರು ಹೀಗೇಕೆ ಹೇಳುತ್ತಿದಾರೆ ಎಂಬುದು ಗಂಗೂಬಾಯಿ

ಅವರಿಗೆ ಅರ್ಥವಾಗಲಿಲ್ಲ. "ನಿಸಾರ್ ಹುಸೇನ್‌ಖಾನರು ನನ್ನನ್ನು ಪಕ್ಕಕ್ಕೆ ಕರೆದು ಇಷ್ಟು ಸಣ್ಣ ಹುಡುಗಿ ಹೇಗೆ ಹಾಡಿಯಾಳು ಎಂದು ಅವರಿಗೆ ಅನ್ನಿಸಿರಬೇಕು. ಸ್ವಲ್ಪ ಹಾಡಿಬಿಡಿ ಸಾಥಿದಾರರ ಜತೆ ಹೊಂದಿಕೊಂಡಂತಾಗುತ್ತದೆ" ಎಂದು ವಿವರಿಸಿದರು. ಅಲ್ಲಿ ಹಾಡಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

'ತ್ರಿಪುರಾದ ಮಹಾರಾಜರು ಬಂಗಾರದ ಪದಕ ನೀಡಿ ಗೌರವಿಸಿದರು' ಎಂದು ಸಬೀನಾ ಸೆಹೆಗಲ್ ಅವರಿಗೆ ನೀಡಿದ ಸಂದರ್ಶನದಲ್ಲಿ ಗಂಗೂಬಾಯಿ ನೆನಪಿಸಿಕೊಂಡಿದ್ದಾರೆ. ಅಲ್ಲಿಂದ ಮುಂದೆ ಸತತ ಹದಿನೈದು ವರ್ಷ ಗಂಗೂಬಾಯಿ ಅವರು ಇದೇ ಸಮ್ಮೇಳನದಲ್ಲಿ ಪಾಲ್ಗೊಂಡು ಸಂಗೀತಪ್ರಿಯರ ಪ್ರೀತಿ ಗಳಿಸಿದರು. ಕಲ್ಕತ್ತಾ ಇವತ್ತಿಗೂ ಸಂಗೀತದ ಕಾಶಿ ಇದ್ದಂತೆ. ಗಲ್ಲಿ ಗಲ್ಲಿಗಳಲ್ಲಿ, ಮನೆ ಮನೆಗಳಲ್ಲಿ ಸಂಗೀತಾಭ್ಯಾಸಿಗಳು ಇರುವ ಶಹರ ಅದು. ಅಲ್ಲಿಯ ಶ್ರೋತೃಗಳ ಮನ ಗೆಲ್ಲುವುದು ಸರಳವಲ್ಲ. ಆದರೆ ಗಂಗೂಬಾಯಿ ಅವರಂಥ ಸಾಧಕಿಗೆ ಕಷ್ಟವೂ ಆಗಿರಲಿಲ್ಲ!

ಹದಿನೈದು ನಿಮಿಷ ಹಾಡುತ್ತಾರೆ!

ಗಂಗೂಬಾಯಿ ಅವರ ಸಣ್ಣ ವಯಸ್ಸು ಮತ್ತು ಪುಟ್ಟ ಆಕೃತಿಯಿಂದಾಗಿ ಸಂಗೀತ ಕಾರ್ಯಕ್ರಮ ಆಯೋಜಕರಿಗೆ 'ಇವರೇನು ಹಾಡಿಯಾರು' ಎಂಬ ಸಂಶಯ ಬರುತ್ತಿತ್ತು ಎನ್ನಿಸುತ್ತದೆ. ಗಯಾದಲ್ಲಿ ೧೯೪೨ರಲ್ಲಿ ನಡೆದ ಸಂಗೀತ ಸಮ್ಮೇಳದಲ್ಲಿ ಸಂಘಟಕರಿಗೆ ಅದೇನು ಅನ್ನಿಸಿತೋ ಅಂದು ಹಾಡುವ ಕಲಾವಿದರ ಹೆಸರನ್ನು ಪ್ರಕಟಿಸುವಾಗ, ಗಂಗೂಬಾಯಿ ಅವರ ಹೆಸರನ್ನು ಹೇಳಿ ಹದಿನೈದು ನಿಮಿಷ ಹಾಡುತ್ತಾರೆ ಎಂದು ಘೋಷಿಸಿಬಿಟ್ಟರು. ಹುಬ್ಬಳ್ಳಿಯಿಂದ ಗಯಾದವರೆಗೆ ಪ್ರಯಾಣ ಮಾಡಿ ಅಷ್ಟು ದೊಡ್ಡ ಸಂಗೀತ ಸಮ್ಮೇಳನಕ್ಕೆ ಹೋಗಿ ಕೇವಲ ಹದಿನೈದು ನಿಮಿಷ ಹಾಡಿ ಅಂದರೆ ಹೇಗನ್ನಿಸಬೇಡ! ಬೇಸರಗೊಂಡ ಗಂಗೂಬಾಯಿಗೆ ಅಳುವೆ ಬಂದುಬಿಟ್ಟಿತು. ಅದನ್ನು ಕಂಡ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ಅಷ್ಟೇ ಅವಧಿಯಲ್ಲಿ ಬೇಕಾದಂತೆ ಹಾಡಿ ತೋರಿಸಬಲ್ಲೆ ನೀನು ಎಂದು ಧೈರ್ಯ ತುಂಬಿದರು. ಬಸಂತ್ ರಾಗದಲ್ಲಿ ಧೃತ್ ಬಂದಿಶ್ 'ಪಿಯಾ ಸಂಗ್' ಹಾಡಿ ಇಪ್ಪತ್ತೇ ನಿಮಿಷದಲ್ಲಿ ಪೂರ್ಣಗೊಳಿಸಿದಾಗ ಶ್ರೋತೃಗಳ ಚಪ್ಪಾಳೆ. ಮರುದಿನ ಹಿಂದಿನ ದಿನ ಹಾಡಿದ ಕಲಾವಿದರೆಲ್ಲ ಚಹಾ ಕೂಟಕ್ಕಾಗಿ ಒಂದೆಡೆ ಸೇರಿದಾಗ ಮತ್ತೆ ಹಾಡುವಂತೆ ಗಂಗೂಬಾಯಿ ಅವರನ್ನು ಸಂಘಟಕರು ವಿನಂತಿಸಿಕೊಂಡರು. ನಿನ್ನೆಯ ನೋವು ಇನ್ನೂ ಮರೆತಿರಲಿಲ್ಲ. ಗಂಗೂಬಾಯಿ ಹಾಡಲು ಒಪ್ಪಲಿಲ್ಲ. ಆಗ ಬಡೇ ಗುಲಾಂ ಅಲೀ ಖಾನ್ ಅವರು 'ತುಂ ಬೀ ಗಾವೊ, ಹಂ ಭೀ ಗಾಯೇಂಗೆ (ನೀನೂ ಹಾಡು ನಾವೂ ಹಾಡುತ್ತೇವೆ)' ಎಂದು ಸಮಾಧಾನ ಪಡಿಸಿದಾಗ ತಾನ್‌ಪುರಾ ಎತ್ತಿಕೊಂಡು ಶುದ್ಧ ಕಲ್ಯಾಣ ಹಾಡಲು ಶುರು ಮಾಡಿದರು. ಅಂದು ಅವರಿಗೆ ವಿ.ಜಿ.

ಜೋಗ್ ಅವರು ವಾಯೊಲಿನ್ ಸಾಥ್ ನೀಡಿದ್ದರು. ನೆರೆದ ವಿದ್ವಾಂಸರಲ್ಲಿ ಯಾರೋ ಗಾಯನಕ್ಕೆ ವಾಯೊಲಿನ್ ಸಾಥ್ ಹೊಂದುವುದಿಲ್ಲ ಎಂದರಂತೆ. ಆಗ ಬಡೇ ಗುಲಾಂ ಅಲೀ ಖಾನ್ ಅವರು 'ದಿಲ್ ದಿಮಾಗ್ ಔರ್ ಕಾನ್ ಠೀಕ್ ಹೋತೊ ಗಾನೇಕೇಲಿಯೇ ಕುಛ್ ಭೀ ಚಲೇಗಾ (ಯಾಕಿಲ್ಲ. ಮನಸ್ಸು, ಬುದ್ಧಿ ಮತ್ತು ಕಿವಿ ಸರಿಯಾಗಿದ್ದರೆ ಗಾಯನಕ್ಕೆ ಯಾವ ಸಾಥಿಯಾದರೂ ಆದೀತು)' ಎಂದರಂತೆ. ಹಾಗೆಂದರೇನು ಎಂದು ರಾಮಣ್ಣನವರು ಖಾನ್ ಸಾಹೇಬರನ್ನು ಕೇಳಿದಾಗ ಹೇಳಿದ್ದು ಹೀಗೆ – ಹಾಡುವವರ ದಿಲ್ (ಮನಸ್ಸು) ಸ್ವಚ್ಛ ಇರಬೇಕು, ದಿಮಾಗ್ (ಬುದ್ಧಿ) ಶಾಂತ ಇರಬೇಕು, ಕೇಳುವವರ ಕಾನ್ (ಕಿವಿ) ಸಿದ್ಧವಾಗಿರಬೇಕು ಎಂದು!

ಹುಬ್ಬಳ್ಳಿಯ ಥಾಟು

ತಾವು ಮೊದಲ ಸಲ ದೆಹಲಿ ಆಕಾಶವಾಣಿ ಕೇಂದ್ರಕ್ಕೆ ಧ್ವನಿ ಮುದ್ರಣಕ್ಕೆ ಹೋದಾಗಿನ ಸಂದರ್ಭವನ್ನು ಗಂಗೂಬಾಯಿ ತಮ್ಮ ಆತ್ಮ ಕಥೆಯಲ್ಲಿ ಬಹಳ ಸ್ವಾರಸ್ಯಕರವಾಗಿ ನೆನಪು ಮಾಡಿಕೊಂಡಿದ್ದಾರೆ. ಅದನ್ನು ಯಥಾವತ್ತಾಗಿ ಇಲ್ಲಿ ನೀಡುತ್ತಿದ್ದೇನೆ. 'ನಾನು ಮೊದಲನೆ ಸಲ ದಿಲ್ಲಿ ರೇಡಿಯೊ ಪ್ರೊಗ್ರಾಂಗೆ ಹೋದಾಗ, ಕಾರ್ಯಕ್ರಮಕ್ಕಿಂತ ಅರ್ಧತಾಸು ಮೊದಲು ಹೋಗಿ ಕೂತರೂ ಮಾತಾಡಿಸುವವರೇ ಇಲ್ಲ. ಮುಂದೆ ಕಾರ್ಯಕ್ರಮ ಶುರುವಾಗುವ ಹೊತ್ತಿಗೆ ಸೂಪರ್ ವೈಸರ್ ಬಂದ, 'ಗಂಗೂಬಾಯಿ ಹಾನಗಲ್' ಎಂದು ಕೂಗಿದ. ನಾನು ಸ್ಟುಡಿಯೊ ಪ್ರವೇಶಿಸಿದೆ. ನನ್ನ ಪಟ್ಟಿ ಯಾವುದು ಎಂದು ಕೇಳಿದ. ಹೇಳಿದೆ. 'ಅಲ್ಲಿದೆ ತಗೊಳ್ರಿ' ಅಂದ. ನಾನೇ ಎದ್ದು ಹೋಗಿ ತಂಬೂರಿ ತಂದೆ. 'ಇಷ್ಟ್ಯಾಕೆ ತಡ' ಅಂದ. 'ನಾನು ಬಂದು ಅರ್ಧ ತಾಸಾಯಿತು' ಅಂದೆ. ಆತ ಉತ್ತರಿಸಲಿಲ್ಲ. ನನ್ನ ಸಂಗೀತ ಪ್ರಸಾರವಾಯಿತು. ಕಾರ್ಯಕ್ರಮ ಕೇಳಿದ ಕೇಂದ್ರ ನಿರ್ದೇಶಕರು ಡ್ಯೂಟಿ ಆಫಿಸರಿಗೆ ಫೋನ್ ಮಾಡಿದ್ದರು. ನಾನು ಕಾರ್ಯಕ್ರಮ ಮುಗಿಸುವ ಹೊತ್ತಿಗೆ ಕಾರ್ ಹಾಕಿಕೊಂಡು ಬಂದೇ ಬಿಟ್ಟಿದ್ದರು. ಆಗ ಎಲ್ಲರೂ 'ಅಲರ್ಟ್' ಆಗಿದ್ದರು. ಡೈರೆಕ್ಟರು ನನ್ನ ಕಾರ್ಯಕ್ರಮ ಮೆಚ್ಚಿಕೊಂಡು ಸಂತೋಷ, ಅಭಿನಂದನೆ ಮಾಡಿದರು. ಆ ಮೇಲೆ ಚಹಾ ಸರಬರಾಜು ಆಯಿತು. ಆಮೇಲೆ ಸರಿಯಾಗಿ ನಡೆಸಿಕೊಂಡರು. ನಮ್ಮ ರಾಗರಾಗಿಣಿ ಥಾಟು ಬೇರೆ. ಅಲ್ಲಿ ಬರುವ ಫ್ಯಾಷನೇಬಲ್ ಕಲಾವಿದೆಯರ ಥಾಟು ಬೇರೆ. ಈ ಹುಬ್ಬಳ್ಳಿಯವಳನ್ನು ಹಳ್ಳಿಯವಳೆಂದುಕೊಂಡಿರಬೇಕು ಅವರು.' ಈ ಘಟನೆ ಗಂಗೂಬಾಯಿ ಅವರ ಸರಳತೆಯನ್ನು, ಅದರ ಹಿರಿಮೆಯನ್ನು ಅರ್ಥ ಮಾಡಿಕೊಳ್ಳದ ಆಧುನಿಕ ಜಗತ್ತನ್ನು ಮತ್ತು ಥಳಕು ಬಳುಕಿಗೆ ಮಣೆ ಹಾಕುವುದನ್ನೂ ಮಾರ್ಮಿಕವಾಗಿ ಪ್ರತಿಧ್ವನಿಸುತ್ತದೆ. ಇಂದಿಗೂ ಸಣ್ಣ ಪಟ್ಟಣಗಳು ಮತ್ತು ಗ್ರಾಮೀಣ ಪ್ರದೇಶದಿಂದ ಬರುವ ಪ್ರತಿಭಾವಂತರು (ಯಾವುದೇ ಕ್ಷೇತ್ರದಲ್ಲಿರಲಿ) ಇದೇ ರೀತಿಯ ನಿರ್ಲಕ್ಷ್ಯವನ್ನು ಮೆಟ್ಟಿನಿಂತೇ ಮುಂದೆ ಬರಬೇಕಾಗುತ್ತದೆ.

ಗುರುಗಳ ಅನಾರೋಗ್ಯ

ಇದೇ ಸುಮಾರಿಗೆ ಅಂದರೆ ೧೯೪೨ರಲ್ಲಿ ಸವಾಯಿ ಗಂಧರ್ವರಿಗೆ ಪಾರ್ಶ್ವವಾಯು ಹೊಡೆಯಿತು. ನೀವಿನ್ನು ಹಾಡುವಂತಿಲ್ಲ ಎಂದು ವೈದ್ಯರು ಕಟ್ಟಪ್ಪಣೆ ಮಾಡಿ ಬಿಟ್ಟರು. ಪುಣೆಯಲ್ಲಿ ಮಗಳ ಮನೆಯಲ್ಲಿ ಕೆಲಕಾಲ ಆರೈಕೆ, ವಿಶ್ರಾಂತಿಯ ನಂತರ ಅವರು ಹುಬ್ಬಳ್ಳಿಗೆ ಔಷಧೋಪಚಾರಕ್ಕಾಗಿ ಪತ್ನಿಯೊಂದಿಗೆ ಬಂದರು. ಆಗ ಮೂರು ವರ್ಷಗಳ (೧೯೪೬–೧೯೪೯) ಕಾಲ ಗಂಗೂಬಾಯಿ ತಮ್ಮ ಮನೆಯಲ್ಲೇ ಗುರುಗಳನ್ನೂ ಅವರ ಕುಟುಂಬವನ್ನೂ ಇರಿಸಿಕೊಂಡು ಸೇವೆ ಮಾಡಿದರು. ಆ ಮೂರು ವರ್ಷಗಳ ಕಾಲ ಗಂಗೂಬಾಯಿ ಅವರು ರಿಯಾಜ್ ಮಾಡುತ್ತಿದ್ದರೆ, ಸವಾಯಿ ಗಂಧರ್ವರ ಕಿವಿಯೆಲ್ಲಾ ಅಲ್ಲೇ ಇರುತ್ತಿತ್ತು. ಸ್ವಲ್ಪ ವ್ಯತ್ಯಾಸವಾದರೂ ಮಲಗಿದ್ದಲ್ಲಿಂದಲೇ ತಿದ್ದುತ್ತಿದ್ದರು. ಹಾಡಬೇಡಿ ಎಂದು ವೈದ್ಯರೇನೋ ಸವಾಯಿ ಗಂಧರ್ವರಿಗೆ ಹೇಳಿದ್ದರು. ಆದರೆ ಸಂಗೀತವನ್ನೇ ಉಸಿರಾಡುತ್ತಿದ್ದ ಅವರಿಗೆ ಸುಮ್ಮನಿರುವುದು ಸಾಧ್ಯವಾಗುವ ಮಾತಾಗಿರಲಿಲ್ಲ. ಸ್ವಲ್ಪ ಆರೋಗ್ಯ ಸುಧಾರಿಸಿದ ನಂತರ ಒಮ್ಮೆ ಗಂಗೂಬಾಯಿ ಅಲ್ಹೈಯ್ಯಾ ಭಿಲಾವಲ್ ರಾಗವನ್ನು ಅಭ್ಯಾಸ ಮಾಡುತ್ತಿದ್ದರು. ಗುರುಗಳು ಆ ರಾಗವನ್ನು ಇನ್ನೂ ಕಲಿಸಿರಲಿಲ್ಲ. ಹೊರಗೆ ಹೊರಟಿದ್ದ ಗುರುಗಳು 'ಏನ ಹಾಡತಿದ್ದೀ' ಎಂದರು. 'ಏನೂ ತಿಳಿವಲ್ದು' ಗಂಗೂಬಾಯಿ ಅವರ ಉತ್ತರ. ಅಲ್ಲೇ ತಾನ್‌ಪುರಾ ತೆಗೆದುಕೊಂಡು ಎರಡು ತಾಸು ಪಾಠ ಹೇಳಿದರಂತೆ! ಹುಬ್ಬಳ್ಳಿಯಲ್ಲಿ ಇದ್ದಷ್ಟು ದಿನವೂ ಗಂಗೂಬಾಯಿ ಅವರ ಸಾಧನೆಯ ಮೇಲ್ವಿಚಾರಣೆ ಮಾಡುತ್ತಿದ್ದರು. ತಮ್ಮ ಗಾಯನ ಪರಂಪರೆಯನ್ನು ಶಿಷ್ಯೆ ಸಮರ್ಥವಾಗಿ ಮುಂದುವರಿಸಿಕೊಂಡು ಹೋಗುತ್ತಾರೆ ಎಂಬ ವಿಶ್ವಾಸವೂ ಆ ವೇಳೆಗಾಗಲೇ ಬಂದಿತ್ತು.

ಗಂಗೂಬಾಯಿ ಅವರ ಯಾವುದೇ ಕಛೇರಿ ಆದಮೇಲೆ ಹೇಗಾಯ್ತು, ಏನು ಹಾಡಿದಿ ಎಂದು ಕೇಳುತ್ತಿದ್ದರು. ಒಮ್ಮೆ ಹೀಗೆ ಕೇಳಿದಾಗ ರಾಮಣ್ಣ ಹೇಳಿದರು– 'ಮಾರುಬಿಹಾಗ್ ಹಾಡಂತ ಕೇಳಿದ್ರು. ಗಂಗೂಗ ಬರ್ತಿಲ್ಲ. ಸರಿಯಾಗಿ ಕಲ್ತ ಹಾಡ್ಬೇಕಂತಾಳ್ರೀ. ಹೀಂಗಾಗಿ ಹಾಡ್ಲಿಲ್ಲ' ಅಂದರು. ತಕ್ಷಣ ತಾನ್‌ಪುರಾ ಶ್ರುತಿ ಮಾಡಿ ಮಾರುಬಿಹಾಗ್ ರಾಗದ ಪಾಠ ಆರಂಭಿಸಿಯೇಬಿಟ್ಟರು. ಮುಂದಿನ ಎರಡು ದಿನವೂ ದಿನಕ್ಕೆ ಆರೇಳು ತಾಸು ಅದೇ ರಾಗದ ಚಲನೆ, ವಿಸ್ತಾರ, ಆಳ, ಉದ್ದಗಲವನ್ನೆಲ್ಲ ಶಿಷ್ಯೆಗೆ ಅರೆದು ಕುಡಿಸಿಬಿಟ್ಟರು. ಮೂರನೇ ದಿನ ಗಂಗೂಬಾಯಿ ಮತ್ತೆ ಅದೇ ರಾಗವನ್ನು ತೆಗೆದುಕೊಂಡು ಅಭ್ಯಾಸ ಆರಂಭಿಸಿದರು. ಹಾಡಲು ಶುರು ಮಾಡಿ ತಾಸಾದರೂ ಗುರುಗಳು ಮನೆಯಿಂದ ಹೊರಗೇ ಬರಲಿಲ್ಲ. ನೋಡಿ ನೋಡಿ ಸಾಕಾದ ಗುರುಗಳ ಪತ್ನಿ 'ಗಂಗೂ ಆಗ್ಲಿಂದ ಹಾಡ್ತಾ ಇದ್ದಾಳ. ಹೋಗಿ ಹೇಳಿ ಕೊಡಬಾರದೇನು?' ಎಂದರೆ, 'ನಾ ಕೇಳ್ತಾ ಇದ್ದೇನಿ. ಮಾರುಬಿಹಾಗದಾಗ ಇನ್ನೇನು ಕಲಿಸೋದು ಉಳದಿಲ್ಲ ಆಕೀಗ' ಎಂದರು ಗುರುಗಳು! ಶಿಷ್ಯೆಗೆ ಇನ್ನೆಂಥ ಪ್ರಶಸ್ತಿ ಬೇಕು?

ಸವಾಯಿ ಗಂಧರ್ವರು ರಂಗ ಭೂಮಿಯಲ್ಲಿ ನಾಯಕ– ಗಾಯಕರಾಗಿ ಹೆಸರು ಮಾಡಿದವರು. ರಂಗಭೂಮಿಯ ನಂಟನ್ನು ತೊರೆದ ನಂತರ ಗಾಯಕರಾಗಿ ದೇಶಾದ್ಯಂತ ಕಛೇರಿ ನೀಡುತ್ತಿದ್ದವರು. ಹೀಗೆ ಯಶಸ್ಸು ಬೆನ್ನೇರಿದ್ದರೂ ಅವರು ಅಭ್ಯಾಸ ಬಿಟ್ಟಿರಲಿಲ್ಲ ಎಂದು ಗಂಗೂಬಾಯಿ 'ನನ್ನ ಬದುಕಿನ ಹಾಡು' ನಲ್ಲಿ ಹೇಳಿದ್ದಾರೆ. ಸವಾಯಿ ಗಂಧರ್ವರ ರಿಯಾಜ್ ಹೇಗಿತ್ತೆಂದರೆ; ಬೆಳಗಿನ ಜಾವ ಮಂದ್ರ ಸ್ವರಗಳ ಅಭ್ಯಾಸ. ಅದು ತಪಸ್ಸಿನಂತೆ ಮಾಡಬೇಕಾದದ್ದು ಎಂಬುದು ಅವರ ಭಾವನೆಯಾಗಿತ್ತು. ಮಧ್ಯಾಹ್ನ ಸ್ವಲ್ಪ ವಿಶ್ರಾಂತಿಯ ನಂತರ ಗಾಯನದ ವಿವಿಧ ಅಂಗಗಳ ಅಭ್ಯಾಸ ಅಂದರೆ– ಖಟಕಾ, ಮುರ್ಕಿ, ಆಲಾಪ, ತಾನ್, ಫಿರತ್ ಇತ್ಯಾದಿ ತಮ್ಮ ಮನಸ್ಸಿಗೆ ಸಮಾಧಾನವಾಗುವವರೆಗೂ ಅಭ್ಯಾಸ ಮಾಡುವುದು. ಕೆಲವೊಮ್ಮೆ, ರಾಗದ ಸ್ವರಗಳನ್ನು ಮಂದ್ರ ಸ್ವರದಿಂದ ಆರಂಭಿಸಿ ಮಧ್ಯ ಸಪ್ತಕದ ಮಧ್ಯಮದವರೆಗಿನ ಸ್ವರಸಂಚಾರವನ್ನು ಅಭ್ಯಾಸ ಮಾಡುವುದು ಹೀಗೆ ಸೂಕ್ಷ್ಮ ಮತ್ತು ನಿಖರವಾದ ಅಭ್ಯಾಸ ಅವರದಾಗಿತ್ತು. ತಮ್ಮಂತೆಯೇ ತಮ್ಮ ಶಿಷ್ಯರನ್ನೂ ಕಟ್ಟುನಿಟ್ಟಾದ ಅಭ್ಯಾಸದಲ್ಲಿ ತೊಡಗಿಸಿದ್ದರಿಂದಲೇ ಗಂಗೂಬಾಯಿ ಹಾನಗಲ್, ಭೀಮಸೇನ ಜೋಶಿ ಮತ್ತು ಫಿರೋಜ್ ದಸ್ತೂರ್ ಅವರಂಥ ಶಿಷ್ಯರು ರೂಪುಗೊಳ್ಳಲು ಸಾಧ್ಯವಾದದ್ದು.

ಅವರ ಗಾಯನವನ್ನು ಹಿರಿಯ ಸಂಗೀತ ಬರಹಗಾರ ಸಹಾನಂದ ಕನವಳ್ಳಿಯವರು 'ಸುವರ್ಣ ವೃಕ್ಷದ ಮೇಲೆ ಸುಗಂಧ ವೃಷ್ಟಿಯಾದಂತೆ' ಎಂದು ಬಣ್ಣಿಸಿದ್ದಾರೆ. ಸವಾಯಿ ಗಂಧರ್ವರ ಗುರು ಅಬ್ದುಲ್ ಕರೀಂ ಖಾನರ ಸಮಾಧಿ ಮೀರಜ್‌ನಲ್ಲಿ ಇದೆ. ಅಲ್ಲಿ ಪ್ರತಿ ವರ್ಷ ಅವರ ಸ್ಮರಣಾರ್ಥ ನಡೆಯುವ ಸಂಗೀತ ಸಮ್ಮೇಳನದಲ್ಲಿ ಒಮ್ಮೆ ಹೀಗಾಯಿತಂತೆ– ಸವಾಯಿ ಗಂಧರ್ವರು ಹಾಡಬೇಕಾಗಿತ್ತು. ಮುಂಬಯಿನಿಂದ ಬಂದಿದ್ದ ಕಲಾವಿದೆಯೊಬ್ಬರು ತಾವು ವಾಪಸ್ ಹೋಗಬೇಕಾಗಿರುವುದರಿಂದ ತಮಗೆ ಅವಕಾಶ ನೀಡುವಂತೆ ಕೋರಿದರು. ವೇದಿಕೆಗೆ ಹೋದ ಆಕೆ ಸುದೀರ್ಘವಾಗಿ ಹಾಡಿದ್ದರಿಂದಾಗಿ ಇತರ ಕಲಾವಿದರು ಸಂಗೀತಸೇವೆ ಮಾಡಲು ಅವಕಾಶ ಇಲ್ಲದಂತಾಯಿತು. ಆಗ ಸಿತಾರ್‌ರತ್ನ ರಹಿಮತ್ ಖಾನರು ಸವಾಯಿ ಗಂಧರ್ವರಿಗೆ 'ರಾಂ ಭಾವು ಈಗ ನೀವು ಹಾಡ್ರಿ ಬ್ಯಾರೆ ಯಾರೂ ಬ್ಯಾಡ' ಎಂದರು. ಮುಂಬಯಿ ಕಲಾವಿದೆಯ ವರ್ತನೆಯಿಂದ ಸವಾಯಿ ಗಂಧರ್ವರಿಗೆ ಸಹಜವಾಗಿಯೇ ಸಿಟ್ಟು ಬಂದಿತ್ತು. ಅದನ್ನೆಲ್ಲ ಸಂಗೀತದಲ್ಲೇ ಇಳಿಸಿ ಸವಾಯಿ ಗಂಧರ್ವರು ಹಾಡಿದ್ದು ಹೇಗಿತ್ತೆಂದರೆ, ರಹಿಮತ್ ಖಾನರು ಅಬ್ದುಲ್ ಕರೀಂ ಖಾನ್ ಸಮಾಧಿಯೆಡೆ ಕೈ ತೋರಿಸಿ–'ವಾಹ್ ಅಲ್ಲಿ ನೋಡ್ರಿ. ಸಮಾಧೀನೂ ತಲಿ ಅಲ್ಲಾಡಸತದ' ಎಂದು ಉದ್ಗರಿಸಿದರು!

ಇಂತಹ ಮಹತ್ತಿನ ಗುರು ೧೯೫೨ರಲ್ಲಿ ಪುಣೆಯಲ್ಲಿ ನಿಧನರಾದರು. ಇದೇ ವೇಳೆಗೆ ದೆಹಲಿಯಲ್ಲಿ ಆಕಾಶವಾಣಿಯ ರಾಷ್ಟ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗಂಗೂಬಾಯಿ ಅವರಿಗೆ ಆಮಂತ್ರಣ ಬಂದಿತು. ಗುರುಗಳನ್ನು ಕಳೆದುಕೊಂಡ ದುಃಖದಲ್ಲಿದ್ದ

ಗಂಗೂಬಾಯಿ ಅವರಿಗೆ ಹಾಡಲು ಮನಸ್ಸಿರಲಿಲ್ಲ. ಮನೆಯವರು, ಸ್ನೇಹಿತರು ಪರಿಪರಿಯಾಗಿ ಹೇಳಿದರೂ ಗಂಗೂಬಾಯಿ ಅವರಿಗೆ ಹಾಡುವ ಮನಸ್ಸಾಗಲಿಲ್ಲ. ಆಕಾಶವಾಣಿ ರಾಷ್ಟ್ರೀಯ ಸಂಗೀತ ಕಾರ್ಯಕ್ರಮದಂತಹ ಪ್ರತಿಷ್ಠಿತ ವೇದಿಕೆಯಲ್ಲಿ ಹಾಡುವ ಅವಕಾಶ ಅವರ ಕೈತಪ್ಪಿ ಹೋಗುತ್ತಿತ್ತೇನೊ. ಗಂಗೂಬಾಯಿಯವರ ಗುರುಬಂಧು ಮತ್ತು ಸವಾಯಿ ಗಂಧರ್ವರ ಅಳಿಯ ಪುಣೆಯ ಡಾ. ನಾನಾ ಸಾಹೇಬ ದೇಶಪಾಂಡೆ ಅವರು 'ನೀವು ಹಾಡಲೇಬೇಕು. ಇದೇ ನೀವು ಗುರುಗಳಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ' ಎಂದರು. ಈ ಮಾತು ಗಂಗೂಬಾಯಿ ಅವರ ಮನಸ್ಸಿಗೆ ನಾಟಿತು. ದೆಹಲಿಗೆ ಹೋಗಿ ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಹಾಡಿ ಬಂದರು.

ಮುಂದೆ ಗುರುಗಳ ಸ್ಮರಣಾರ್ಥ ಗಂಗೂಬಾಯಿ ಅವರ ನೇತೃತ್ವದಲ್ಲಿ ಕುಂದಗೋಳದಲ್ಲಿ ಮತ್ತು ಭೀಮಸೇನ ಜೋಶಿ ಅವರ ನೇತೃತ್ವದಲ್ಲಿ ಪುಣೆಯಲ್ಲಿ ಸವಾಯಿ ಗಂಧರ್ವ ಸಂಗೀತ ಸಮ್ಮೇಳನ ನಡೆಸಲು ಆರಂಭಿಸಲಾಯಿತು. ಎರಡೂ ಸಂಗೀತ ಸಮ್ಮೇಳನಗಳೂ ದೇಶದ ಪ್ರತಿಷ್ಠಿತ ವೇದಿಕೆಗಳಾಗಿ ಬೆಳೆದಿದ್ದು ಇತಿಹಾಸ. ಕುಂದಗೋಳದ ಸಂಗೀತ ಸಮ್ಮೇಳನ ಹಲವಾರು ವರ್ಷಗಳ ಕಾಲ ಅಲ್ಲಿನ ನಾಡಿಗೇರ ವಾಡೆಯಲ್ಲಿ ನಡೆದು ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ವೇದಿಕೆಯಲ್ಲಿ ನಡೆಯುತ್ತಿದೆ. ಸಮ್ಮೇಳನಕ್ಕಾಗಿಯೇ ಸಭಾಂಗಣವನ್ನೂ ನಿರ್ಮಿಸಲಾಗುತ್ತಿದೆ.

ದೇಶಾದ್ಯಂತ ಪಸರಿಸಿದ ಖ್ಯಾತಿ

ಈ ವೇಳೆಗಾಗಲೇ ಗಂಗೂಬಾಯಿ ಅವರ ಗಾಯನದ ಖ್ಯಾತಿ ಹೇಗೆ ಹಬ್ಬಿತ್ತೆಂದರೆ ದೇಶದ ಎಲ್ಲ ಪ್ರತಿಷ್ಠಿತ ಸಂಗೀತ ಸಮ್ಮೇಳನಗಳಲ್ಲೂ ಅವರ ಗಾಯನ ಇರಲೇಬೇಕು ಎನ್ನುವಂತಾಗಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಗಂಗೂಬಾಯಿ ಅವರ ಸಂಗೀತ ಕಾರ್ಯಕ್ರಮಗಳು ಉತ್ತರ ಭಾರತದಲ್ಲಿಯೇ ಹೆಚ್ಚು ಎಂಬುದು. ಕ್ರಮೇಣ ಅದು ದೇಶದ ಇತರ ಭಾಗಗಳಿಗೂ ಹಬ್ಬಿತೆಂಬುದು ಬೇರೆ ಮಾತು. ದೇಶದ ವಿವಿಧ ಭಾಗಗಳಲ್ಲಿ ಆಕಾಶವಾಣಿ ಕೇಂದ್ರಗಳು ಆರಂಭವಾಗತೊಡಗಿದ್ದವು. ಎಲ್ಲ ಕೇಂದ್ರಗಳಿಂದ ಗಂಗೂಬಾಯಿ ಅವರ ಗಾಯನ ಪ್ರಸಾರವಾಗುತ್ತಿತ್ತು. ಹಾಗಾಗಿ ಪುಣೆ, ಇಂದೋರ್, ನಾಗಪುರ, ಜಲಂದರ್, ಕೊಲ್ಕತ್ತಾ, ಪಾಟ್ನಾ, ದೆಹಲಿ ಹೀಗೆ ಉತ್ತರದ ಎಲ್ಲ ಪ್ರಮುಖ ನಗರಗಳಲ್ಲಿ ಅವರ ಸಂಗೀತ ಅಭಿಮಾನಿಗಳ ಗುಂಪೇ ನಿರ್ಮಾಣಗೊಂಡಿತು ಎಂದರೆ ತಪ್ಪಾಗಲಾರದು. ೧೯೪೮ರಲ್ಲಿ ಪಾಟ್ನಾ ಆಕಾಶವಾಣಿ ಕೇಂದ್ರವನ್ನು ಗಂಗೂಬಾಯಿ ಹಾನಗಲ್ ಅವರೇ ಉದ್ಘಾಟಿಸಿದರು. ಅದೇ ವರ್ಷ ಕಾಶಿಯ ನಾಗರೀ ಪ್ರಚಾರಿಣಿ ಸಭೆ 'ಭಾರತೀ ಕಂಠ' ಎಂಬ ಬಿರುದನ್ನು ನೀಡಿ ಸನ್ಮಾನಿಸಿತು. ಇದು ಗಂಗೂಬಾಯಿ ಅವರು ಪಡೆದ ಮೊದಲ ಪುರಸ್ಕಾರ. ಇಲ್ಲಿಂದ ಮುಂದೆ ಪದ್ಮವಿಭೂಷಣದವರೆಗೆ ಸಂಗೀತ ಕ್ಷೇತ್ರದಲ್ಲಿ

ದೇಶದ ಎಲ್ಲ ಪ್ರಮುಖ ಪ್ರಶಸ್ತಿಗಳೂ ಅವರ ಮುಡಿಗೇರಿದವು.

೧೯೫೪ರಲ್ಲಿ ಜೈಪುರದಲ್ಲಿ ಗಂಗೂಬಾಯಿ ಹಾನಗಲ್ ಅವರ ಸಂಗೀತ ಕಾರ್ಯಕ್ರಮವನ್ನು ಮಹಾರಾಣಿ ಗಾಯತ್ರಿದೇವಿ ಏರ್ಪಡಿಸಿದ್ದರು. ಆಗ ತಾನೇ ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತು. ಜವಾಹರಲಾಲ್ ನೆಹರು ಅವರು ಪ್ರಧಾನಿಯಾಗಿದ್ದರು. ಪ್ರಧಾನಿ ನೆಹರು ಅವರನ್ನು ಗಂಗೂಬಾಯಿ ಅವರ ಕಾರ್ಯಕ್ರಮಕ್ಕೆ ಗಾಯತ್ರಿದೇವಿ ಆಹ್ವಾನಿಸಿದ್ದರು. ಗಂಗೂಬಾಯಿ ಅವರ ಗಾಯನವನ್ನು ಕೇಳಿ ನೆಹರು ಅವರು ತುಂಬ ಪ್ರಶಂಸೆ ವ್ಯಕ್ತಪಡಿಸಿದರು. ಈ ಘಟನೆಯನ್ನು ಗಂಗೂಬಾಯಿ ತುಂಬು ಅಭಿಮಾನದಿಂದ ನೆನೆಯುತ್ತಿದ್ದರು.

ನಲವತ್ತರ ದಶಕದ ಅಂತ್ಯದಲ್ಲಿ ಗಂಗೂಬಾಯಿ ಅವರ ಸಂಗೀತ ಬದುಕಿನ ಉಚ್ಛ್ರಾಯ ದಿನಗಳು ಆರಂಭವಾಗಿದ್ದವು. ಆಕಾಶವಾಣಿಯಲ್ಲಿ ಚೈನ್ ಬುಕಿಂಗ್ ಕಾರ್ಯಕ್ರಮಗಳು ಇರುತ್ತಿದ್ದವು. ಅಂದರೆ ಮೂರ್‍ನಾಲ್ಕು ಆಕಾಶವಾಣಿ ಕೇಂದ್ರಗಳಲ್ಲಿ ಒಂದರ ಹಿಂದೆ ಒಂದರಂತೆ ಧ್ವನಿಮುದ್ರಣ ನೀಡಬೇಕಾಗುತ್ತಿತ್ತು. ಗಣೇಶ ಚತುರ್ಥಿ ದಿನಗಳಲ್ಲಂತೂ ಮುಂಬೈ ಮತ್ತು ಪುಣೆ ಗಂಗೂಬಾಯಿ ಅವರ ಮನೆಯೇ ಆಗಿ ಬಿಡುತ್ತಿತ್ತು. ಗಿರಗಾಂವ್‌ನ ಗಣಪತಿ ಪೆಂಡಾಲಿನಲ್ಲಿ ಒಂದೆಡೆ ಗಂಗೂಬಾಯಿ ಅವರ ಗಾಯನ ನಡೆದಿದ್ದರೆ, ಎದುರುಗಡೆ ಹೀರಾಬಾಯಿ ಬಡೋದೆಕರ್ ಅವರ ಗಾಯನ ನಡೆದಿರುತ್ತಿತ್ತು. 'ಮುಂಬೈನಾಗ ಇಷ್ಟ ಕಾರ್ಯಕ್ರಮ ಇರ್ತಿದ್ವಲ್ಲಾ, ಮನಿ ಗಣಪತಿ ನೋಡೂದ ಆಗ್ತಿರಲಿಲ್ಲ' ಎಂದಿದ್ದಾರೆ ಗಂಗೂಬಾಯಿ. ಅಖಂಡ ಭಾರತ ಇದ್ದಾಗಲೂ, ಸ್ವಾತಂತ್ರ್ಯ ಬಂದ ಮೇಲೂ ಪಾಕಿಸ್ತಾನದ ಕರಾಚಿಗೆ ಹೋಗಿ ಹಾಡಿ ಬಂದರು.

ಒಮ್ಮೆ ಪೇಶಾವರದ ಆಕಾಶವಾಣಿ ಕೇಂದ್ರದಲ್ಲಿ ಹಾಡಲು ಕರೆ ಬಂತು. ಅಷ್ಟು ದೂರ ಹೋಗುವುದು ಹೇಗೆ ಎಂಬ ಚಿಂತೆ ಗಂಗೂಬಾಯಿ ಅವರಿಗೆ. ಆದರೆ ಮುಂಬಯಿ ಆಕಾಶವಾಣಿ ಕೇಂದ್ರದ ನಿರ್ದೇಶಕರಾಗಿದ್ದ ಬೊಖಾರಿ ಅವರ ಮಾತಿಗೆ ಕಟ್ಟು ಬಿದ್ದು ಅಲ್ಲಿಗೆ ಹೋಗಬೇಕಾಯಿತು. ಅಲ್ಲಿ ಹೋದರೆ ಆಕಾಶವಾಣಿ ಕೇಂದ್ರದಲ್ಲಿ ಇವರ ಶ್ರುತಿಯ ತಾನ್‌ಪುರಾ ಇರಲಿಲ್ಲ. ಒಂದು ತಂತಿಯ ಒಂದು ತಂಬೂರಿ ಇತ್ತು. ಅದೂ ಬೇರೆ ಶ್ರುತಿಯದ್ದು. ಮತ್ತೇನು ಮಾಡಲೂ ತೋಚಲಿಲ್ಲ. ಕೊನೆಗೆ ಕ್ಲಾರಿಯೊನೆಟ್ ವಾದ್ಯದೊಂದಿಗೆ ತಮ್ಮ ಗಾಯನವನ್ನು ಪ್ರಸ್ತುತಪಡಿಸಬೇಕಾಯಿತು!

ಒಮ್ಮೆ ಕಲ್ಕತ್ತಾ ಸಂಗೀತ ಸಮ್ಮೇಳನದಲ್ಲಿ ಗಂಗೂಬಾಯಿ ಅವರು ಹಾಡುವವರಿದ್ದರು. ಅಂದು ಉಸ್ತಾದ್ ಅಲ್ಲಾರಖಾ ಅವರು ಮೂವರು ಕಲಾವಿದರಿಗೆ ತಬಲಾ ಸಾಥ್ ನೀಡುವುದೆಂದು ನಿರ್ಧಾರವಾಗಿತ್ತು. ನಾಲ್ಕನೆಯವರಾಗಿ ಗಂಗೂಬಾಯಿ ಗಾಯನವನ್ನು ಪ್ರಸ್ತುತಪಡಿಸಬೇಕಾಗಿತ್ತು. ಮೂವರು ಕಲಾವಿದರಿಗೆ ಸಾಥ್ ನೀಡಿದ ಅಲ್ಲಾರಖಾ ಅವರಿಗೆ ವಿಶ್ರಾಂತಿ ಸಿಗಲಿ ಎಂದು ಗಂಗೂಬಾಯಿ ಅವರೊಂದಿಗೆ ಬೇರೆ ತಬಲಜೀ ಅವರನ್ನು ಹಾಕಲಾಗಿತ್ತು. ಅಪರಿಚಿತ ತಬಲಜೀಯೊಂದಿಗೆ ಹಾಡಲು ಗಂಗೂಬಾಯಿ ಒಪ್ಪದೇ

ಆಕ್ಷೇಪ ವ್ಯಕ್ತಪಡಿಸಿದರು. ಆಗ ಅಲ್ಲಾರಖಾ ಅವರು ಮಧ್ಯೆ ಪ್ರವೇಶಿಸಿ 'ನಾವೆಲ್ಲ ಮುಂಬಯಿಯಿಂದ ಬಂದಿದ್ದೇವೆ. ನಮ್ಮೆಲ್ಲರ ಕಾರ್ಯಕ್ರಮವೂ ಚೆನ್ನಾಗಿ ಆಗಬೇಕು. ನಾನೇ ಸಾಥ್ ನೀಡುತ್ತೇನೆ' ಎಂದರು. ಅಲ್ಲಿಂದ ಮುಂದೆ ಗಂಗೂಬಾಯಿ ಮತ್ತು ಅಲ್ಲಾರಖಾ ಅವರಲ್ಲಿ ಸ್ನೇಹ ಸಂಬಂಧ ಬೆಳೆಯುವಂತಾಯಿತು.

ಗಂಡುಧ್ವನಿ

ಈ ಮಧ್ಯೆ ಅವರನ್ನು ಗಂಟಲುಬೇನೆ ಕಾಡಲಾರಂಭಿಸಿತು. ಹಾಡುವವರಿಗೆ ಕಂಠವೇ ಆಧಾರ. ಯಾವ ಚಿಕಿತ್ಸೆಯೂ ಫಲಕಾರಿ ಆಗದಿದ್ದಾಗ, ಅವರ ಕುಟುಂಬವೈದ್ಯ ಡಾ.ಜಿ. ವಿ. ಜೋಶಿ ಅವರು ಗಂಟಲಿನಲ್ಲಿ ಬೆಳೆದ ದುರ್ಮಾಂಸವನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ಹಾಕಬೇಕಾಯಿತು. ಗಂಟಲು ಬೇನೆಯೇನೊ ಹೋಯಿತು ಆದರೆ ಜತೆಗೆ ಗಂಗೂಬಾಯಿ ಅವರ ಮಧುರ ಕಂಠವನ್ನೂ ಕಿತ್ತುಕೊಂಡಿತು. ಗಡಸು ಕಂಠದ ದಪ್ಪ ಧ್ವನಿ ಬಂದಿತು. ಹಾಡುವುದು ಹೇಗೆ ಎಂಬ ಪ್ರಶ್ನೆ ಅವರನ್ನೂ ಕಾಡಿರಬೇಕು. 'ಹಾಡುವುದು ಅನಿವಾರ್ಯ ಕರ್ಮ' ವಾಗಿದ್ದ ಗಂಗೂಬಾಯಿ ಅದೇ ಧ್ವನಿಯನ್ನು ಗಾಯಕಿಗೆ ಒಗ್ಗಿಸಿಕೊಂಡು ಬಿಟ್ಟರು. ಮೊದಲೇ ಪಕ್ಕಾ ಸವಾಯಿ ಗಂಧರ್ವರ ಶೈಲಿಯಲ್ಲಿ ಹಾಡುತ್ತಿದ್ದರು. ಇದೀಗ ಗಂಡಸಿನ ಕಂಠವೂ ಸೇರಿಕೊಂಡು ಸವಾಯಿ ಗಂಧರ್ವರ ಗಾಯನದ ಅನುಭವವನ್ನೇ ಅವರ ಗಾಯನವೂ ಕೊಡುತ್ತಿತ್ತು.

ಪ್ರಯಾಸದ ಪ್ರವಾಸಗಳು

ಸಂಗೀತ ಕಾರ್ಯಕ್ರಮಗಳಿಗೆ ಊರೂರು ಓಡಾಡಬೇಕಾದಾಗ ಎಲ್ಲ ಸಂದರ್ಭಗಳೂ ಕಲಾವಿದರಿಗೆ ಅನುಕೂಲಕರವಾಗಿಯೇ ಇರುತ್ತವೆ ಎನ್ನಲಾಗದು. ಅಮೃತಸರ ಆಕಾಶವಾಣಿಯ ಕಾರ್ಯಕ್ರಮಕ್ಕೆ ಹೋದಾಗಿನ ಘಟನೆ ಇದಕ್ಕೊಂದು ನಿದರ್ಶನದಂತಿದೆ. ಆಕಾಶವಾಣಿ ಕಾರ್ಯಕ್ರಮದ ಹಿಂದಿನ ದಿನ ಸಾರ್ವಜನಿಕ ಕಾರ್ಯಕ್ರಮ ಇತ್ತು. ಅದಕ್ಕಾಗಿ ಗಂಗೂಬಾಯಿ, ರಾಮಣ್ಣ, ಲಾಲ್‌ಜಿ ಗೋಖಲೆ, ಕುಮಾರ ಗಂಧರ್ವ ಇವರೆಲ್ಲ ಹೋಗಿದ್ದರು. ದೊಡ್ಡ ಶಾಮಿಯಾನಾ ಹಾಕಿಸಿ ಭರ್ಜರಿ ವ್ಯವಸ್ಥೆ ಮಾಡಲಾಗಿತ್ತು. ಆದರೆ ಹಿಂದಿನ ದಿನ ರಾತ್ರಿ ಭಾರೀ ಮಳೆಯಾಗಿ ಶಾಮಿಯಾನಾ ಹರಿದು ಹೋಯಿತು. ಕಾರ್ಯಕ್ರಮ ಅಂದು ನಡೆಯದೇ ಮರುದಿನ ಬೆಳಿಗ್ಗೆ ಇನ್ನೊಂದು ಸಭಾಂಗಣದಲ್ಲಿ ನಡೆಯಿತು. ಕಲಾವಿದರಿಗೆ ಸಂಭಾವನೆ ಕೊಡಬೇಕಾದ ವ್ಯವಸ್ಥಾಪಕರು ಕಾರ್ಯಕ್ರಮ ಮುಗಿಯುವ ಹೊತ್ತಿಗೆ ನಾಪತ್ತೆಯಾಗಿದ್ದರು. ಅವರಿಗಾಗಿ ಕಾಯುತ್ತ ನಿಲ್ಲುವಂತಿರಲಿಲ್ಲ. ಆಕಾಶವಾಣಿ ಕಾರ್ಯಕ್ರಮದ ವೇಳೆಯಾಗಿತ್ತು. ಹಾಗಾಗಿ ಎಲ್ಲರೂ ನಡೆದುಕೊಂಡೇ ಆಕಾಶವಾಣಿಯತ್ತ ಹೊರಟರು. ಇವರನ್ನು ಗುರುತಿಸಿದ ಟಾಂಗಾದವನೊಬ್ಬ ಅವರನ್ನು

ಆಕಾಶವಾಣಿ ಕೇಂದ್ರಕ್ಕೆ ತಲುಪಿಸಿದ. ಆಕಾಶವಾಣಿಯಲ್ಲಿ ಕಾರ್ಯಕ್ರಮ ಮುಗಿದ ಮೇಲೆ ಚೆಕ್ ಸಿಕ್ಕಿತು. ಕುಮಾರ ಗಂಧರ್ವರು ತಮ್ಮ ಪರಿಚಯಸ್ಥರ ಸಹಾಯ ಪಡೆದು ಅದನ್ನು ನಗದು ಮಾಡಿಸಿಕೊಂಡು ಬಂದರು. ಆ ಹಣದಲ್ಲಿ ಎಲ್ಲರೂ ತಮ್ಮತಮ್ಮ ಊರು ತಲುಪುವುದಾಯಿತು.

ಕಲ್ಕತ್ತೆಯಲ್ಲಿ ಇನ್ನೊಮ್ಮೆ ಕಾರ್ಯಕ್ರಮದ ಟಿಕೆಟ್ ಮಾರಾಟದ ಹೊಣೆಯನ್ನು ಹೊತ್ತಿದ್ದ ಏಜೆಂಟ್, ದುಡ್ಡು ತೆಗೆದುಕೊಂಡು ಪರಾರಿಯಾಗಿ ಬಿಟ್ಟಿದ್ದ. ಕಾರ್ಯಕ್ರಮ ಆಯೋಜಕರು ಕಲಾವಿದರ ಮುಂದೆ ತಮ್ಮ ಅಸಹಾಯಕತೆಯನ್ನು ಹೇಳಿಕೊಂಡಾಗ, ಅವರು ಕೊಟ್ಟಷ್ಟು ಹಣದಲ್ಲಿ ಕಲಾವಿದರು ವಾಪಸ್ ಬರಬೇಕಾಯಿತು.

ಪಾಟ್ನಾ ಆಕಾಶವಾಣಿ ಕೇಂದ್ರದ ಉದ್ಘಾಟನೆಗೆ ಹೋದಾಗಿನ ಘಟನೆ. ರೈಲಿನಲ್ಲಿ ಹೋದ ರಾಮಣ್ಣ ಮತ್ತು ಗಂಗೂಬಾಯಿ ರೈಲು ನಿಲ್ದಾಣದಲ್ಲಿ ನಿಂತೆ ಇದ್ದರು. ಎಷ್ಟು ಹೊತ್ತಾದರೂ ಯಾರೂ ಕರೆಯಲು ಬರಲಿಲ್ಲ. ಆಗ ಪಾಟ್ನಾದಲ್ಲಿದ್ದ ವಿಜಯಾ ಮುಳೆ (ಮುಂದೆ ಇವರು ಗಂಗೂಬಾಯಿ ಅವರ ಬಗ್ಗೆ ತುಂಬ ಸಂವೇದನಾಶೀಲವಾದ ಸಾಕ್ಷ್ಯ ಚಿತ್ರ ನಿರ್ಮಿಸಿದರು) ಅವರ ಪತಿ ಯಾವುದೋ ಕಾರಣಕ್ಕೆ ರೈಲು ನಿಲ್ದಾಣಕ್ಕೆ ಹೋದವರು ಇವರನ್ನು ನೋಡಿ 'ಏನಾದರೂ ಸಹಾಯ ಬೇಕೆ?' ಎಂದರು. ತಮ್ಮ ಪರಿಸ್ಥಿತಿಯನ್ನು ವಿವರಿಸಿ 'ಯಾವುದಾದರೂ ಒಳ್ಳೆಯ ಹೊಟೆಲ್ ತೋರಿಸಿ' ಎಂದು ಗಂಗೂಬಾಯಿ ಕೇಳಿದರು. ತಮ್ಮ ಮನೆಗೆ ಹೋಗೋಣ ಎಂಬ ಮುಳೆ ಅವರ ಆಮಂತ್ರಣವನ್ನು ಸಂಕೊಚದಿಂದಾಗಿ ಒಪ್ಪಲಿಲ್ಲ. ಆಗ ಪಾಟ್ನಾದಲ್ಲಿ ಒಳ್ಳೆಯ ವಸತಿ ಗೃಹಗಳಿರಲಿಲ್ಲ. ಇದ್ದ ಒಂದೆರಡು ಅವರಿಗೆ ಒಪ್ಪಿಗೆ ಆಗದೇ ಕೊನೆಗೆ ಮುಳೆಯವರಲ್ಲಿ ನಿಮ್ಮ ಆಮಂತ್ರಣವನ್ನೇ ಒಪ್ಪಿ ಬರುತ್ತೇವೆ ಎಂದು ಅವರ ಮನೆಯಲ್ಲಿಯೇ ಇಳಿದುಕೊಂಡರು. ಅವರ ಸರಳತೆಯಿಂದಾಗಿ ಅವರು ಬಹುಬೇಗ ಎಲ್ಲರಲ್ಲಿ ಒಂದಾಗುತ್ತಿದ್ದರು.

ಗಂಗೂಬಾಯಿ ಅವರಿಗೆ ಮೂವರು ಮಕ್ಕಳು. ಹಿರಿಯ ಮಗಳು ಕೃಷ್ಣಾ, ನಂತರ ಬಾಬುರಾವ್ ಮತ್ತು ನಾರಾಯಣರಾವ್. ಅವರಲ್ಲಿ ಕೃಷ್ಣಾ ಚಿಕ್ಕವರಿದ್ದಾಗ ಅವರಿಗೆ ಮೇಲಿಂದ ಹೊಟ್ಟೆ ನೋವು ಬರುತ್ತಿತ್ತು. ಮೊದಲೇ ಸೂಕ್ಷ್ಮ ಸ್ವಭಾವದ ಗಂಗೂಬಾಯಿ ಅವರಿಗೆ ಮಗಳನ್ನು ಬಿಟ್ಟು ಹೋಗುವುದು ಸಾಧ್ಯವಾಗುತ್ತಿರಲಿಲ್ಲ. ಅವರನ್ನು ಜತೆಯಲ್ಲಿ ಕರೆದುಕೊಂಡೇ ಹೋಗುತ್ತಿದ್ದರು. ಎಷ್ಟೋ ಸಾರಿ ಗ್ರೀನ್ ರೂಮಿನಲ್ಲಿ ಮಗು ಅಳುತ್ತಿದ್ದರೆ ಅದನ್ನು ಕೇಳಿಕೊಂಡೇ ಹಾಡಿದ್ದೂ ಇದೆ. ದೊಡ್ಡ ಅವಿಭಕ್ತ ಕುಟುಂಬದ ಜವಾಬ್ದಾರಿ ಹೊತ್ತಿದ್ದ ಅವರಿಗೆ ಮನೆ ಮತ್ತು ಬೆಳೆಯುತ್ತಿದ್ದ ಮಕ್ಕಳ ಜವಾಬ್ದಾರಿ ಎಷ್ಟೋ ಬಾರಿ ಚಿಂತೆಗೆ ಈಡು ಮಾಡುತ್ತಿತ್ತು. 'ಹಾಡುವವರಿಗೆ ಮನಶ್ಶಾಂತಿ ಮುಖ್ಯ ಎನ್ನುತ್ತಾರೆ. ಕೆಲವರು ತಂಬೂರಿ ಸ್ವರ ಕೇಳಿದ ಕೂಡಲೇ ಅದರಲ್ಲಿ ತಲ್ಲೀನರಾಗಿ ಹಾಡುತ್ತೇವೆ ಎನ್ನುತ್ತಾರೆ. ಆದರೆ ನನಗೆ ಎಷ್ಟೋ ಸಾರಿ ಮನೆಯ ಕಷ್ಟಗಳು, ಜವಾಬ್ದಾರಿ ಕಣ್ಣ

ಮುಂದೆ ಬರುತ್ತಿತ್ತು. ಯಾವ್ಯಾವುದೋ ನೋವಿನ ಕ್ಷಣಗಳ ನೆನಪಿನಲ್ಲೇ ತೋಡಿ, ಜೋಗಿಯಾ, ದರ್ಬಾರಿಯಂತಹ ರಾಗಗಳನ್ನು ಹಾಡಿದ್ದೇನೆ. ನಾನು ಕಣ್ಣೀರು ತುಂಬಿ ಹಾಡುತ್ತಿದ್ದರೆ, ಜನ, ಭಾವ ಪರವಶರಾಗಿ ಸಂತಸ ಪಡುತ್ತಿದ್ದುದು ವಿಚಿತ್ರ ಎನ್ನಿಸುತ್ತದೆ' ಎಂದು ಗಂಗೂಬಾಯಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಪತಿ ವಕೀಲರಾಗಿದ್ದರೂ ಅವರು ವಕೀಲಿ ವೃತ್ತಿಯಲ್ಲಿ ಯಶಸ್ವಿಯಾಗಲಿಲ್ಲ. ವ್ಯಾಪಾರ ಮಾಡುವ ಪ್ರಯತ್ನದಲ್ಲೂ ಅವರು ಯಶಸ್ವಿಯಾಗಿರಲಿಲ್ಲ. ಅವರು ಹೊಸ ಹೊಸ ವ್ಯಾಪಾರ ಆರಂಭಿಸಲು ಗಂಗೂಬಾಯಿ ತಾವು ಕಛೇರಿಯಲ್ಲಿ ಪಡೆದ ಸಂಭಾವನೆಯನ್ನು ನೀಡುತ್ತಿದ್ದರು. ವ್ಯಾಪಾರ ಸರಿಯಾಗಿ ನಡೆಯದೇ ನಷ್ಟ ಉಂಟಾದಾಗ ಸಾಲ ಸೋಲ. ಅದನ್ನು ಮತ್ತೆ ಗಂಗೂಬಾಯಿ ಅವರೇ ತೀರಿಸುವುದು. ಹೀಗೇ ನಡೆದಿತ್ತು. ಇದೆಲ್ಲದರ ಮಧ್ಯೆಯೇ ಕೌಲಗಿಯವರು ಗಂಗೂಬಾಯಿ ಅವರಿಗಾಗಿ ಹುಬ್ಬಳ್ಳಿಯ ದೇಶಪಾಂಡೆ ನಗರದಲ್ಲಿ ಆ ಕಾಲಕ್ಕೆ ೧೨ ಸಾವಿರ ರೂಪಾಯಿ ಖರ್ಚು ಮಾಡಿ ಮನೆ ಕಟ್ಟಿಸಿಕೊಟ್ಟಿದ್ದರು. ಒಮ್ಮೆ ವ್ಯಾಪಾರದಲ್ಲಿ ತುಂಬ ನಷ್ಟವಾಗಿ ಆ ಮನೆಯ ಮೇಲೆ ತೆಗೆದ ಸಾಲ ತೀರಿಸಲು ಸಾಧ್ಯವಾಗದೇ ಮನೆ ಲಿಲಾವಿಗೆ ಬಂತು. ಮಾನ ಹೋಗುವ ಸಂದರ್ಭ. ಆಗ ಗಂಗೂಬಾಯಿ ಅವರ ಆತ್ಮೀಯರಾಗಿದ್ದ ಉಡುಪಿಯ ಉಪೇಂದ್ರ ನಾಯಕ ಎಂಬುವವರು– ಅವರು ಬ್ಯಾಂಕ್ ಉದ್ಯೋಗಿ ಆಗಿದ್ದರು– ಮನೆಯನ್ನು ಲಿಲಾವಿನಲ್ಲಿ ತಾವು ಖರೀದಿಸಿದರು. ಮತ್ತು ಅದನ್ನು ಗಂಗೂಬಾಯಿ ಅವರಿಗೇ ನೀಡಿ ಅನುಕೂಲವಾದಾಗ ಹಣ ನೀಡುವಂತೆ ತಿಳಿಸಿದರು. ಇದರಿಂದ ಗಂಗೂಬಾಯಿ ಮತ್ತು ಅವರ ಪರಿವಾರ ಸೂರಿಲ್ಲದೇ ಅನಾಥರಾಗುವ ಪರಿಪಾಟಲು ತಪ್ಪಿತು.

ಪತಿಯ ಮರಣ

ಇದೆಲ್ಲದರ ಮಧ್ಯೆ ಗುರುನಾಥ ಕೌಲಗಿಯವರಿಗೆ ಕ್ಯಾನ್ಸರ್ ರೋಗ ತಗುಲಿದೆ ಎಂಬುದು ಪತ್ತೆಯಾಯಿತು. ಗಂಗೂಬಾಯಿ ಮತ್ತೆ ದಿಕ್ಕೆಟ್ಟಂತಾದರು. ಕೌಲಗಿಯವರ ದೇಹಸ್ಥಿತಿ ಹದಗೆಡುತ್ತಲೇ ಹೋದಾಗ, ಕುಟುಂಬದ ಆಪ್ತರಾಗಿದ್ದ ಡಾ.ಜಿ. ವಿ. ಜೋಶಿ ಅವರು ಕೌಲಗಿಯವರನ್ನು ಕೆಎಂಸಿ ಆಸ್ಪತ್ರೆಗೆ ಸೇರಿಸಿದ್ದರು. ಇಂತಹ ಸಂದರ್ಭದಲ್ಲಿ ಗಂಗೂಬಾಯಿ ಅವರಿಗೆ ಮುಂಬಯಿಯಲ್ಲಿ ಕಾರ್ಯಕ್ರಮಕ್ಕೆ ಆಹ್ವಾನ ಬಂತು. ಗಂಗೂಬಾಯಿ ಹೋದಾರಾದರೂ ಹೇಗೆ? ಆದರೆ ಕೌಲಗಿಯವರು 'ನನಗೇನೂ ಆಗಿಲ್ಲ. ನಿನಗೆ ಇಷ್ಟು ಹಣಕಾಸಿನ ತೊಂದರೆ ಇರುವಾಗ ಕಾರ್ಯಕ್ರಮ ತಪ್ಪಿಸಿಕೊಳ್ಳುವುದು ಬೇಡ' ಎಂದು ಒತ್ತಾಯ ಮಾಡಿ ಮುಂಬಯಿಗೆ ಕಳಿಸಿದರು. ಮಗಳು ಕೃಷ್ಣಾಳೊಂದಿಗೆ ಮುಂಬಯಿಗೆ ಹೋದರು. ತುಂಬ ಒಳ್ಳೆಯ ಕಾರ್ಯಕ್ರಮವೂ ಆಯಿತು. ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಹುಬ್ಬಳ್ಳಿಗೆ ರೈಲು ಹತ್ತಿದರು. ಬೆಳಗಿನ ಜಾವ ಹುಬ್ಬಳ್ಳಿ ತಲುಪಿದಾಗ, ಎಂದಿನಂತೆ

ಕರೆದುಕೊಂಡು ಹೋಗಲು ಮಗ ಬಾಬಣ್ಣ ರೈಲ್ವೆ ನಿಲ್ದಾಣಕ್ಕೆ ಬಂದಿರಲಿಲ್ಲ. ಗಂಗೂಬಾಯಿ ಅವರಿಗೆ ಏನೋ ಆಗಬಾರದ್ದು ಆಗಿದೆ ಎಂದು ಖಾತ್ರಿಯಾಗಿ ಹೋಯಿತು. ಮನೆ ಮುಟ್ಟಿದಾಗ ಗುರುನಾಥ ಕೌಲಗಿಯವರು ನಿಧನರಾಗಿದ್ದರು (೧೯೬೬, ಮಾರ್ಚ್ ೬). ಹಿಂದಿನ ದಿನ ಇವರ ಕಾರ್ಯಕ್ರಮ ಮುಂಬಯಿಯಲ್ಲಿ ನಡೆಯುತ್ತಿದ್ದ ವೇಳೆಯೆ ಅವರು ಇಹಲೋಕ ತ್ಯಜಿಸಿದ್ದರು.

ಅಸಲಿಗೆ ಗುರುನಾಥ ರಾಯರ ನಿಧನ ವಾರ್ತೆಯನ್ನು ಹೊತ್ತ ತಂತಿ ಗಂಗೂಬಾಯಿ ಅವರು ಹುಬ್ಬಳ್ಳಿಗೆ ರೈಲು ಹತ್ತುವುದಕ್ಕೆ ಮುನ್ನವೇ ಮುಂಬಯಿಯನ್ನು ತಲುಪಿತ್ತು. ಅದನ್ನು ಸ್ವೀಕರಿಸಿದ ವಿಜಯಾ ಮುಳೆ (ಗಂಗೂಬಾಯಿ ಅವರ ಸಂಗೀತದ ಅಭಿಮಾನಿ, ಅವರ ಬಗ್ಗೆ ಸಾಕ್ಷ್ಯ ಚಿತ್ರವನ್ನು ನಿರ್ಮಿಸಿದ್ದಾರೆ.) ಅವರು, ಈ ವಿಷಯವನ್ನು ಈಗಲೇ ತಿಳಿಸಿದರೆ ಗಂಗೂಬಾಯಿ ಅವರು ಹುಬ್ಬಳ್ಳಿಯವರೆಗೂ ಅಳುತ್ತಲೇ ಹೋಗುತ್ತಾರೆ. ಹೇಗೂ ಅಲ್ಲಿ ಹೋದ ಮೇಲೆ ತಿಳಿದೇ ತಿಳಿಯುತ್ತದೆ. ಈಗ ಹೇಳುವುದು ಬೇಡ ಎಂದು ನಿರ್ಧರಿಸಿ ಸುಮ್ಮನಾಗಿಬಿಟ್ಟರು.

ಪತಿ ನಿಧನರಾದಾಗ ಗಂಗೂಬಾಯಿ ಅವರಿಗೆ ೫೩ ವರ್ಷ. ಗುರುಗಳು ನಿಧನರಾದ ಸಂದರ್ಭದಂತೆ ಈಗಲೂ ಆಕಾಶವಾಣಿ ಸಂಗೀತ ಸಮ್ಮೇಳನಕ್ಕೆ (ಏಪ್ರಿಲ್ ೧೨) ದೆಹಲಿಗೆ ಕರೆ ಬಂತು. ಹೋಗುವ ಮನಸ್ಥಿತಿಯಲ್ಲಿಲ್ಲದ ಗಂಗೂಬಾಯಿ ಅವರಿಗೆ ನಾ.ಸು.ಹರ್ಡೀಕರ್ ಅವರು 'ಗುರುಗಳ ಪರಂಪರೆಯನ್ನು ಮುಂದುವರಿಸುವುದು ನಿನ್ನ ಕರ್ತವ್ಯ. ಇದರಿಂದ ನೀನು ವಿಮುಖಳಾಗಬಾರದು' ಎಂದು ಮನವೊಲಿಸಿದರು. ಗಂಗೂಬಾಯಿ ಅವರ ಅಭಿನಂದನಾ ಗ್ರಂಥದಲ್ಲಿ ಖ್ಯಾತ ಕಾದಂಬರಿಕಾರ ಎಸ್.ಎಲ್ ಭೈರಪ್ಪ ಅವರು ನಡೆಸಿದ ಸಂದರ್ಶನದಲ್ಲಿ ಈ ಘಟನೆಯನ್ನು ವಿವರಿಸಿದ್ದಾರೆ. 'ನಾ ಯಾಕ ಇದ್ನೆಲ್ಲ ಹೇಳತೀನಿ ಅಂದರ ಒಮ್ಮೊಮ್ಮೆ ಪರಿಸ್ಥಿತಿ ಹಿಂಗ ಬಂತಲ್ಲಾ, ಅವ್ರು ಸಾಯತಾ ಇದ್ರೂ ನಾನ್ ಹಾಡಬೇಕಾಗ್ತಿತ್ತು' ಎಂದಿದ್ದಾರೆ. ಕಲಾವಿದ ಬದುಕಿನ ವೈರುಧ್ಯವೇ ಅದು. ತಮ್ಮ ನೋವನ್ನು ಬಚ್ಚಿಟ್ಟು ಇನ್ನೊಬ್ಬರ ಸಂತಸಕ್ಕೆ ಕಾರಣರಾಗುವುದು. ಇದನ್ನು ಗಂಗೂಬಾಯಿ ಅವರ ಬದುಕಿನುದ್ದಕ್ಕೂ ನೋಡಬಹುದು.

ಪ್ರಮುಖ ಪ್ರಶಸ್ತಿಗಳು

ಗಂಗೂಬಾಯಿ ಹಾನಗಲ್ ಸಂಗೀತ ಕ್ಷೇತ್ರದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿದರು. ಅದನ್ನು ಗುರುತಿಸಿ ವಿವಿಧ ಪ್ರಶಸ್ತಿಗಳು ಅವರನ್ನು ಅರಸಿ ಬಂದವು. ೧೯೬೨ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ೭೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಹಾಗೂ ೭೩ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (ಇವುಗಳಲ್ಲಿ ಕೆಲವು ಪ್ರಶಸ್ತಿ – ಪುರಸ್ಕಾರಗಳ ವಿವರಕ್ಕೆ ಪುಸ್ತಕದ ಕೊನೆಯಲ್ಲಿ ನೀಡಿರುವ ಪಟ್ಟಿಯನ್ನು ನೋಡಿ).

೧೯೭೧ ರಲ್ಲಿ ಪದ್ಮಭೂಷಣ ಪ್ರಶಸ್ತಿ ಬಂದಿತು. ಪ್ರಶಸ್ತಿ ಪುರಸ್ಕಾರಗಳ ಬಗ್ಗೆ ಅವರಿಗೆ ಅಂಥ ಮಮಕಾರವೇನೂ ಇರಲಿಲ್ಲ. ಆದರೆ ಸಹಜ ಆಸಕ್ತಿ, ಕುತೂಹಲ ಇದ್ದೇ ಇರುತ್ತದೆ ಎಂಬುದನ್ನು ಮುಕ್ತವಾಗಿ ಹೇಳುವ ಮೂಲಕ ಮತ್ತೊಮ್ಮೆ ತಮ್ಮ ದೊಡ್ಡತನವನ್ನು ಮೆರೆದಿದ್ದಾರೆ. ಪದ್ಮಭೂಷಣ ಬಂದ ಸಂದರ್ಭದ ವಿವರ ಇದನ್ನು ಚೆನ್ನಾಗಿ ಕಟ್ಟಿಕೊಡುತ್ತದೆ.

'ಜನವರಿ ೨೫ರ ರಾತ್ರಿ ಸುದ್ದಿಯೊಳಗ ಹೇಳಬಹುದು ಎಂದು ತಿಳಿಸಿದ್ದರು. ನಾನು ಮತ್ತು ರಾಮಣ್ಣ ರೇಡಿಯೊದ ಮುಂದೆ ಕುಳಿತುಕೊಂಡೆವು. ಒಂಬತ್ತರ ಸುದ್ದಿಯಲ್ಲಿ ಅನೌನ್ಸ್ ಆಗಲಿಲ್ಲ. ಊಟ ಮುಗಿಸಿ ಮತ್ತೆ ರೇಡಿಯೊ ಮುಂದೆ ಕುಳಿತೆವು. ಇಂತಹ ಮಹತ್ವದ ಮಹಾಮರ್ಯಾದೆಯೊಂದು ಘೋಷಿತವಾಗುವಾಗ ಯಾರಿಗೇ ಆಗಲೀ ಕುತೂಹಲ ಇರುವುದು ಸ್ವಾಭಾವಿಕ. ಸಾರ್ವಜನಿಕವಾಗಿ ಹೇಳಿಕೊಳ್ಳದೇ ಇರಬಹುದು. ರಾತ್ರಿ ೧೧ರ ವಾರ್ತೆಯಲ್ಲೂ ಸುದ್ದಿ ಇಲ್ಲ. ಸ್ವಲ್ಪ ನಿರಾಸೆ ಆಯಿತು. ನಮ್ಮ ಚಾನ್ಸ್ ತಪ್ಪಿರಬಹುದು ಎಂದುಕೊಂಡು ಸುಮ್ಮನಾದೆವು. ನಿದ್ದೆ ಬರಲಿಲ್ಲ. ಸ್ವಲ್ಪ ಹೊತ್ತು ನಮ್ಮ ಮನೆತನದ ಮಾತುಗಳನ್ನು ಮೆಲುಕು ಹಾಕುತ್ತ ಕುಳಿತಿದ್ದೆವು'. 'ಮಧ್ಯರಾತ್ರಿ ಸೈಕಲ್ ಗಂಟೆಯ ಶಬ್ದ. ಟೆಲಿಗ್ರಾಂ ಎಂದು ಕೂಗಿದಾಗ ಭಯದಿಂದಲೇ ತೆಗೆದುಕೊಂಡು 'ರಾಮಣ್ಣಾ' ಎಂದು ಕೂಗಿದೆ. ಅವನಿಗೂ ನಿದ್ದೆ ಬಂದಿರಲಿಲ್ಲ. ತಂತಿಯನ್ನು ನೋಡಿದರೆ 'ಕಂಗ್ರಾಚ್ಯುಲೇಶನ್ಸ್ ಆನ್ ಯುವರ್ ಪದ್ಮಭೂಷಣ ಅವಾರ್ಡ್– ಇಂದಿರಾಗಾಂಧಿ' ಎಂದಿತ್ತು. ಇಬ್ಬರಿಗೂ ಮಾತು ಬಾರದೇ ಕಣ್ಣೀರು ಸುರಿಯತೊಡಗಿದವು' ('ಗಂಗಾವತರಣ' ದಮಯಂತಿ ನರೇಗಲ್ 'ನನ್ನ ಬದುಕಿನ ಹಾಡು'). ಮರುದಿನ ಎಲ್ಲ ಪತ್ರಿಕೆಗಳಲ್ಲೂ ಇದೇ ಸುದ್ದಿ. ಮಾಟಲದಿನ್ನಿ ಅನ್ನುವ ವಕೀಲರಂತೂ ಬೆಳಗಿನ ಜಾವ ನಾಲ್ಕುಗಂಟೆಗೆ ಊರಿಗೆ ಮರಳಿದ್ದರು. ರೈಲ್ವೆ ನಿಲ್ದಾಣದಲ್ಲಿ ಪತ್ರಿಕೆ ನೋಡಿದವರೇ ಸಂತೋಷದಿಂದ ಕೂಗು ಹಾಕುತ್ತ ಗಂಗೂಬಾಯಿ ಅವರ ಮನೆಗೆ ಬಂದು ಮಲಗಿದ್ದವರನ್ನು ಎಬ್ಬಿಸಿದರು!

ರಾಮಣ್ಣ, ಶೇಷಗಿರಿ ಹಾನಗಲ್ ಮತ್ತು ಕೃಷ್ಣಾ

ಗಂಗೂಬಾಯಿ ಅವರ ನೆರಳಂತೆ ಇದ್ದು ಅವರನ್ನು ಸಲಹಿದ ಸೋದರ ಮಾವ ರಾಮಣ್ಣ ಒಳ್ಳೆಯ ತಬಲಾ ವಾದಕರು. ಗಂಗೂಬಾಯಿ ಅವರು ದೇಶಾದ್ಯಂತ ಕಛೇರಿ ನೀಡಲು ಪ್ರವಾಸ ಮಾಡಿದಾಗೆಲ್ಲ ಅವರ ಜತೆಗೇ ತೆರಳುತ್ತಿದ್ದರು. ಅಲ್ಲದೇ ೧೯೩೧ರಿಂದ ೧೯೫೦ರ ವರೆಗೆ ಸುಮಾರು ಇಪ್ಪತ್ತು ವರ್ಷಗಳ ಕಾಲ ರಾಮಣ್ಣನವರೇ ಸಾಥಿ ನೀಡುತ್ತಿದ್ದರು. ನಂತರ ಇನ್ನೊಬ್ಬ ಸೋದರ ಮಾವನ ಮಗ ಶೇಷಗಿರಿ ಹಾನಗಲ್ ಅವರು ನಾರಾಯಣರಾವ್ ಇಂದೂರಕರ್ ಅವರಲ್ಲಿ ತಬಲಾ ಕಲಿತು ಬಂದರು. ಅವರು ಆಕಾಶವಾಣಿಯಲ್ಲಿ ನಿಲಯ ಕಲಾವಿದರಾಗಿ ಸೇರಿದರು ಹಾಗೂ ಗಂಗೂಬಾಯಿ ಅವರ ಕೊನೆಯ ಕಛೇರಿಯವರೆಗೂ ಸಾಥ್ ನೀಡಿದರು. ಇನ್ನು ಗಾಯನಕ್ಕೆ ಸಾಥ್

ನೀಡುತ್ತಿದ್ದವರು ಕೃಷ್ಣಾ ಹಾನಗಲ್. ಚಿಕ್ಕಂದಿನಿಂದ ತಾಯಿಗೆ ಅಂಟಿಕೊಂಡೇ ಬೆಳೆದ ಕೃಷ್ಣಾ ತಾಯಿ ಹಾಡುವುದನ್ನು ಕೇಳಿ ಕೇಳಿ ಕಲಿತವರು. ಮಧುರ ಧ್ವನಿಯ ಒಡತಿಯಾಗಿದ್ದ ಅವರು ಚಿಕ್ಕಂದಿನಲ್ಲಿ ಗಂಗೂಬಾಯಿ ಹಾಡಿದ್ದನ್ನು ಹಾಗೇ ಹಾಡುತ್ತಿದ್ದರಂತೆ. ತಾಯಿಯ ಎದುರು ಕುಳಿತು ಕಲಿತವರಲ್ಲ ಆಕೆ. 'ಕೇಳಿಯೇ ಹಾಡುತ್ತೀಯ; ತಪ್ಪಿದರೆ ಏನು ಮಾಡುತ್ತೀ' ಎಂದು ಪ್ರಶ್ನಿಸಿದರೆ, 'ನೀನು ಹಾಡುವುದನ್ನು ಕೇಳಿಯೇ ಹಾಡುತ್ತೇನಲ್ಲ. ನಿನ್ನ ಹಾಗೆಯೇ ಹಾಡುತ್ತೇನೆ.. ನೀನು ತಪ್ಪಿದರೆ ನಾನು ತಪ್ಪುತ್ತೇನೆ' ಎನ್ನುತ್ತಿದ್ದರಂತೆ. ಅದರಂತೆ ತಮ್ಮ ಉಸಿರಿರುವವರೆಗೂ ಆಕೆ ತಾಯಿಯಂತೆಯೇ ಹಾಡಿದರು. ಗಂಗೂಬಾಯಿ ಅವರ ದನಿಗೆ ದನಿಯಾದರು ಕೃಷ್ಣಾ. ರಾಮಣ್ಣ ಮತ್ತು ಶೇಷಗಿರಿ ಹಾನಗಲ್ ಅವರು ಕೇವಲ ತಬಲಾ ಸಾಥ್ ಮಾತ್ರ ನೀಡುವವರಾಗಿರಲಿಲ್ಲ: ದೇಶಾದ್ಯಂತ ಕಾರ್ಯಕ್ರಮಗಳಿಗಾಗಿ ಹಗಲು ರಾತ್ರಿ ಎನ್ನದೇ ಸುತ್ತುವಾಗ ಗಂಗೂಬಾಯಿ ಅವರ ಸಹಪ್ರಯಾಣಿಕರೂ, ರಕ್ಷಕರೂ ಆಗಿದ್ದರು ಎಂಬುದನ್ನು ಮರೆಯಲು ಆಗದು. ಹಾಗಾಗಿ ರಾಮಣ್ಣ, ಕೃಷ್ಣಾ ಮತ್ತು ಶೇಷಗಿರಿ ಹಾನಗಲ್ ಅವರನ್ನು ತಮ್ಮ ಗಾಯನದ ಅವಿಭಾಜ್ಯ ಅಂಗವಾಗೇ ಪರಿಗಣಿಸಿದ್ದರು.

ಗಂಗೂಬಾಯಿ ಅವರ ತಾಯಿ ತೀರಿಕೊಂಡ ಮೇಲೆ ಒಂದರ್ಥದಲ್ಲಿ ತಾಯಿಯಾಗಿಯೇ ಅವರನ್ನು ಪೊರೆದಿದ್ದ ರಾಮಣ್ಣ ೧೯೭೪ ರಲ್ಲಿ ನಿಧನರಾದರು. ಈ ಸಂದರ್ಭವನ್ನು 'ನಾನು ಮತ್ತೊಮ್ಮೆ ಅನಾಥಳಾದೆ' ಎಂದು ಗಂಗೂಬಾಯಿ ಅವರು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

ವಿದೇಶಗಳಿಗೂ ವ್ಯಾಪಿಸಿದ ಗಾಯನ

ಗಂಗೂಬಾಯಿ ಅವರು ಸ್ವಾತಂತ್ರ್ಯಪೂರ್ವದಲ್ಲೇ ಅಖಂಡ ಭಾರತದ ತುಂಬೆಲ್ಲಾ ತಮ್ಮ ಸಂಗೀತ ಸುಧೆ ಹರಿಸಿದ್ದರು. ಸ್ವಾತಂತ್ರ್ಯಾನಂತರ ೧೯೭೯ರಲ್ಲಿ ಅಮೆರಿಕೆಯಲ್ಲಿನ ತಮ್ಮ ಅಭಿಮಾನಿಗಳ ಕಿವಿಗಳನ್ನು ತಣಿಸಲು ತೆರಳಿದರು. ಅವರ ಜತೆಗೆ ಮಗಳು ಕೃಷ್ಣಾ, ಸೋದರ ಶೇಷಗಿರಿ ಹಾನಗಲ್ ಮತ್ತು ಹಾರ್ಮೋನಿಯಂ ಸಾಥಿಗೆ ಅಪ್ಪಾ ಜಳಗಾಂವಕರ ಇದ್ದರು. ಅವರು ಹೊರಟಾಗ ಹುಬ್ಬಳ್ಳಿ- ಧಾರವಾಡದ ಸಂಗೀತ ಪ್ರಿಯರೆಲ್ಲ ರೈಲ್ವೆ ನಿಲ್ದಾಣಕ್ಕೆ ಬಂದು ಅವರನ್ನು ಬೀಳ್ಕೊಟ್ಟರು. ಅವರಲ್ಲಿ ವರಕವಿ ದ.ರಾ.ಬೇಂದ್ರೆ ಅವರೂ ಒಬ್ಬರು. ವಾಶಿಂಗ್ಟನ್ ನಿವಾಸಿಗಳಾಗಿದ್ದ ಭಾರತೀಯರ ಸಾಂಸ್ಕೃತಿಕ ಸಂಘವೊಂದು ಮೂರು ತಿಂಗಳ ಸಂಗೀತ ಯಾತ್ರೆಯನ್ನು ಆಯೋಜಿಸಿತ್ತು. ನ್ಯೂಯಾರ್ಕ್, ಶಿಕಾಗೊ, ಕ್ಯಾಲಿಫೋರ್ನಿಯಾ ಮುಂತಾದ ನಗರಗಳಲ್ಲಿ ಒಟ್ಟೂ ೨೩ ಸಂಗೀತ ಕಾರ್ಯಕ್ರಮಗಳನ್ನು ನೀಡಿದರು. ಅಲ್ಲಿಂದ ಬಾಬುರಾವ್ ದೇಶಪಾಂಡೆ ಅವರು ಕಳಿಸಿದ ಪತ್ರಿಕಾ ವರದಿಯೊಂದು ಈ ರೀತಿ ಇದೆ.

'ಇಂಟರ್ ನ್ಯಾಶನಲ್ ಆಡಿಟೋರಿಯಂನಲ್ಲಿ ೬-೯-೧೯೭೯ ರಂದು ಬಹಳ ವಿಜೃಂಭಣೆಯಿಂದ ಇವರ ಸಂಗೀತ ಸಭೆ ನಡೆಯಿತು. ಕಿರಾನಾ ಮನೆತನದ ಪದ್ಧತಿಯಲ್ಲಿ ಪೂರಿಯಾ ಧನಾಶ್ರೀ, ಮಾರವಾ, ಯಮನ್, ಭೈರವಿ ಮೊದಲಾದ ರಾಗಗಳನ್ನು ಖಣಖಣಿತ ಸ್ವರದಲ್ಲಿ ಹಾಡಿದರು. ಅವರ ಎರಡನೆ ಕಾರ್ಯಕ್ರಮವು ನ್ಯೂಜೆರ್ಸಿಯಲ್ಲಿ ಸೆಪ್ಟೆಂಬರ್ ೧೬ನೆ ತಾರೀಖಿನಂದು ಬಹಳ ಉಲ್ಲಾಸದಿಂದ ನೆರವೇರಿತು. ಆ ದಿನ ಶ್ರೀಮತಿಯವರ ಗುರುಗಳಾದ ಕೈವಾ. ಸವಾಯಿ ಗಂಧರ್ವರ ಪುಣ್ಯತಿಥಿಯೂ ಆಗಿತ್ತು. ಮುಂಜಾನೆಯ ಬೈಠಕ್ಕಿನಲ್ಲಿ ಮಿಯಾಕಿ ತೋಡಿ, ಆಸಾವರಿ, ದೇಶಕಾರ್, ಸೂಹಾ ಹಾಗೂ ಜೋಗಿಯಾ ರಾಗಗಳನ್ನು ರಸಾವಿಷ್ಕಾರವಾಗುವಂತೆ ಹಾಡಿದಾಗ ಪ್ರೇಕ್ಷಕರು ಮಂತ್ರಮುಗ್ಧರಾಗಿ ಹೋದರು.' ಭಾರತೀಯರು ಮಾತ್ರವಲ್ಲದೇ ಅಮೆರಿಕನ್ನರೂ ಸಹ ಅವರ ಗಾಯನದ ಸವಿ ಉಂಡರು. ಅಲ್ಲಿನ ಮಾಧ್ಯಮಗಳಲ್ಲಿ ಅವರ ಸಂದರ್ಶನ ಪ್ರಸಾರವಾಯಿತು. ಇಂಗ್ಲಿಷ್ ಮಾತನಾಡಲು ಅರಿಯದ ಅವರು 'ಅರ್ಧ ಮರಾಠಿ, ಅರ್ಧ ಹಿಂದಿ ಸೇರಿಸಿ ಮಾತನಾಡಿದೆ' ಎಂದಿದ್ದಾರೆ. ಕೆನಡಾದ ಒಟ್ಟಾವಾ, ಮಾಂಟ್ರಿಯಲ್, ಟೊರಾಂಟೊ ಮುಂತಾದೆಡೆ ಯಶಸ್ವಿ ಕಾರ್ಯಕ್ರಮಗಳನ್ನು ನೀಡಿದರು. ಇವೆಲ್ಲವೂ ಸರಾಸರಿ ಮೂರು- ಮೂರುವರೆ ತಾಸಿನ ಕಾರ್ಯಕ್ರಮಗಳಾಗಿದ್ದವು. ಮುಂದೆ ೧೯೮೪ರಲ್ಲಿ ಫ್ರಾನ್ಸ್ ಮತ್ತು ಜರ್ಮನಿಗೆ ತೆರಳಿ ಅಲ್ಲಿಯೂ ಸಂಗೀತ ಸುಧೆ ಹರಿಸಿಬಂದರು.

ಇದೇ ವೇಳೆಯಲ್ಲಿ ಅಂದರೆ ೧೯೭೯ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಗೀತ ವಿಭಾಗ ಪ್ರಾರಂಭವಾಯಿತು. ಪಂ. ಮಲ್ಲಿಕಾರ್ಜುನ ಮನ್ಸೂರ ಅವರು ಗೌರವ ನಿರ್ದೇಶಕರಾಗಿ, ಗಂಗೂಬಾಯಿ ಅವರು ಗೌರವ ಪ್ರಾಧ್ಯಾಪಕರಾಗಿ ನಿಯುಕ್ತಿಗೊಂಡರು. ಇವರ ಜತೆ ಪಂ. ಬಸವರಾಜ ರಾಜಗುರು, ಪಂ. ಸಂಗಮೇಶ್ವರ ಗುರವ, ವಿದುಷಿ ಜಾನಕಿ ಅಯ್ಯರ್ ಅವರೂ ಪ್ರಾಧ್ಯಾಪಕರಾದರು. ಅದು ಸಂಗೀತ ವಿಭಾಗದ ಸುವರ್ಣ ಯುಗ ಎಂದೇ ಹೇಳಬಹುದು. ಇದೇ ಕಾಲಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ದೊರೆಯಿತು. ೧೯೮೪ರಲ್ಲಿ ಗ್ವಾಲಿಯರ್‌ನ ತಾನ್‌ಸೇನ್ ಪ್ರಶಸ್ತಿ ದೊರೆತು ಪ್ರಶಸ್ತಿ ಪ್ರದಾನ ಸಮಾರಂಭದ ಅಂಗವಾಗಿ ಮಿಯಾ ತಾನ್‌ಸೇನ್‌ರ ಸಮಾಧಿಯ ಎದುರು ಗಾಯನ ಪ್ರಸ್ತುತಪಡಿಸಿದರು. ೧೯೮೭ರಲ್ಲಿ 'ರೂಹೆ ಗಜಲ್ ಬೇಗಂ ಅಖ್ತರ್' ಪ್ರಶಸ್ತಿ ದೊರೆಯಿತು.

೧೯೮೬ರಲ್ಲಿ ಮುಂಬಯಿಯಲ್ಲಿ ಸವಾಯಿ ಗಂಧರ್ವರ ಜನ್ಮಶತಮಾನೋತ್ಸವ ನಡೆಯಿತು. ಅಂದಿನ ಅವರ ಗಾಯನವನ್ನು ಖ್ಯಾತ ಸಂಗೀತ ವಿಮರ್ಶಕ ಮೋಹನ ನಾಡಕರ್ಣಿ ಅವರು ಶಬ್ದಗಳಲ್ಲಿ ಹಿಡಿದಿಟ್ಟಿದ್ದು ಹೀಗೆ- 'ಗಂಗೂಬಾಯಿ ಅವರ ಸಂಗೀತ ಕಛೇರಿ ಆ ದಿನದ ಸಂಗೀತ ಕಛೇರಿಗಳಿಗೆ ಕಲಶಪ್ರಾಯವಾಗಿತ್ತು. ಆರಂಭದಿಂದ ಕೊನೆಯವರೆಗೆ ಬಿಹಾಗ್, ನಟ್ ಮಲ್ಹಾರಗಳ ಭಾವಪೂರ್ಣ ಶ್ರದ್ಧಾಂಜಲಿಯಾಗಿತ್ತು.

ಅದು ಕೇವಲ ಕಲಾ ಪ್ರದರ್ಶನವಾಗದೇ ಇನ್ನೇನೊ ವಿಶೇಷತೆಯಿಂದ ಕೂಡಿತ್ತು. ಪ್ರತಿ ಸ್ವರ, ಗೀತಾಂಗ ಭಾಗ, ಅಲಂಕಾರ ಅಗಲಿದ ತಮ್ಮ ಗುರುಗಳಿಗೆ ಅರ್ಪಣೆ ಮಾಡಿದಂತಿತ್ತು. ಈ ಕಛೇರಿಯಲ್ಲಿ ಅವರ ಸ್ಫುಟವಾದ ಗಡಸು ಧ್ವನಿ ಮತ್ತು ಶೈಲಿ ಅವರ ವಯಸ್ಸನ್ನೂ ಹೇಗೆ ಮರೆಮಾಚಿತ್ತು ಎಂಬುದನ್ನು ಕೇಳಿಯೇ ಅನುಭವಿಸಬೇಕಿತ್ತು'.

೧೯೮೮ರಲ್ಲಿ ಗಂಗೂಬಾಯಿ ೭೫ ವರ್ಷಕ್ಕೆ ಕಾಲಿರಿಸಿದಾಗ ಹುಬ್ಬಳ್ಳಿಯ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ವತಿಯಿಂದ ಎಸ್.ಎಸ್.ಗೋರೆ ಅವರ ವತಿಯಿಂದ ಸನ್ಮಾನಿಸಲಾಯಿತು. ನಡೆದಾಡುವ ವಿಶ್ವಕೋಶ ಎಂದೇ ಹೆಸರಾಗಿದ್ದ, ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಶಿವರಾಮ ಕಾರಂತರು ಅಧ್ಯಕ್ಷತೆ ವಹಿಸಿದ್ದರು. ಮೂರು ದಿನ ನಡೆದ ಈ ಸಮಾರಂಭದಲ್ಲಿ ಪಂ. ಭೀಮಸೇನ ಜೋಶಿ, ವಿಜಯಾ ಮುಳೆ, ಖ್ಯಾತ ಕಾದಂಬರಿಕಾರ ಡಾ. ಎಸ್.ಎಲ್ ಭೈರಪ್ಪ, ಎಚ್. ವೈ. ಶಾರದಾ ಪ್ರಸಾದ್ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಡಾ, ಎಸ್. ಎಲ್ ಭೈರಪ್ಪ ಮತ್ತು ಸದಾನಂದ ಕನವಳ್ಳಿ ಅವರ ಸಂಪಾದಕತ್ವದಲ್ಲಿ ಕನ್ನಡದಲ್ಲಿ ಹಾಗೂ ಡಾ. ಅಶೋಕ ರಾನಡೆ ಅವರ ಸಂಪಾದಕತ್ವದಲ್ಲಿ ಅಭಿನಂದನಾ ಗ್ರಂಥಗಳನ್ನು ಸಮರ್ಪಿಸಲಾಯಿತು.

ಇದೇ ಸಂದರ್ಭದಲ್ಲಿ ವಿಜಯಾ ಮುಳೆ ಅವರು ಗಂಗೂಬಾಯಿ ಕುರಿತು ತಯಾರಿಸಿದ ಸಾಕ್ಷ್ಯಚಿತ್ರವನ್ನು ಪ್ರದರ್ಶನ ಮಾಡಲಾಯಿತು. ಇದರಲ್ಲಿ ಬಾಲಕಿ ಗಂಗೂಬಾಯಿಯಾಗಿ ಅವರ ಮೊಮ್ಮಗಳು ಮಾಧವಿ ಪಾತ್ರ ನಿರ್ವಹಿಸಿದ್ದಾರೆ. ಈ ಚಿತ್ರವನ್ನು ನೋಡಿದರೆ ಗಂಗೂಬಾಯಿ ಹಾನಗಲ್ಲರ ಸುಮಾರು ಐದು ದಶಕಗಳ ಸಂಗೀತಮಯ ಜೀವನದ ಸ್ಥೂಲ ಚಿತ್ರಣ ಸಿಗುವುದಲ್ಲದೇ, ಸ್ತ್ರೀ ಸಹಜ ಧ್ವನಿಯಿಂದ ಗಡಸು ಧ್ವನಿಯಾಗಿ ಬದಲಾದ ತಮ್ಮ ಕಂಠವನ್ನು ತಮ್ಮ ಗಾಯನ ಶೈಲಿಗೆ ಗಂಗೂಬಾಯಿ ಒಗ್ಗಿಸಿಕೊಂಡಿದ್ದು ಹೇಗೆ ಎಂಬುದನ್ನು ತಿಳಿದುಕೊಳ್ಳಬಹುದು.

ಇದೇ ವರ್ಷ ಸ್ಪಿಕ್‌ಮೆಕೆ ವತಿಯಿಂದ ದೆಹಲಿಯಲ್ಲಿ ಸನ್ಮಾನ ಮಾಡಲಾಯಿತು. ೧೯೯೦ರಲ್ಲಿ ಪಶ್ಚಿಮ ಬಂಗಾಳ ಸರ್ಕಾರದದಿಂದ ಭುವಾಲಿಕಾ ಪ್ರಶಸ್ತಿ, ೧೯೯೨ರಲ್ಲಿ ಪುಣೆಯಲ್ಲಿ ಖ್ಯಾತ ಮರಾಠಿ ಸಾಹಿತಿ ಕುಸುಮಾಗ್ರಜ ಅವರ ನೇತೃತ್ವದಲ್ಲಿ ಕೊಡಮಾಡುವ ಗೋದಾವರಿ ಪ್ರಶಸ್ತಿ, ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಕನಕ– ಪುರಂದರ ಪ್ರಶಸ್ತಿ, ಐಟಿಸಿ ಸಂಗೀತ ಪ್ರಶಸ್ತಿ, ೧೯೯೫ರಲ್ಲಿ ಮೈಸೂರು ಸಂಗೀತರತ್ನ ಪ್ರಶಸ್ತಿ ೧೯೯೭ರಲ್ಲಿ ಮುಂಬಯಿಯ ವರದರಾಜ ಆದ್ಯ ಪ್ರಶಸ್ತಿ, ದೀನಾನಾಥ ಮಂಗೇಶ್ಕರ್ ಪ್ರಶಸ್ತಿ, ಗಾನಯೋಗಿ ಪಂಚಾಕ್ಷರಿ ಪ್ರಶಸ್ತಿ ಹೀಗೆ ಪ್ರತಿಷ್ಠಿತ ಪ್ರಶಸ್ತಿ ಸನ್ಮಾನಗಳು ಅವರ ಮುಡಿಯನ್ನು ಅಲಂಕರಿಸಿದವು.

ಕಿಟ್ಟಕ್ಕನ ಅನಾರೋಗ್ಯ

ಒಂದೆಡೆ ಅವರ ಸಂಗೀತ ವಿಜಯಯಾತ್ರೆ ಮುಂದುವರೆಯುತ್ತಿತ್ತು. ಇನ್ನೊಂದೆಡೆ

ಕಿಟ್ಟಕ್ಕನ ಆರೋಗ್ಯ ಕೈಕೊಡತೊಡಗಿತ್ತು. ಗಾಯನದಲ್ಲಿ ಅವರು ಗಂಗೂಬಾಯಿ ಅವರ ಉತ್ತರಾಧಿಕಾರಿ ಎಂಬ ಮಾತು ದೇಶಾದ್ಯಂತ ಸಂಗೀತ ವಲಯದಲ್ಲಿ ವ್ಯಾಪಕವಾಗಿತ್ತು. ತಾಯಿಯ ಜತೆ ಸಹಗಾಯಕಿಯಾಗಿ ಗುರುತಿಸಿಕೊಂಡಿದ್ದ ಕಿಟ್ಟಕ್ಕ ಸ್ವತಂತ್ರವಾಗಿ ಕಾರ್ಯಕ್ರಮ ನೀಡಲಾರಂಭಿಸಿದ್ದರು. ಆಕಾಶವಾಣಿ ಕಲಾವಿದೆಯೂ ಆಗಿದ್ದರು. ಅವರ ಮಧುರ ಧ್ವನಿಯ ಗಾಯನ ಕೇಳಲು ಉತ್ಸುಕರಾಗಿದ್ದ ಶ್ರೋತೃಗಳೂ ಇದ್ದರು. ಇಂತಹ ಸಮಯದಲ್ಲಿ ಕೃಷ್ಣಾ ಅವರಲ್ಲಿ ಗರ್ಭಕೋಶದ ಕ್ಯಾನ್ಸರ್ ಪತ್ತೆಯಾಯಿತು. ಶಸ್ತ್ರಚಿಕಿತ್ಸೆ ಮಾಡಲಾಯಿತು. ನಿಧಾನಕ್ಕೆ ಚೇತರಿಸಿಕೊಂಡ ಆಕೆ, ತಾಯಿಯೊಡನೆ ಸಂಗೀತ ಕಾರ್ಯಕ್ರಮಗಳಲ್ಲಿ ಮತ್ತೆ ಪಾಲ್ಗೊಳ್ಳಲು ಆರಂಭಿಸಿದರು. ೨೦೦೨ರ ಗ್ವಾಲಿಯರ್ ಸಂಗೀತ ಸಮಾರೋಹದಲ್ಲಿ ಕೃಷ್ಣಾ ಅವರ ಗಾಯನಕ್ಕೆ ದೊರೆತ ಅಭೂತಪೂರ್ವ ಪ್ರತಿಕ್ರಿಯೆ ಗಂಗೂಬಾಯಿ ಅವರಿಗೂ ಸಹಜವಾಗಿ ಪ್ರಿಯವೇ ಆಗಿತ್ತು. ಅಲ್ಲಿಂದ ತಾಯಿ– ಮಗಳು ಮುಂಬಯಿಗೆ ಬಂದರು. ಥಾಣೆಯಲ್ಲಿ ಸಂಗೀತ ಕಛೇರಿ ನೀಡಬೇಕಾಗಿತ್ತು. ಅಂದು ಗಂಗೂಬಾಯಿ ಒಂದೂವರೆ ತಾಸು ನಿರರ್ಗಳವಾಗಿ ಹಾಡಿದರು. ಅದೇ ಗಂಗೂಬಾಯಿ ಅವರ ಕೊನೆಯ ದೀರ್ಘ ಕಛೇರಿ ಆಗುತ್ತದೆ ಎಂಬ ನಿರೀಕ್ಷೆ ಯಾರಲ್ಲಿಯೂ ಇರಲಿಲ್ಲ.

ಗ್ವಾಲಿಯರ್‌ಗೆ ಹೊರಡುವುದಕ್ಕೆ ಕೆಲದಿನಗಳಿಂದ ಅವರ ಆರೋಗ್ಯ ಅಷ್ಟು ಸರಿ ಇರಲಿಲ್ಲ. ಮುಂಬಯಿ ರೈಲ್ವೆ ನಿಲ್ದಾಣದಲ್ಲಿ ಆಯ ತಪ್ಪಿದಂತಾಗಿತ್ತು. ಜತೆಯಲ್ಲಿದ್ದ ಡಾ. ತಾವರಗೇರಿ, ಡಾ. ಗೋಖಲೆ ಮತ್ತು ಬಾಬಣ್ಣನವರು ಆಸರೆ ನೀಡಿ ರೈಲಿಗೆ ಹತ್ತಿಸಿದ್ದರು. ಹುಬ್ಬಳ್ಳಿಗೆ ಬಂದೊಡನೆ ವೈದ್ಯರ ಸಲಹೆಯ ಮೇರೆಗೆ ಇಡೀ ಶರೀರವನ್ನು ಸ್ಕ್ಯಾನ್ ಮಾಡಿಸಲಾಯಿತು. ಡಾ. ಕಲಮದಾನಿ ಅವರು ಚಿಕಿತ್ಸೆ ಶುರುಮಾಡಿದ್ದರು. ಆದರೂ ಕಿಟ್ಟಕ್ಕನ ಗಾಯನ ಕೇಳಲು ಅವರು ಗ್ವಾಲಿಯರ್‌ಗೆ ತೆರಳಿದರು. ಕಾರ್ಯಕ್ರಮಗಳನ್ನು ಮುಗಿಸಿ ಬಂದಾದಮೇಲೆ ವೈದ್ಯರು ಹೇಳಿದ್ದು ಮೂಳೆಗಳ ಕ್ಯಾನ್ಸರ್ ಎಂದು. ಅದನ್ನೂ ಗಂಗೂಬಾಯಿ ಸಕಾರಾತ್ಮಕವಾಗಿಯೇ ಎದುರಿಸಿದರು. 'ನನ್ನ ದೊಡ್ಡ ಮನಷ್ಯಾ ಅಂತಿರಿ ಅದಕ್ಕ ದೊಡ್ಡ ಜಡ್ಡ ಬರಬಾರ್ದೇನೂ' ಎಂದು ವೈದ್ಯರಲ್ಲೇ ಕೇಳಿದ್ದರಂತೆ!

ಆ ದಿನಗಳನ್ನು ನೆನೆಯುವಾಗ ಅವರ ಮೊಮ್ಮಗ ಮನೋಜ್ ಹಾನಗಲ್ ಇಂದಿಗೂ ಗದ್ಗದಿತರಾಗುತ್ತಾರೆ. 'ಕ್ಯಾನ್ಸರ್ ನಮಗ ಹೆರಿಡಿಟರಿ ಅನ್ನೋಹಂಗ ಆಗಿಬಿಟ್ಟದ' ಎಂಬ ಅವರ ಮಾತಿನಲ್ಲಿನ ನೋವಿನ ಎಳೆಯನ್ನು ಯಾರಾದರೂ ಗುರುತಿಸಬಹುದು. ಕಿಟ್ಟಕ್ಕ ಆಗತಾನೇ ಕ್ಯಾನ್ಸರ್ ನಿಂದ ಚೇತರಿಸಿಕೊಂಡರು ಅನ್ನುವಷ್ಟರಲ್ಲಿ ಗಂಗೂಬಾಯಿ ಅವರ ಬೆನ್ನಲ್ಲಿ ಕಾಣಿಸಿಕೊಂಡ ಕ್ಯಾನ್ಸರ್‌ಗೆ ಚಿಕಿತ್ಸೆ ಶುರುಮಾಡಬೇಕಾಯಿತು. ಕ್ಯಾನ್ಸರ್ ರೋಗಿ ನೋವಿನಿಂದ, ಮಾನಸಿಕ ಒತ್ತಡದಿಂದ ಬಳಲಿದರೆ, ದುಬಾರಿ ಚಿಕಿತ್ಸೆಯ ವೆಚ್ಚ ಭರಿಸಲು ಮನೆಯ ಜನ ಹೆಣಗಾಡಬೇಕಾಗುತ್ತದೆ. ಗಂಗೂಬಾಯಿ ಅವರ ಚಿಕಿತ್ಸೆಯ ವೆಚ್ಚವನ್ನು ಕರ್ನಾಟಕ

ಸರ್ಕಾರ ವಹಿಸಿಕೊಂಡಿತು. ಗುಣಮುಖರಾಗಲೇ ಬೇಕು ಎಂಬ ಛಲ ಗಂಗೂಬಾಯಿ ಅವರಲ್ಲಿತ್ತು. ಆಗ ತಾನೇ ಚೇತರಿಸಿಕೊಂಡಿದ್ದ ಕೃಷ್ಣಾ ತಾಯಿಯ ಸೇವೆಗೆ ಟೊಂಕಕಟ್ಟಿ ನಿಂತು ಬಿಟ್ಟಿದ್ದರು. ಇವೆಲ್ಲದರ ಪರಿಣಾಮವಾಗಿ ಗಂಗೂಬಾಯಿ ಮುಂದೆ ಒಂದೂವರೆ ವರ್ಷದಲ್ಲಿ ಚೇತರಿಸಿಕೊಂಡರು. ಅವರು ಹಾಸಿಗೆಯಿಂದ ಎದ್ದು ಓಡಾಡಲು ಶುರುಮಾಡುತ್ತಿದ್ದಂತೆ ಕೃಷ್ಣಾ ಅವರಿಗೆ ಮತ್ತೆ ವ್ಯಾಧಿ ಮರುಕಳಿಸಿತು. ಆಸ್ಪತ್ರೆಯಿಂದ ವೈದ್ಯರು ಕೈಚೆಲ್ಲಿ ಮನೆಗೆ ಕಳಿಸಿದ ಮೇಲಂತೂ ಗಂಗೂಬಾಯಿ ಮತ್ತು ಅವರ ಮನೆಯವರಿಗೆ ಯಾತನಾಮಯ ದಿನಗಳು ಆರಂಭವಾದವು. 'ಆಗಿನ್ನೂ ಮನೆ ಸಣ್ಣದಿತ್ತು. ನೋವನ್ನು ತಡೆಯಲಾರದೇ ಕಿಟ್ಟಕ್ಕ ಹಗಲು ರಾತ್ರಿ ಅವ್ವಾ ಅವ್ವಾ ಎಂದು ಅಳುತ್ತಿದ್ದರು. ಇಡೀ ಮನೆಯಲ್ಲಿ ಅದೇ ಸದ್ದು ತುಂಬಿಬಿಡುತ್ತಿತ್ತು. ಆಗ ಮನೆಗೆ ಬರುತ್ತಿದ್ದವರ ಎದುರು ಅಜ್ಜಿಯದು ಒಂದೇ ಮಾತು 'ತಂದೆ ತಾಯಿ ಎದುರು ಮಕ್ಕಳು ಸಾಯಬಾರದು' ಎಂದು ಮನೋಜ್ ಹಾನಗಲ್ ನೆನಪಿಸಿಕೊಳ್ಳುತ್ತಾರೆ. ತನ್ನ ೭೫ರ ವಯಸ್ಸಿನಲ್ಲಿ ಕೃಷ್ಣಾ ತಾಯಿಯನ್ನು ಬಿಟ್ಟು ಮರಳಿಬಾರದ ಲೋಕಕ್ಕೆ ತೆರಳಿಬಿಟ್ಟರು. ತನಗೇ ಕ್ಯಾನ್ಸರ್ ಎಂದಾಗಲೂ ಕುಗ್ಗದ ಗಂಗೂಬಾಯಿ ಈಗ ಅಕ್ಷರಶಃ ಕುಸಿದು ಹೋದರು. ತನ್ನ ದನಿಗೆ ದನಿಯಾಗಿ, ಗೆಳತಿಯಾಗಿ ಜತೆಗೇ ಇದ್ದ ಮಗಳ ಸಾವು ಅವರನ್ನು ಇನ್ನಿಲ್ಲದಂತೆ ಅಲ್ಲಾಡಿಸಿತು.

ಅನಾರೋಗ್ಯ ಮತ್ತು ಕಿಟ್ಟಕ್ಕನ ಸಾವಿನಿಂದ ಘಾಸಿಕೊಂಡು ಅವರು ಹಾಡುವುದನ್ನೇ ನಿಲ್ಲಿಸಿಬಿಟ್ಟರು. ಇದೇ ಅವಧಿಯಲ್ಲಿ ಪದ್ಮವಿಭೂಷಣ ಪುರಸ್ಕಾರ ಬಂತು. ಆದರೆ ಅದಕ್ಕೆ ಸಂಭ್ರಮಿಸುವ ಸ್ಥಿತಿಯಲ್ಲಿ ಗಂಗೂಬಾಯಿ ಇರಲಿಲ್ಲ. ಆದರೆ ಅವರು ಬದುಕಿದಷ್ಟು ದಿನ ಅವರ ಪ್ರೀತಿಯ ಸಂಗೀತ ಕ್ಷೇತ್ರದ ಸಂಪರ್ಕದಲ್ಲೇ ಇರಿಸುವ ನಿರ್ಧಾರವನ್ನು ಮಾಡಿದ್ದೆ. ಇದರಿಂದ ಅವರ ತಮ್ಮ ನೋವನ್ನು ಸ್ವಲ್ಪವಾದರೂ ಮರೆಯಲು ಸಾಧ್ಯವಾಯಿತು ಎನ್ನುತ್ತಾರೆ ಮನೋಜ್.

ಮತ್ತೆ ಹಾಡಿತು ಕೋಗಿಲೆ

ಗಂಗೂಬಾಯಿ ಅವರ ಶಿಷ್ಯ ಕುಂದಗೋಳದ ಅಶೋಕ ನಾಡಿಗೇರ ೨೦೦೫ರಲ್ಲಿ ಗಂಡಾಬಂಧನ ಸಮಾರಂಭ ನಡೆಸಲು ನಿರ್ಧರಿಸಿದರು. ಡಿಸೆಂಬರ್ ೧೫ರಂದು ಕುಂದಗೋಳದ ನಾಡಿಗೇರರ ಮೂಲ ಮನೆ ವಾಡೆಯಲ್ಲಿಯೇ ಕಾರ್ಯಕ್ರಮ ನಡೆಸುವುದೆಂದು ನಿರ್ಧಾರವಾಯಿತು. ಅಂದು ಅಜ್ಜಿ ಹಾಡಲಿ ಎಂದು ಮೊಮ್ಮಗ ಮನೋಜ ಹಾನಗಲ್ಲ ಬಯಸಿದರು. ಆದರೆ ಇಂತಹ ಗಂಭೀರ ಅನಾರೋಗ್ಯದಲ್ಲಿ ತಾಯಿ ಹಾಡುವುದು ಬೇಡ ಎಂದು ಮಕ್ಕಳಾದ ಬಾಬುರಾವ್ ಮತ್ತು ನಾರಾಯಣರಾವ್ ಪಟ್ಟು ಹಿಡಿದರು. 'ನಮ್ಮ ತಾಯಿನ್ನ ಕೊಲ್ತೀ ನೀನು...' ಎಂಬುದು ಅವರ ಆತಂಕ. ಆದರೆ ಅಜ್ಜಿ ಹಾಡುತ್ತಾರೆ

ಎಂಬ ವಿಶ್ವಾಸ ಇತ್ತು. ಗಂಡಾಬಂಧನದ ವಿಧಿಗಳನ್ನು ಪೂರೈಸಿದ ಮೇಲೆ ಅಜ್ಜಿ 'ಹಾಡ್ತೇನಿ' ಎಂದು ಕೂತುಬಿಟ್ಟರು. ಅದೂ ಅವರ ಪ್ರೀತಿಯ ರಾಗ – ಅಭೋಗಿ. ಹೊಟ್ಟೆ ಹಿಡಿದುಕೊಂಡು ಅವರು ಹಾಡುತ್ತಿದ್ದರೆ, ವಾಡೆಯಲ್ಲಿ ಸೇರಿದ್ದ ಜನರಲ್ಲಿ ಕಣ್ಣೀರು. ಪ್ರತಿ 'ಸಂ' ಗೂ ಚಪ್ಪಾಳೆ. ಸುಮಾರು ೨೫ ನಿಮಿಷ ಹಾಡಿ– ಯಾವ ಕ್ಯಾನ್ಸರೂ ಸಂಗೀತದ ಎದುರಿಗಲ್ಲ ಎಂಬುದನ್ನು ಸಾಬೀತುಪಡಿಸಿದರು. ಮರುದಿನ ಮಾಧ್ಯಮಗಳಲ್ಲಿ ಈ ಐತಿಹಾಸಿಕ ಘಟನೆ ವರದಿಯಲ್ಲಿ ನೀಡಿದ್ದ ಶೀರ್ಷಿಕೆ 'ಮತ್ತೆ ಹಾಡಿತು ಕೋಗಿಲೆ'. ಇದಾದ ಮೇಲೆ ಮತ್ತೆ ಏಳು ಕಾರ್ಯಕ್ರಮಗಳಲ್ಲಿ ಹಾಡಿದರು.

ಕಲಾವಿದರ ಜೀವನದ ವೈರುಧ್ಯವೇ ಅದು. ಖುಷಿಗೂ, ದುಃಖಕ್ಕೂ ಕಲೆಯೇ ಆಧಾರ. ಅದರಲ್ಲೇ ಸಮಾಧಾನ.

ಈ ನಡುವೆ ಆಗಾಗ ಅನಾರೋಗ್ಯ ಮರುಕಳಿಸುವುದು– ಆಸ್ಪತ್ರೆವಾಸ– ಮನೆಗೆ ಬರುವುದು ನಡೆದೇ ಇತ್ತು. ಆ ದಿನಗಳಲ್ಲಿ ಯಾರಾದರೂ ಮನೆಯಿಂದ ಬೇರೆ ಊರಿಗೆ ಹೋಗುತ್ತಾರೆಂದರೆ 'ಫೋನ್ ಬಂದ್ರೂಡ್ಲೆ ಟ್ಯಾಕ್ಸಿ ತಗೊಂಡ ಬರ್ರೀ' ಎಂದೇ ಹೇಳಿ ಕಳಿಸುತ್ತಿದ್ದರಂತೆ. ೨೦೦೯ ಜುಲೈ ೨೧ ರಂದು ೯೭ ವರ್ಷಗಳ ತುಂಬು ಬದುಕಿಗೆ ಗಂಗೂಬಾಯಿ ವಿದಾಯ ಹೇಳಿದರು. ನಮ್ಮ ನಡುವಿನ ಗಾಯನದ 'ವಿಸ್ಮಯ' ವೊಂದು ಮರೆಯಾದಂತಾಯಿತು. ಅವರ ಭೌತಿಕ ಶರೀರ ಹುಬ್ಬಳ್ಳಿ ಹೊರವಲಯದ ಉಣಕಲ್‌ನಲ್ಲಿ ನಿರ್ಮಾಣ ಹಂತದಲ್ಲಿದ್ದ ಅವರದೇ ಹೆಸರಿನ ಗುರುಕುಲದ ಆವರಣದಲ್ಲಿ ಸಕಲ ಸರ್ಕಾರಿ ಮರ್ಯಾದೆಯೊಂದಿಗೆ ಪಂಚಭೂತಗಳಲ್ಲಿ ಲೀನವಾಯಿತು.

ಸ್ಮಾರಕಗಳು

ಗಂಗೂಬಾಯಿ ಅವರ ಮೊಮ್ಮಗ ಮನೋಜ್ ಹಾನಗಲ್ ಭಾರತೀಯ ಸಂಗೀತ, ನೃತ್ಯ ಮತ್ತಿತರ ಕಲೆಗಳನ್ನು ಪ್ರೋತ್ಸಾಹಿಸಲು ಗಂಗೂಬಾಯಿ ಹಾನಗಲ್ ಮ್ಯೂಸಿಕ್ ಫೌಂಡೇಶನ್ ಆರಂಭಿಸಿದ್ದಾರೆ. ಅದರ ಅಡಿಯಲ್ಲಿ ಗಂಗೂಬಾಯಿ ಅವರಿಗೆ ದೊರೆತಿರುವ ಎಲ್ಲ ಪ್ರಶಸ್ತಿ ಪುರಸ್ಕಾರಗಳು ಮತ್ತು ಹಳೆಯ ಸಂಗೀತ ವಾದ್ಯಗಳ ಮ್ಯೂಸಿಯಂ ಅನ್ನು ರೂಪಿಸಲಾಗಿದೆ. ಇದನ್ನು ಗಂಗೂಬಾಯಿ ಅವರು ಬದುಕಿದ್ದಾಗಲೇ ಅಂದರೆ ೨೦೦೫ರಲ್ಲಿ ಪಂ. ಜಸರಾಜ್ ಅವರು ಲೋಕಾರ್ಪಣೆ ಮಾಡಿದ್ದಾರೆ. ಇದೀಗ ಉದ್ಘಾಟನೆಗೊಂಡಿರುವ ಗಂಗೂಬಾಯಿ ಹಾನಗಲ್ ಗುರುಕುಲಕ್ಕೆ ಇದು ಸ್ಥಳಾಂತರಗೊಳ್ಳಲಿದೆ. ಗಂಗೂಬಾಯಿ ಹಾನಗಲ್ ಅವರು ಜನಿಸಿದ ಧಾರವಾಡ ಶುಕ್ರವಾರಪೇಟೆಯ ಮನೆಯನ್ನು ಸ್ಮಾರಕವಾಗಿ ಕರ್ನಾಟಕ ಸರ್ಕಾರ ಸಂರಕ್ಷಿಸಿದೆ. ಗಂಗೂಬಾಯಿ ಅವರ ಪುಣ್ಯತಿಥಿಯಂದು ಇಲ್ಲಿಯೂ ಸಂಗೀತ ಕಾರ್ಯಕ್ರಮ ನಡೆಯುತ್ತದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾ. ಗಂಗೂಬಾಯಿ ಹಾನಗಲ್ ಅಧ್ಯಯನ ಪೀಠ ಆರಂಭಿಸಲಾಗಿದೆ. ಗುರುಕುಲ ಪದ್ಧತಿಯಲ್ಲಿ

ಸಂಗೀತ ಕಲಿಸಿ ಉನ್ನತ ಮಟ್ಟದ ಸಂಗೀತಗಾರರನ್ನು ರೂಪಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್ ಆರಂಭಿಸಿದ್ದು, ಹುಬ್ಬಳ್ಳಿಯ ಹೊರವಲಯದ ಉಣಕಲ್ ಬಳಿಯ ಪ್ರಶಾಂತ ಸ್ಥಳದಲ್ಲಿ ಗುರುಕುಲ ನಿರ್ಮಾಣವಾಗಿದೆ. ಇದೇ ಜಾಗದಲ್ಲಿಯೇ ಗಂಗೂಬಾಯಿ ಹಾನಗಲ್ ಅವರ ಸಮಾಧಿಯೂ ಇದೆ. ೨೦೦೯ರಲ್ಲಿ ಕರ್ನಾಟಕ ಸರ್ಕಾರವು ಮೈಸೂರಿನಲ್ಲಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಆರಂಭಿಸಿದೆ. ನೂರು ಎಕರೆ ಜಾಗದಲ್ಲಿ ಆರಂಭವಾಗಿರುವ ಈ ವಿಶ್ವವಿದ್ಯಾಲಯದಲ್ಲಿ ಹಿಂದುಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಮತ್ತು ವಾದನ, ನಾಟ್ಯ ಕಲೆಗಳು ಮತ್ತು ನಾಟಕ ಮತ್ತಿತರ ಪ್ರದರ್ಶಕ ಕಲೆಗಳನ್ನು ಅಧ್ಯಯನ ಮಾಡಲು ಅವಕಾಶವಿದೆ.

೨. ಗಟ್ಟಿ ವ್ಯಕ್ತಿತ್ವ

ಬಾಲ್ಯದಲ್ಲಿ ಗಾನೆವಾಲಿ ಎಂದು ಅಣಕಿಸಿಕೊಂಡು ಅನುಭವಿಸಿದ ಅವಮಾನ, ಬಡತನ ಮತ್ತು ಕಷ್ಟ ಕಾರ್ಪಣ್ಯಗಳಿಂದಾಗಿ ಗಟ್ಟಿ ವ್ಯಕ್ತಿತ್ವದ ಮಹಿಳೆಯಾಗಿ ಅವರು ರೂಪುಗೊಂಡರು. ಚಾಣದ ಏಟು ತಿಂದು ಕಲ್ಲು ಶಿಲ್ಪವಾಗುವಂತೆ. ಅದರಂತೆ ಅವರು ಯಾರ್ಯಾರನ್ನೋ ಮೆಚ್ಚಿಸಲು ಎಂದೂ ಹಾಡಲಿಲ್ಲ. ಶುದ್ಧ ಶಾಸ್ತ್ರೀಯ ಸಂಗೀತಕ್ಕೆ ಮಾತ್ರ ತಮ್ಮ ಬದ್ಧತೆಯನ್ನು ಉಳಿಸಿಕೊಂಡರು. ವೃತ್ತಿ ಜೀವನದ ಆರಂಭದಲ್ಲಿ ಲಘು ಸಂಗೀತ ಪ್ರಕಾರಗಳನ್ನು ಹಾಡಿದ್ದನ್ನು ಬಿಟ್ಟರೆ ಜೀವನದುದ್ದಕ್ಕು ಅವರು ಹಾಡಿದ್ದು ರಾಗ ಸಂಗೀತ ಮಾತ್ರ. ಆದರೆ ತಮ್ಮ ಶಿಷ್ಯರಿಗೆ ಲಘುಸಂಗೀತ ಪ್ರಕಾರಗಳನ್ನು ಹಾಡಬಾರದು ಎಂಬ ತಾಕೀತನ್ನೇನೂ ಅವರು ಮಾಡಲಿಲ್ಲ.

ಅವರ ಮಗ ಬಾಬುರಾವ್ ಅವರ ನೆನಪಿನ ಬುತ್ತಿಯಿಂದ ಆರಿಸಿದ ಒಂದು ಘಟನೆ ಹೀಗಿದೆ– ಒಮ್ಮೆ ಧಾರವಾಡದಲ್ಲಿ ಸಂಗೀತ ಕಛೇರಿ ಏರ್ಪಾಡಾಗಿತ್ತು. ಗಂಗೂಬಾಯಿ ಅವರು ಒಂದಾದ ಮೇಲೆ ಇನ್ನೊಂದು ಶಾಸ್ತ್ರೀಯ ರಾಗ ಪ್ರಸ್ತುತ ಪಡಿಸಿದರು. ಕೇಳುತ್ತ ಕುಳಿತಿದ್ದ ಅಂದಿನ ಜಿಲ್ಲಾಧಿಕಾರಿಗೆ ಏನನ್ನಿಸಿತೊ 'ಒಂದ ಲೈಟ್ ಹಾಡ್ರೀ' ಅಂದರು. 'ಲೈಟ, (ವಿದ್ಯುತ್ ಬಲ್ಬನ್ನು ತೋರಿಸಿ) ನನಗ ಈ ಲೈಟಷ್ಟ ಗೊತ್ತು' ಎಂದಾಗ ಸಭಾಂಗಣದಲ್ಲಿ ನಗುವಿನ ಅಲೆ.

ಬೆಂಗಳೂರಿನ ನಯನಾ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮ. ಗಂಗೂಬಾಯಿ ಅವರನ್ನು ಯಾರೊ ಕೇಳಿದರು 'ನೀವು ಯಾಕೆ ದಾಸರಪದ, ವಚನ, ಭಕ್ತಿಗೀತೆ ಹಾಡೋದಿಲ್ಲ?'

'ನಾನೇನ ಹಾಡೇನಿ ಅದ್ನ ಭಕ್ತಿಂದಾನ ಹಾಡೇನಿ. ಅದ ಭಕ್ತಿ ಗೀತ' ಗಂಗೂಬಾಯಿ ಅವರ ಉತ್ತರ.

ಯಾವಾಗಲೂ ತನ್ನ ಸಾಧನೆಗೆ, ಪರಂಪರೆಗೆ ಬದ್ಧರಾಗಿ, ಅದನ್ನೇ ಹಾಡಿದವರು ಅವರು. ಬೆಂಗಳೂರಿನಲ್ಲಿ ಹರಿಪ್ರಸಾದ ಚೌರಾಸಿಯಾ ಅವರ ಕೊಳಲು ವಾದನ ಮತ್ತು ಗಂಗೂಬಾಯಿ ಹಾನಗಲ್ ಅವರಿಗೆ ಸನ್ಮಾನ ಕಾರ್ಯಕ್ರಮ ಇತ್ತು. ಅಂದು ಮಿಯಾ ಮಲ್ಹಾರ್ ಹಾಡುವಂತೆ ಮೊಮ್ಮಗ ಮನೋಜ್ ಅಜ್ಜಿಗೆ ಕೇಳಿಕೊಂಡಿದ್ದರು. ಆಯಿತು ಅಂದ ಅಜ್ಜಿ, ಗ್ರೀನ್ ರೂಮಿಗೆ ಹೋಗುತ್ತಿದ್ದಂತೆ, ಶಿಷ್ಯ ಅಶೋಕ ನಾಡಿಗೇರ್ ಅವರಿಗೆ 'ನಾ ಮಿಯಾ ಮಲ್ಹಾರ ಹಾಡಾಂಗಿಲ್ಲಪಾ. ಅಭೋಗಿ ಹಾಡ್ತೇನಿ' ಎಂದು ಹೇಳಿ

ಅಭೋಗಿಯನ್ನೇ ಹಾಡಿದರಂತೆ. ಯಾವಾಗಲೂ ತನಗೆ ಸರಿ ಅನ್ನಿಸಿದ್ದನ್ನೇ ಮಾಡುವ ಸ್ವಭಾವ ಅವರದ್ದು.

ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಪರಂಪರೆಯನ್ನು ಯುವಜನರಲ್ಲಿ ಪ್ರಚಾರ ಮಾಡುವ ಉದ್ದೇಶದಿಂದ ಸ್ಪಿಕ್‌ಮೆಕೆ ಸಂಘಟನೆ ಹುಟ್ಟಿಕೊಂಡಾಗ ಅದನ್ನು ಗಟ್ಟಿಯಾಗಿ ಬೆಂಬಲಿಸಿದವರು ಗಂಗೂಬಾಯಿ. ಸ್ಪಿಕ್‌ಮೆಕೆಗಾಗಿ ಸರಣಿ ಕಾರ್ಯಕ್ರಮಗಳನ್ನೂ ನೀಡಿದ್ದರು.

ಒಮ್ಮೆ ದೆಹಲಿಯ ಶಾಲೆಯಲ್ಲಿ ಸ್ಪಿಕ್‌ಮೆಕೆ ಕಾರ್ಯಕ್ರಮ; ಗಂಗೂಬಾಯಿ ಅವರ ಗಾಯನ. ಐದರಿಂದ ಏಳನೇ ತರಗತಿಯ ಮಕ್ಕಳನ್ನು ಸಾಲಾಗಿ ಕೂರಿಸಲಾಗಿತ್ತು. ಗಂಗೂಬಾಯಿ ಗಾಯನ ಶುರು ಮಾಡಿದರು. ಎದುರಿನ ಎಲ್ಲ ಮಕ್ಕಳೂ ಒಬ್ಬೊಬ್ಬರಾಗಿ ಕಿವಿ ಮುಚ್ಚಲು ಶುರು ಮಾಡಿದರು. ಕಾರ್ಯಕ್ರಮ ಮುಗಿಯುವವರೆಗೂ ಹಾಗೇ ಕುಳಿತರು. ಆದರೆ ಗಂಗೂಬಾಯಿ ಮಕ್ಕಳನ್ನಾಗಲೀ, ಆಯೋಜಕರನ್ನಾಗಲೀ ಬೈಯಲಿಲ್ಲ. ಮಕ್ಕಳ ರಂಜನೆಗಾಗಿ ತಮ್ಮದನ್ನು ಬಿಟ್ಟು ಬೇರೆಯದ್ದನ್ನು ಹಾಡಲೂ ಇಲ್ಲ!

ಅಜಂತಾ ಉತ್ಸವಕ್ಕೆಂದು ಹೋದಾಗ ಗಂಗೂಬಾಯಿ ಅವರನ್ನು ನಿಮಗೆ ಯಾವ್ಯಾವ ವಾದ್ಯಗಳು ಬೇಕು ಎಂದು ಅಲ್ಲಿನ ಅಧಿಕಾರಿ ಕೇಳಿದ್ದರು. 'ಕಾಳೆ ಪಾಂಚ್ ಕಾ ತಾನಪುರಾ ಚಾಹಿಯೇ (ಕಪ್ಪು ಐದರ ತಾನ್‌ಪುರಾ ಬೇಕು)' ಎಂದಿದ್ದರು ಗಂಗೂಬಾಯಿ. ಅಲ್ಲಿ ಹೋದಾಗ ಆ ಅಧಿಕಾರಿ ಹೇಳಿದರು 'ಕಾಲಿ ತಾನ್‌ಪುರಾ ಪಾಂಚ್ ಮಿಲಾ ನೈ ಚಲೇಗಾ ಕ್ಯಾ (ಕಪ್ಪನ್ನೆಯ ಐದು ತಾನ್‌ಪುರಾ ಸಿಕ್ಕಲಿಲ್ಲ ಪರವಾಗಿಲ್ಲವೇ!)'.

ಈ ಟಿವಿ ಕನ್ನಡ ವಾಹಿನಿಯು ಗಂಗೂಬಾಯಿ ಅವರನ್ನು 'ವರ್ಷದ ಕನ್ನಡಿಗ' ಪ್ರಶಸ್ತಿಗೆ ಆಯ್ಕೆ ಮಾಡಿದಾಗ 'ಈಗೇನ್ ವರ್ಷದ ಕನ್ನಡಿಗ ಅನ್ನೋದು. ನಾನ್ ಕನ್ನಡದಾಕೀನ ಇದ್ದೇನಿ' ಎಂದು ಹಾಸ್ಯ ಚಟಾಕಿ ಹಾರಿಸಿದ್ದರು.

ಎಲ್ಲರಿಗೂ ಅಜ್ಜಿ

ತಮ್ಮ ಸರಳ ಸ್ವಭಾವದಿಂದ ಬೇಗನೇ ಜನರೊಂದಿಗೆ ಬೆರೆಯುತ್ತಿದ್ದುದರಿಂದ ಇಡೀ ಹುಬ್ಬಳ್ಳಿಗೇ ಅವರು ಅಜ್ಜಿಯಾಗಿದ್ದರು. ಹುಬ್ಬಳ್ಳಿಗೆ ಬರುವ ಯಾವುದೇ ಗಣ್ಯರೂ ಗಂಗೂಬಾಯಿ ಅವರ ಭೇಟಿಗೆ ಬರುತ್ತಿದ್ದರು. ತಮ್ಮ ಭೇಟಿಗೆ ಬರುವವರು ಫೋನ್ ಮಾಡಿ, ಪೂರ್ವಾನುಮತಿ ತೆಗೆದುಕೊಂಡೇ ಬರಬೇಕು ಎಂಬ ಕರಾರಂತೂ ಅವರ ಜೀವನದಲ್ಲೇ ಇರಲಿಲ್ಲ. ಮನೆಗೆ ಬಂದವರೆಲ್ಲರಲ್ಲೂ ಅದೇ ಪ್ರೀತಿಯ ಒಡನಾಟ.

ಒಮ್ಮೆ ಬೆಳಿಗ್ಗೆ ಆರು ಗಂಟೆಗೆ ಮನೆಯ ಗೇಟಿನ ಮುಂದೆ ಹುಡುಗನೊಬ್ಬ ನಿಂತಿದ್ದ. ಬೆಳಗಿನ ಪತ್ರಿಕೆ ತೆಗೆದುಕೊಳ್ಳಲು ಹೋದ ಬಾಬುರಾವ್ ಅವರು ಆತನನ್ನು ಯಾರು, ಯಾತಕ್ಕೆ ಬಂದಿದ್ದಾನೆ ಎಂದು ವಿಚಾರಿಸಿದರು. ಆತ ಫ್ರೆಂಡ್‌ಶಿಪ್ ಬ್ಯಾಂಡ್

ಅನ್ನು ರಸ್ತೆ ಬದಿಗೆ ಮಾರಾಟ ಮಾಡುವ ಹುಡುಗ. ತಾನು ಅಜ್ಜಿಗೆ ಫ್ರೆಂಡ್‌ಶಿಪ್ ಬ್ಯಾಂಡ್ ಕಟ್ಟಬೇಕು ಎಂದು ಬಂದಿರುವುದಾಗಿ ಹೇಳಿದ. 'ಕರುನಾಡ ಕನ್ನಡಿಗ' ಎಂದು ಬರೆದಿದ್ದ ಬ್ಯಾಂಡನ್ನು ಕಟ್ಟಿ, ಅಜ್ಜಿಯ ಕೈಯಿಂದ ಫೇಡೆ ತಿಂದು ಹೋದ ಎಂದು ನೆನಪಿಸಿಕೊಂಡವರು ಗಂಗೂಬಾಯಿ ಹಾನಗಲ್ ಅವರ ಮೊಮ್ಮಗ ಮನೋಜ್ ಹಾನಗಲ್.

ಬಾಬುರಾವ್ ಹಾನಗಲ್ ಹೇಳಿದ ಇನ್ನೊಂದು ಘಟನೆ ಹೀಗಿದೆ– ಮುಂಬಯಿಯಲ್ಲಿ ಶಾಲಾ ಕಾಲೇಜು ವಾರ್ಷಿಕೋತ್ಸವಗಳಲ್ಲಿ ಸಂಗೀತ ಕಾರ್ಯಕ್ರಮ ನಡೆಸುವ ಪದ್ಧತಿ ಇತ್ತು. ಸೇಂಟ್ ಝೇವಿಯರ್ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಗಂಗೂಬಾಯಿ ಅವರ ಗಾಯನವನ್ನು ಆಯೋಜಿಸಲಾಗಿತ್ತು. ಆದರೆ ಆಧುನಿಕತೆಯ ಗಾಳಿ ತಾಗಿಸಿಕೊಂಡಿದ್ದ ಕೆಲ ಹುಡುಗರಿಗೆ ಸಿನಿಮಾ ಹಾಡುಗಳ ಆರ್ಕೆಸ್ಟ್ರಾ ಬೇಕಾಗಿತ್ತು. ಆದರೆ ಕಾಲೇಜಿನ ಆಡಳಿತ ಮಂಡಳಿಯವರು ಕೇಳದೇ ಶಾಸ್ತ್ರೀಯ ಸಂಗೀತ ಆಯೋಜಿಸಿದ್ದರು. ಆಗ ಕಾಲೇಜು ವಿದ್ಯಾರ್ಥಿ ಸಂಘದ ನಾಯಕನ ನೇತೃತ್ವದಲ್ಲಿ, ಗಂಗೂಬಾಯಿ ಅವರ ಕಾರ್ಯಕ್ರಮದಲ್ಲಿ ಗದ್ದಲ ಮಾಡಿ ಅವರನ್ನು ವಾಪಸ್ ಕಳಿಸಬೇಕು ಎಂದು ನಿರ್ಧರಿಸಲಾಗಿತ್ತು. ಇದ್ಯಾವುದೂ ಗೊತ್ತಿಲ್ಲದ ಗಂಗೂಬಾಯಿ ವೇದಿಕೆಯ ಮೇಲೆ ಹೋಗಿ ಗಾಯನ ಆರಂಭಿಸಿದರು. ಮೊದ ಮೊದಲು ಗುಜುಗುಜು ಎನ್ನುತ್ತಿದ್ದವರೆಲ್ಲ ಸುಮ್ಮನಾಗಿ ಹತ್ತು ನಿಮಿಷದಲ್ಲಿ ಇಡೀ ಸಭಾಂಗಣ ಸಂಗೀತದ ಗುಂಗಿನಲ್ಲಿ ಮುಳುಗಿತು. ಗಲಾಟೆ ಮಾಡಬೇಕೆಂದು ನಿರ್ಧರಿಸಿದ ಗುಂಪಿನ ನಾಯಕನೂ ಅದರಲ್ಲಿದ್ದ. ಆತನೇ ನಾನಾ ಪಾಟೇಕರ್. ಮುಂದೆ ಗಂಗೂಬಾಯಿ ಅವರ ಸಂಗೀತದ ಕಟ್ಟಾ ಅಭಿಮಾನಿಯಾಗಿದ್ದಲ್ಲದೇ, ಅವರ ಹುಟ್ಟುಹಬ್ಬದಂದು ಹುಬ್ಬಳ್ಳಿಗೂ ಬಂದು 'ಆಯೀ' ಎಂದು ಗೌರವಿಸಿದರು.

ಚಟ್ನಿ ಪುಡಿ, ಮೆಂತೆ ಹಿಟ್ಟು

ಮಿತಾಹಾರ ಮತ್ತು ಸರಳ ಆಹಾರ ಕ್ರಮವನ್ನು ಅವರು ಕೊನೆಯವರೆಗೂ ಪಾಲಿಸಿಕೊಂಡು ಬಂದರು. ಉತ್ತರ ಭಾರತಕ್ಕೆ ಹೋದಾಗ ಅಲ್ಲಿನ ಅಡುಗೆ ಅವರಿಗೆ ಹಿಡಿಸುತ್ತಿರಲಿಲ್ಲ. ಹಾಗಾಗಿ ತಮ್ಮ ಜತೆಗೆ ಮನೆಯಲ್ಲಿ ಮಾಡಿದ ಚಟ್ನಿಪುಡಿ, ಮೆಂತೆಹಿಟ್ಟು ಮತ್ತು ತುಪ್ಪ ತೆಗೆದುಕೊಂಡು ಹೋಗುತ್ತಿದ್ದರು. ಇದು ಸಹ ಕಲಾವಿದರಿಗೂ ಪ್ರಿಯವಾಗಿತ್ತು. ಅನೇಕ ಕಲಾವಿದರು ಮೆಂತೆಹಿಟ್ಟು ಮತ್ತು ಚಟ್ನಿಪುಡಿಯನ್ನು ಗಂಗೂಬಾಯಿ ಅವರಿಂದ ಕೇಳಿ ತೆಗೆದುಕೊಳ್ಳುತ್ತಿದ್ದರಂತೆ. 'ನನ್ನ ನಿತ್ಯದ ಊಟವೆಂದರೆ ನನ್ನ ಸೊಸೆ ತಯಾರಿಸಿದ ತೆಳ್ಳಗಿನ ಒಂದು ಚಪಾತಿ, ಅನ್ನ– ಸಾರು ಮತ್ತು ಪಲ್ಯ. ತುಪ್ಪಾನ್ನಕ್ಕೆ ನನಗೆ ಮೆಂತೆಹಿಟ್ಟು ಬೇಕೆನಿಸುತ್ತದೆ. ಅದಿಲ್ಲದಿದ್ದರೆ ತೊವ್ವೆ ಅನ್ನ'. ವಿದೇಶಪ್ರಯಾಣ ಮಾಡಿದಾಗಲೂ ಇದೇ ಆಹಾರಕ್ರಮ ಮುಂದುವರಿಸಿದರು. ಅಮೆರಿಕ ಪ್ರವಾಸಕ್ಕೆ ಹೋದಾಗ ಖ್ಯಾತ ಸಂಶೋಧಕ

ಶಂ.ಬಾ.ಜೋಶಿ ಅವರ ಮಗನ ಮನೆಯಲ್ಲಿ ಇಳಿದುಕೊಂಡಿದ್ದರು. 'ಧಾರವಾಡದಲ್ಲಿ ಇದ್ದಂತೆಯೇ' ಅನ್ನಿಸಿತು ಎಂದು ತಮ್ಮ ಆತ್ಮಕತೆಯಲ್ಲಿ ಹೇಳಿದ್ದಾರೆ. ಯುರೋಪ್ ಪ್ರವಾಸ ಮಾಡಿ ಬಂದಾಗ ಮುಂಬಯಿಯಲ್ಲಿ ಅವರ ಅಭಿಮಾನಿ ಮಹಿಳೆಯೊಬ್ಬರು 'ಹೇಗಿತ್ತು ಪ್ರವಾಸ' ಎಂದು ಕೇಳಿದರು. ಅದಕ್ಕೆ ಗಂಗೂಬಾಯಿ ಅವರ ಉತ್ತರ 'ಎಲ್ಲಾ ಛಲೊ ಇತ್ತು. ಆದ್ರ ಊಟದ್ದ ತ್ರಾಸ್ ನೋಡ. ಅನ್ನ, ಸಾರು ಸಿಗಂಗೇ ಇಲ್ಲ'.

ಜೀವನ ಪ್ರೀತಿ

ಕಿಟ್ಟಕ್ಕನ ಸಾವು ಮತ್ತು ಕ್ಯಾನ್ಸರ್ ಮಹಾಮಾರಿ ಅವರ ಚೈತನ್ಯವನ್ನೇ ಕಸಿದುಕೊಂಡಿತ್ತು. ಆದರೆ ಅವರ ಜೀವನ ಪ್ರೀತಿ ಬಹಳ ದೊಡ್ಡದು. ವಯಸ್ಸಾದಂತೆ ಹಾಡುವುದು ಕಡಿಮೆ ಆದರೂ, ವಿವಿಧ ಕಾರ್ಯಕ್ರಮಗಳಿಗೆ ಜನ ಅವರ ಉಪಸ್ಥಿತಿಯನ್ನು ಬಯಸುತ್ತಿದ್ದರು. ಹೀಗಾಗಿ ಒಂದಲ್ಲ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿ ಬರುತ್ತಿತ್ತು. ಹಾಗೆ ಯಾವುದಾದರೂ ಕಾರ್ಯಕ್ರಮಕ್ಕೆ ಹೋಗುವುದಿತ್ತೆಂದರೆ ಹಿಂದಿನ ದಿನವೇ ಆ ಸಂದರ್ಭಕ್ಕೆ ಸೂಕ್ತವೆನಿಸಿದ ಸೀರೆ, ಶಾಲು ಎಲ್ಲ ತೆಗೆದಿರಿಸುತ್ತಿದ್ದರು. ಅದನ್ನು ಮನೆ ಜನಕ್ಕೆಲ್ಲ ತೋರಿಸಿ ಖುಷಿ ಪಡುವರು. ಮ್ಯೂಸಿಯಂ ಮತ್ತು ಮ್ಯುಸಿಕ್ ಫೌಂಡೇಶನ್ ಕೆಲಸದಲ್ಲಿ ಸಹಕರಿಸುವ ಸಿಬ್ಬಂದಿಗೂ ತೋರಿಸಿ 'ಛಲೋ ಅದ ಅಲ್ಲಾ' ಎಂದು ಅವರು ಒಪ್ಪಿದ ಮೇಲೇ ಅವರಿಗೆ ಸಮಾಧಾನ.

ಅವರ ಕೊನೆಯ ದಿನಗಳಲ್ಲಿ ಅವರನ್ನು ಹುಬ್ಬಳ್ಳಿಯ ಲೈಫ್ ಲೈನ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಅವರ ಆರೋಗ್ಯ ವಿಚಾರಿಸಲು ಮುಖ್ಯಮಂತ್ರಿಗಳು ಬರುವವರಿದ್ದರು. ಇದು ಗಂಗೂಬಾಯಿ ಅವರಿಗೆ ಗೊತ್ತಿರಲಿಲ್ಲ. ಬೆಳಿಗ್ಗೆ ಆಸ್ಪತ್ರೆಯ ಸಿಬ್ಬಂದಿ ಹೊಸಾ ಬಟ್ಟೆ ತೊಟ್ಟು ಸಂಭ್ರಮದಿಂದ ಓಡಾಡುತ್ತಿರುವುದನ್ನು ಗಮನಿಸಿ ಕೇಳಿದ್ದಾರೆ, 'ಅಜ್ಜಿ ನಿಮ್ಮನ್ನ ನೋಡಾಕ ಮುಖ್ಯಮಂತ್ರಿ ಬರ್ತಾರ ಗೊತ್ತಿಲ್ಲೇನೂ' ಅಂತ. ತಕ್ಷಣ ಮನೆಗೆ ಫೋನು ಮಾಡಿಸಿದ ಅಜ್ಜಿ 'ಮುಖ್ಯಮಂತ್ರಿ ಬರ್ತಾರಂತ ನನ್ನ ಇಂತಾ ಡ್ರೆಸ್ಸಿನ್ಯಾಗ (ಆಸ್ಪತ್ರೆಯ ಸಮವಸ್ತ್ರ) ಯಾಕ ಕೂಡ್ಸೀರಿ' ಎಂದಿದ್ದಲ್ಲದೇ ಯಾವ ಸೀರೆ, ಯಾವ ಶಾಲು ಎಲ್ಲಾ ತರಬೇಕು ಎಂದು ತಾಕೀತು ಮಾಡಿದರು. ಕಡೆಗೆ ಮುಖ್ಯಮಂತ್ರಿ ಅವರು ಬಂದಾಗ ತನ್ನಿಚ್ಛೆಯಂತೆ ಅಚ್ಚುಕಟ್ಟಾಗಿ ಸೀರೆ ಉಟ್ಟು ಹಾಸಿಗೆಯ ಮೇಲೆ ಕುಳಿತಿದ್ದರು!

ಇದೇ ಆಸ್ಪತ್ರೆಯಲ್ಲಿ ಇನ್ನೊಮ್ಮೆ ಸಚಿವರೊಬ್ಬರು ಅಜ್ಜಿಯ ಭೇಟಿಗೆ ಬಂದಿದ್ದರು. ವೈದ್ಯರು ಅವರಿಗೆ ತಾವು ಮಾಡಿದ ಚಿಕಿತ್ಸೆಗಳ ಬಗ್ಗೆ ವಿವರಿಸುತ್ತಿದ್ದರು. ಎಲ್ಲವನ್ನೂ ಕೇಳುತ್ತಿದ್ದ ಅಜ್ಜಿ ಏನೆನ್ನಬೇಕು 'ಅಲ್ಲ ಅವ್ರಿಗೆ (ವೈದ್ಯರಿಗೆ) ಏನ ತಿಳೀತದ. ತೊಂಬತ್ತರ ಮ್ಯಾಲ ಮನಷ್ಯಾ ಬದಕ್ತಾನ ಅನ್ನೂದ ಅವ್ರಿಗೆ ಕಲ್ಸಿರಾಂಗಿಲ್ಲ' ಎಂದು ಚಟಾಕಿ ಹಾರಿಸಿದರು.

ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳೆಂದರೆ ಅವರಿಗೆ ಬಹಳ ಪ್ರೀತಿ. ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬಂದವರೇ ಶಾಲು, ಸ್ಮರಣಿಕೆಗಳನ್ನು ಮೊಮ್ಮಕ್ಕಳಿಗೆ ಹಂಚುತ್ತಿದ್ದರಂತೆ. ಮನೆಯಲ್ಲಿ ಯಾರಿಗೇ ಅನಾರೋಗ್ಯವಿದ್ದರೂ ಅವರಿಗೆ ಕಾಳಜಿ. ತಾನು ಕಾರ್ಯಕ್ರಮಕ್ಕೆ ಹೋಗಬಹುದೇ ಬೇಡವೇ ಎಂದೂ ಅವರು ತಮ್ಮ ನಂಬಿಕೆಯ ಜ್ಯೋತಿಷಿ ಜೋಗಳೇಕರ್ ಅವರನ್ನು ಕೇಳುವರು. ಚಿಕ್ಕಂದಿನಿಂದ ಕಷ್ಟ ನಷ್ಟ ಅನುಭವಿಸಿ ಬೆಳೆದ ಜೀವ. ಮನೆಯಲ್ಲಿ ಚಿಕ್ಕದೇನಾದರೂ ತೊಂದರೆಯಾದರೂ ಮುಂದೇನಾಗುತ್ತದೋ ಎಂದು ಭಯಪಡುತ್ತಿದ್ದರು. 'ನನಗ ಬ್ಯಾಡಾಂದ್ರೂ ಕೆಟ್ಟ ವಿಚಾರಾನ ಮೊದಲ ಬರ್ತಾವ' ಎಂದು ಅವರೇ ಹೇಳುತ್ತಿದ್ದರು.

ಮಹಿಳೆಯ ಘನತೆ

ಮಹಿಳಾವಾದ ಮತ್ತು ಸ್ತ್ರೀ–ಪುರುಷ ಸಮಾನತೆಯ ಪರಿಕಲ್ಪನೆಯ ಬಗ್ಗೆ ಗಂಗೂಬಾಯಿ ಅವರ ವಿಚಾರ ಏನಿತ್ತೊ? ಆದರೆ, ಮಹಿಳೆಯರಿಗೆ ಸಿಗಬೇಕಾದ ಗೌರವ ಸಿಗದ ಬಗ್ಗೆ ಬೇಸರವಿತ್ತು ಎಂಬುದಂತೂ ಸ್ಪಷ್ಟ. ವಿಶೇಷವಾಗಿ ಸಂಗೀತ ಜಗತ್ತಿನಲ್ಲಿ, 'ಪುರುಷ ಕಲಾವಿದರು ಹಿಂದೂ ಆದರೆ ಬುವಾ, ಪಂಡಿತ್ ಎನ್ನುತ್ತಾರೆ. ಮುಸ್ಲಿಂ ಆದರೆ ಉಸ್ತಾದ್ ಎನ್ನುತ್ತಾರೆ. ಮಹಿಳೆಯರಿಗೆ ಮಾತ್ರ ಬಾಯಿ ಅಥವಾ ಬೇಗಂ ಎನ್ನುತ್ತಾರೆ' ಎಂಬ ವಿಷಾದ ವ್ಯಕ್ತಪಡಿಸಿದ್ದಾರೆ. ನ್ಯಾಯವಾದದ್ದೇ. ಇತ್ತೀಚೆಗೆ ಪಂಡಿತಾ ಎಂದು ಶಾಸ್ತ್ರೀಯ ಸಂಗೀತ ಕಲಾವಿದೆಯರನ್ನು ಸಂಬೋಧಿಸುತ್ತಿರುವುದು ಸಮಾಧಾನಕರ ಬೆಳವಣಿಗೆ.

ಮಾರವಾ ರಾಗ

ಸಾಮಾನ್ಯವಾಗಿ ಮಾರವಾ ರಾಗವನ್ನು ಮಹಿಳೆಯರು ಹಾಡುವುದು ಕಡಿಮೆ. ಗಂಗೂಬಾಯಿ ಅವರ ಕಾಲದಲ್ಲಂತು ಅದು ಗಂಡಸರು ಮಾತ್ರವೇ ಹಾಡಬೇಕಾದ ರಾಗ ಎಂಬ ಭಾವನೆ ಪ್ರಚಲಿತವಾಗಿತ್ತು. ಆ ರಾಗದ ಗಾಂಭೀರ್ಯಕ್ಕೆ ಮಹಿಳೆಯ ದನಿ ಹೊಂದುವುದಿಲ್ಲ ಎಂದು ವಾದಿಸುವವರು ಅಂದೂ ಇದ್ದರು; ಇಂದೂ ಇದ್ದಾರೆ. ಆದರೆ ಗಂಗೂಬಾಯಿ ಅದನ್ನು ಸುಳ್ಳಾಗಿಸಿದರು. ಮಾರವಾ, ಭೈರವ, ಪೂರಿಯಾ ಈ ರಾಗಗಳನ್ನು ಕೇಳಿದರೆ ಗಂಗೂಬಾಯಿ ಅವರ ಗಾಯನದಲ್ಲೇ ಕೇಳಬೇಕು ಎಂಬಂತೆ ಅವರು ಹಾಡಿದರು. ಒಂದಲ್ಲ ನೂರಾರು ಸಾರಿ. ಆ ಮೂಲಕ ಮತ್ತೊಂದು ಮೂಢನಂಬಿಕೆಯನ್ನು ಅವರು ಮುರಿದರು. ಹಾಗೆ ನೋಡಿದರೆ ಗಂಗೂಬಾಯಿ ಅವರನ್ನು ನೆನಪಿಸಿಕೊಳ್ಳುವುದೇ ಅವರ ಗಂಭೀರ ಪ್ರಕೃತಿಯ ರಾಗಗಳ ಪ್ರಸ್ತುತಿಯ ಮೂಲಕ. ಅವರ ಧ್ವನಿಮುದ್ರಿಕೆಗಳನ್ನು ಕೇಳಿದರೆ, ಯಮನ್, ಶುದ್ಧ ಕಲ್ಯಾಣದಂತಹ ಲಾಲಿತ್ಯಪೂರ್ಣ ರಾಗಗಳಲ್ಲೂ ಅವರ ಪ್ರತಿಭೆ ಅಷ್ಟೇ ಪ್ರಖರವಾಗಿ ಬೆಳಗುವುದನ್ನು ಕಾಣಬಹುದು.

೩. ಸಾಮಾಜಿಕ ವ್ಯಕ್ತಿತ್ವ

ಗಂಗೂಬಾಯಿ ಅವರ ಜೀವನವನ್ನು ಗಮನಿಸುತ್ತ ಹೋದಂತೆ ನಮ್ಮ ಸಮಾಜದ ದ್ವಂದ್ವ ನೀತಿಗಳು ಕಣ್ಣಿಗೆ ರಾಚುತ್ತವೆ. ಅವರು ಗಂಗಾಮತಸ್ಥ ಸಮಾಜಕ್ಕೆ ಸೇರಿದವರು. ಆದರೆ ಅಂದು ಪ್ರಚಲಿತವಿದ್ದ ಕಲಾವಂತ ಸಂಪ್ರದಾಯದಂತೆ ಅಂಬಾಬಾಯಿ ಮತ್ತು ಗಂಗೂಬಾಯಿ ಇಬ್ಬರೂ ಬ್ರಾಹ್ಮಣರ ಉಪಪತ್ನಿಯರಾಗಿ ಜೀವನ ನಡೆಸಿದರು. ಗಂಗೂಬಾಯಿ ಅವರ ತಂದೆ ಚಿಕ್ಕರಾವ್ ಮತ್ತು ಅವರ ಪತಿ ಗುರುನಾಥ ರಾವ್ ಕೌಲಗಿ ಬ್ರಾಹ್ಮಣರಾಗಿದ್ದರು. 'ಆದರೆ ಗಂಗೂಬಾಯಿ ಅವರನ್ನು ಮೇಲ್ಜಾತಿಯ ಸಮಾಜ ಒಪ್ಪಿಕೊಳ್ಳಲಿಲ್ಲ. ಅನೇಕ ಸಾರ್ವಜನಿಕ ಸನ್ಮಾನಗಳು ಮತ್ತು ಪ್ರಶಸ್ತಿ ಪುರಸ್ಕಾರಗಳ ವಿಚಾರ ಬಂದಾಗ ಮೇಲ್ಜಾತಿಯ ಲಾಬಿ ಗಂಗೂಬಾಯಿ ಅವರ ವಿರುದ್ಧ ಕೆಲಸ ಮಾಡಿದ್ದನ್ನು ನಾನು ನೋಡಿದ್ದೇನೆ' ಎನ್ನುತ್ತಾರೆ ಮನೋಜ್ ಹಾನಗಲ್. ಜಾತಿ ಮತವನ್ನು ಮೀರಿದ್ದ ಕಲಾವಿದೆಯ ವಿಚಾರದಲ್ಲಿ ಜಾತೀಯತೆ ಮಾಡುತ್ತಾರೆ ಎಂಬುದು ವಿಪರ್ಯಾಸವಲ್ಲದೇ ಇನ್ನೇನು. ವಿಚಿತ್ರವೆಂದರೆ ಗಂಗೂಬಾಯಿ ಅವರ ಆತ್ಮಚರಿತ್ರೆಯಲ್ಲೇ ಇಂಥದಕ್ಕೆ ಉತ್ತರವಿದೆ. 'ಮುಸ್ಲಿಮರಾಗಿದ್ದ ಅಬ್ದುಲ್ ಕರೀಂ ಖಾನರಿಗೆ ಅವರ ಶಿಷ್ಯ, ಬ್ರಾಹ್ಮಣರಾಗಿದ್ದ ಸವಾಯಿ ಗಂಧರ್ವರು ನಮಸ್ಕಾರ ಮಾಡುತ್ತಿದ್ದರು. ನನ್ನ ಶಿಷ್ಯ ಶೇಕ್ ಅಬ್ದುಲ್ಲಾ ಖಾಜಿ ನನಗ ನಮಸ್ಕಾರ ಮಾಡ್ತಾನ'. ಅಂದರೆ ಸಂಗೀತಕ್ಕೆ ಜಾತಿ, ಮತ ಪಂಥಗಳ ಗೊಡವೆಯಿಲ್ಲ. ಆದರೆ ಇಂದಿಗೂ ಪ್ರಶಸ್ತಿ ಪುರಸ್ಕಾರಗಳ ವಿಚಾರ ಬಂದಾಗ ಕಲಾವಿದರ ಜಾತಿ ಮುಖ್ಯವಾಗುವುದು ಮಾತ್ರ ದುರಂತವೇ ಸರಿ.

ಬಾಲ್ಯದಲ್ಲಿ ಗಂಗೂಬಾಯಿ ಸಂಗೀತ ಅಭ್ಯಾಸ ಮಾಡುತ್ತಿದ್ದರೆ, ಪಾತ್ರೆಗಳನ್ನು ಬಡಿದು ತೊಂದರೆ ಕೊಟ್ಟವರು, ಕುಂದಗೋಳದಲ್ಲಿ ಸಂಗೀತ ಕಲಿಯಲು ಗುರುಗಳ ಮನೆಯತ್ತ ನಡೆದುಕೊಂಡು ಹೊರಟರೆ ಮನೆಯ ಕಿಡಕಿಯಲ್ಲಿ ನಿಂತು 'ಗಾನೆವಾಲಿ' ಎಂದುಕೊಂಡವರು ಹೀಗೆ ಜನರ ಸಣ್ಣತನಗಳು ಅವರನ್ನು ನೋಯಿಸಿದವೇನೊ ನಿಜ. ಆದರೆ ಅದನ್ನು ಮೆಟ್ಟಿ ನಿಂತಿದ್ದಲ್ಲದೇ, ಅದರ ಬಗ್ಗೆ ಯಾವ ಕಹಿಯನ್ನೂ ಮನಸ್ಸಿನಲ್ಲಿ ಅವರು ಉಳಿಸಿಕೊಳ್ಳಲಿಲ್ಲ. 'ಆ ಕಾಲನ ಹಂಗಿತ್ತು' ಎಂದು ಸಮಾಧಾನ ಪಟ್ಟುಕೊಂಡುಬಿಟ್ಟರು ಅವರು. ಅದರಿಂದಾಗಿ ಅವರು ಯಾರಲ್ಲಿಯೂ ಹಗೆತನ ಸಾಧಿಸಲಿಲ್ಲ.

ಸಾಮಾನ್ಯವಾಗಿ ನಮ್ಮ ಶಾಸ್ತ್ರೀಯ ಸಂಗೀತ ಕಲಾವಿದರು ಸಾಮಾಜಿಕ ವಿದ್ಯಮಾನಗಳಿಗೆ

ಸ್ಪಂದಿಸುವುದು ಕಡಿಮೆ. ಆದರೆ ಗಂಗೂಬಾಯಿ ಹಾಗಲ್ಲ. ಆಕಾಶವಾಣಿಯಲ್ಲಿ ತಾನ್‌ಪುರಾ ನುಡಿಸುವ ಕಲಾವಿದರನ್ನು ಖಾಯಂ ಗೊಳಿಸಬೇಕೆಂಬ ಹೋರಾಟಕ್ಕೆ ನೇತೃತ್ವ ನೀಡಿದರು. ಇದರಿಂದ ತಂಬೂರಿ ನುಡಿಸುವ ಕಲಾವಿದರ ನೇಮಕಾತಿ ಖಾಯಂ ಆಗುವಂತಾಯಿತು. ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ ಎಂದ ಗೋಕಾಕ್ ವರದಿಯನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿ ನಡೆದ ರಾಜ್ಯವ್ಯಾಪಿ ಹೋರಾಟದಲ್ಲಿಯೂ ಅವರು ಪಾಲ್ಗೊಂಡಿದ್ದರು.

ಹುಬ್ಬಳ್ಳಿಯ ಈದಗಾ ಮೈದಾನದ ವಿವಾದ ತೊಂಬತ್ತರ ದಶಕದಲ್ಲಿ ಹುಬ್ಬಳ್ಳಿಯ ಸಾಮಾಜಿಕ ಶಾಂತಿಯನ್ನು ಆಗಾಗ ಕದಡುತ್ತಿತ್ತು. ಪರಿಸ್ಥಿತಿಯ ನಿಯಂತ್ರಣಕ್ಕೆ ಕರ್ಫ್ಯೂ ಹೇರಿದಾಗ ಅಂದಿನ ಮೂರುಸಾವಿರ ಮಠದ ಜಗದ್ಗುರು ಗಂಗಾಧರ ರಾಜ ಯೋಗೀಂದ್ರ ಸ್ವಾಮೀಜಿ ಅವರೊಂದಿಗೆ ಪಾದಯಾತ್ರೆ ನಡೆಸಿ, ಶಾಂತಿ ಸಭೆಗಳಲ್ಲಿ ಪಾಲ್ಗೊಂಡು ನೊಂದವರನ್ನು ಸಂತೈಸುತ್ತಿದ್ದರು. ಇಂತಹುದೇ ದಿನಗಳಲ್ಲಿ ಒಮ್ಮೆ ಆಗಸ್ಟ್ ೧೫ ರಂದು ಈದಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಸಂಘ ಪರಿವಾರ ಪಟ್ಟು ಹಿಡಿದಿತ್ತು. ನಗರದಾದ್ಯಂತ ಕರ್ಫ್ಯೂ ಹೇರಲಾಗಿತ್ತು. ಇಂದು ಕೆನರಾ ಸಂಸದರಾಗಿರುವ ಅನಂತ ಕುಮಾರ್ ಹೆಗಡೆ ರಾಷ್ಟ್ರಧ್ವಜ ಹಿಡಿದು ಈದ್ಗಾ ಮೈದಾನದೊಳಗೆ ನುಗ್ಗಿದರು. ಆರ್.ಎ.ಎಫ್ ನಿಂದ ಥಳಿತಕ್ಕೊಳಗಾಗಿ ಆಸ್ಪತ್ರೆ ಸೇರಿದರು. ಈ ಸುದ್ದಿ ಹರಡುತ್ತಿದ್ದಂತೆ ಗಂಗೂಬಾಯಿ ಹಾನಗಲ್ ಅವರ ದೇಶಪಾಂಡೆ ನಗರದ ಮನೆಯ ಬಳಿಯ ಮೈದಾನದಲ್ಲಿ ಜನ ಜಮಾಯಿಸಲಾರಂಭಿಸಿದರು. ಅದೇನಾಯಿತೋ ಏಕಾಏಕಿ ಗೋಲಿಬಾರ್ ಆರಂಭವಾಯಿತು. ಆರು ಜನ ಸತ್ತರು. ಗಂಗೂಬಾಯಿ ಅವರ ಮನೆಯ ಹತ್ತಿರದ ಮನೆಯಲ್ಲಿ ಕಟ್ಟೆಯ ಮೇಲೆ 'ಉಂಡಿ' ತಿನ್ನುತ್ತ ಕುಳಿತಿದ್ದ ಬಾಲಕನೊಬ್ಬ ಗುಂಡಿಗೆ ಬಲಿಯಾದ. ತಕ್ಷಣ ಮನೆಯಿಂದ ಧಾವಿಸಿದ ಗಂಗೂಬಾಯಿ ಪೋಲೀಸರನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು. " ಆ ಹುಡುಗ ನಿಮ್ಗೇನ್ ಮಾಡಿದ್ದ? ಈದ್ಗಾ ಮೈದಾನದಾಗ ಗಲಾಟ್ಯಾದ್ರ ಇಲ್ಯಾಕ ಗೋಲಿಬಾರ್ ಮಾಡಿದ್ರಿ? ಇಲ್ಲಿ ಸೇರಿದ್ದ ಯಾರ್ದಾರ ಕೈಯಾಗ ಕಲ್ಲಿದ್ವೇನು? ನಾನ್ ಕೋರ್ಟ್‌ಗ್ಬಂದ್ ನಿಮ್ಮ ವಿರುದ್ಧ ಸಾಕ್ಷ್ಯ ಹೇಳತೇನಿ' ಎಂದು ಗುಡುಗಿದ್ದರು. ಸ್ಥಳಕ್ಕೆ ಧಾವಿಸಿದ ಅಂದಿನ ಡಿಜಿಪಿ, ಎಡಿಜಿಪಿ ಮುಂತಾದ ಯಾವ ಹಿರಿಯ ಪೋಲೀಸ್ ಅಧಿಕಾರಿಗೂ ಆ ಹಿರಿಯ ಜೀವವನ್ನು ಸಮಾಧಾನ ಮಾಡಲು ಸಾಧ್ಯವಾಗಲಿಲ್ಲ. ಗೋಲಿಬಾರ್ ಮತ್ತು ಆ ಹುಡುಗನ ಸಾವು ಅವರನ್ನು ಅಷ್ಟು ವಿಚಲಿತರನ್ನಾಗಿಸಿತ್ತು. (ಕೃಪೆ– ಸುಧಾ ವಾರಪತ್ರಿಕೆ)

ಸಹ ಕಲಾವಿದರೊಂದಿಗೆ

ತಮ್ಮ ಸಹಜ, ಸರಳ ಸ್ವಭಾವದಿಂದಾಗಿ ಸಂಗೀತ ಕ್ಷೇತ್ರದ ಹಿರಿಕಿರಿಯರೆಲ್ಲರಿಗೂ

ಅವರು ಆಪ್ತರೇ. ಗಂಗೂಬಾಯಿ ಅವರು ತಮ್ಮ ಗಾಯನ ಜೀವನದ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಇಂದು ಪ್ರಸಿದ್ಧರಾಗಿದ್ದ ಅನೇಕರು ಇನ್ನೂ ಉದಯೋನ್ಮುಖರಾಗಿದ್ದರು. ಅವರು ತಮ್ಮ ಸಂಗೀತ ಶಾಲೆಯ ವಾರ್ಷಿಕೋತ್ಸವಕ್ಕೆ ಕರೆದರೆ ಹೊರಟು ನಿಲ್ಲುತ್ತಿದ್ದರು. ಗೌರವಧನದ ಬಗ್ಗೆ ಎಂದೂ ವಿಚಾರ ಮಾಡಿದವರಲ್ಲ. ತಮ್ಮ ಪರಿವಾರದೊಂದಿಗೇ ಪ್ರಯಾಣ ಮಾಡುತ್ತಿದ್ದುದರಿಂದ, ಆಯೋಜಕರಿಗೆ ಹೊರೆಯಾಗಬಾರದು ಎಂದು ಯಾವಾಗಲೂ ರೈಲ್ವೆಯಲ್ಲಿ ಸೆಕೆಂಡ್ ಕ್ಲಾಸಿನಲ್ಲೇ ಪ್ರಯಾಣ ಮಾಡುತ್ತಿದ್ದರು. ಇಳಿದುಕೊಳ್ಳಲೂ ಅಷ್ಟೇ. ಅಚ್ಚುಕಟ್ಟಾದ ವ್ಯವಸ್ಥೆ ಇದ್ದರೆ ಸಾಕಿತ್ತು. ಪಂಚತಾರಾ ಹೊಟೇಲುಗಳ ವೈಭವವನ್ನು ಎಂದೂ ಇಷ್ಟಪಟ್ಟವರಲ್ಲ. ಹಾಗಾಗಿ ಅವರು ಸಂಗೀತ ಕ್ಷೇತ್ರದ ಬಹುತೇಕರಿಗೆ ಪ್ರೀತಿಯ ದೀದಿ ಆಗಿದ್ದರು. ಸಹ ಕಲಾವಿದರೊಂದಿಗೆ ಸ್ನೇಹಪೂರ್ವಕ ನಡವಳಿಕೆ ಅವರದ್ದು. ಹಿಂದುಸ್ತಾನಿ ಸಂಗೀತದ ಇನ್ನೊಬ್ಬ ದಿಗ್ಗಜ ಪಂ. ಮಲ್ಲಿಕಾರ್ಜುನ ಮನ್ಸೂರ ಅವರಿಗಂತೂ ಗಂಗೂಬಾಯಿ ತಂಗಿ, ಭಾರತರತ್ನ ಭೀಮಸೇನ ಜೋಶಿ ಅವರಿಗೆ ಅಕ್ಕ. ಆಕಾಶವಾಣಿಯ ಧ್ವನಿಮುದ್ರಣಗಳು ಮತ್ತು ಪದೇ ಪದೇ ಕಾರ್ಯಕ್ರಮಗಳು ಮುಂಬಯಿಯಲ್ಲೇ ಆಗುತ್ತಿದ್ದರಿಂದ ಆ ದಿನಗಳಲ್ಲಿ ಮುಂಬಯಿಯಲ್ಲಿ ಹೋದಾಗ ಇಳಿದುಕೊಳ್ಳುವ ಸಲುವಾಗಿ ಖೋಲಿಯೊಂದನ್ನು ಬಾಡಿಗೆಗೆ ಹಿಡಿದಿದ್ದರು. ಅವರು ಇಲ್ಲದಿದ್ದ ದಿನಗಳಲ್ಲಿ ಆ ಕೋಣೆಯನ್ನು ಪಂ. ಬಸವರಾಜ ರಾಜಗುರು ಅವರ ಬಳಕೆಗೆ ಬಿಟ್ಟುಕೊಟ್ಟು ಬರುತ್ತಿದ್ದರು. ಆ ದಿನಗಳಲ್ಲಿ ರಾಜಗುರುಗಳು ಮುಂಬೈನಲ್ಲಿದ್ದು ಸಂಗೀತ ಕಲಿಯುತ್ತಿದ್ದರು. ಗಂಗೂಬಾಯಿ ಮತ್ತು ಅವರ ಪರಿವಾರ ಮುಂಬಯಿಯಲ್ಲಿದ್ದಾಗ ಕೋಣೆಯ ಹೊರಗಿನ ಬೆಂಚಿನ ಮೇಲೆ ಅವರು ಮಲಗಿಕೊಳ್ಳುತ್ತಿದ್ದರಂತೆ. ಈ ಆತ್ಮೀಯತೆ ರಾಜಗುರುಗಳು ಬದುಕಿರುವವರೆಗೂ ಹಾಗೇಯೇ ಮುಂದುವರಿಯಿತು.

ಭೀಮಸೇನ ಜೋಶಿಯೊಂದಿಗೆ

ಇನ್ನು ಭೀಮಸೇನ ಜೋಶಿ ಅವರ ಕುಟುಂಬಕ್ಕೂ ಗಂಗೂಬಾಯಿ ಅವರ ಕುಟುಂಬಕ್ಕೂ ಯಾವ ಒಡಹುಟ್ಟಿದವರಿಗೂ ಕಡಿಮೆ ಇಲ್ಲದ ಆತ್ಮೀಯತೆ. ಸಂಗೀತ ಮಾತ್ರವಲ್ಲದೇ, ಪರಸ್ಪರ ಕಷ್ಟ ಸುಖಕ್ಕೂ ಆಗುವಷ್ಟು. ಭೀಮಸೇನ ಜೋಶಿ ಅವರು ಗಂಗೂಬಾಯಿ ಅವರನ್ನು 'ಅಕ್ಕಾ' ಎಂದೇ ಕರೆಯುತ್ತಿದ್ದರು. ಗಂಗೂಬಾಯಿ, "ನಮ್ಮ ಭೀಮಣ್ಣ' ಎಂದೇ ಹೇಳುತ್ತಿದ್ದರು. ಇಬ್ಬರೂ ಒಂದೇ ಗುರುಗಳಲ್ಲಿ ಅಭ್ಯಾಸ ಮಾಡಿದವರು. ಗಂಗೂಬಾಯಿ ಅವರು ಸಂಜೆ ಆರರ ಟ್ರೇನಿಗೆ ಕುಂದಗೋಳಕ್ಕೆ ಹೋಗಿ ಸವಾಯಿ ಗಂಧರ್ವರಲ್ಲಿ ಸಂಗೀತ ಕಲಿತು ರಾತ್ರಿ ೯ರ ಗಾಡಿಗೆ ವಾಪಸ್ ಬರುತ್ತಿದ್ದರು. ರಾತ್ರಿ ಅವರನ್ನು ಟ್ರೇನು ಹತ್ತಿಸಲು ಕಂದೀಲು ಹಿಡಿದುಕೊಂಡು ಭೀಮಸೇನ ಜೋಶಿ ರೈಲ್ವೆ ನಿಲ್ದಾಣದ ವರೆಗೆ ಬರುತ್ತಿದ್ದರು. ಅವರು ಗುರುಗಳ ಮನೆಯಲ್ಲೇ ಇದ್ದು ಗುರುಗಳ

ಸೇವೆ ಮಾಡುತ್ತ ಕಲಿಯುತ್ತಿದ್ದರು. ಗುರುಗಳ ಮನೆಗೆ ನೀರು ಹೊತ್ತು ತಂದು ಹಾಕುವುದು ಭೀಮಣ್ಣನ ಮುಖ್ಯ ಕೆಲಸವಾಗಿತ್ತು. ದೂರದ ಹೊಂಡಕ್ಕೆ ಹೋಗಿ ನೀರು ತರಲು ಒಂದೇ ಕೊಡ ಇತ್ತು.ಅದಕ್ಕಾಗಿ ಭೀಮಣ್ಣ ಗಂಗೂಬಾಯಿ ಅವರನ್ನು ಇನ್ನೊಂದು ಕೊಡ ತಂದು ಕೊಡಲು ಕೇಳಿದರು. ಗಂಗೂಬಾಯಿ ಹುಬ್ಬಳ್ಳಿಯಿಂದ ಎರಡು ಕೊಡಗಳನ್ನು ತೆಗೆದುಕೊಂಡು ಹೋಗಿ ನೀಡಿದ್ದರು. ಅದರಲ್ಲಿ ನೀರು ತುಂಬಿ, ಎರಡೂ ಹೆಗಲ ಮೇಲೆ ಹೊತ್ತು ತಂದು ಹಾಕುತ್ತಿದ್ದರು ಭೀಮಸೇನ ಜೋಶಿ. ಕೊಡ ಹೊತ್ತು ಹೊತ್ತು ಭುಜದ ಮೇಲೆ ಉಂಟಾದ ಕಲೆಯನ್ನು ಯಾವಾಗಲೂ ತೋರಿಸಿ ಹೇಳುತ್ತಿದ್ದರಂತೆ 'ಸಂಗೀತ ಕಲ್ಯೋದು ಸುಲಭ ಅಲ್ಲ' ಎಂದು.

ಗಂಗೂಬಾಯಿ ಮತ್ತು ಭೀಮಸೇನ ಜೋಶಿ ಒಂದೇ ಕಾರ್ಯಕ್ರಮದಲ್ಲಿ ಹಾಡುವ ಸಂದರ್ಭ ಆಗಾಗ ಬರುತ್ತಿತ್ತು. ಆಗೆಲ್ಲ 'ನನ್ನ ಕಾರ್ಯಕ್ರಮ ಛಲೊ ಆಗುವಂತೆ ಆಶೀರ್ವಾದ ಮಾಡು' ಎಂದು ಅಕ್ಕ ಗಂಗೂಬಾಯಿಗೆ ನಮಸ್ಕಾರ ಮಾಡಿಯೇ ಹಾಡುತ್ತಿದ್ದರು. ಇದಕ್ಕೆ ಇನ್ನೊಂದು ಕಾರಣವೂ ಇತ್ತು. 'ಭಾಳ ಮಂದಿಗೆ ಗೊತ್ತಿಲ್ಲ. ಭೀಮಣ್ಣನ್ನ ಸವಾಯಿ ಗಂಧರ್ವರ ಕಡೆ ಕರ್ಕೊಂಡು ಹೋಗಿದ್ದು ಅವ್ರ ಕಾಕಾ ರಾಮಾಚಾರ್ಯ ಜೋಶಿ ಮತ್ತ ನಮ್ಮ ಅಜ್ಜಿ ಅಂಬಾಬಾಯಿ. ಆ ಮ್ಯಾಲೆ ಭೀಮಣ್ಣನ ಮೊದಲ ಸಾರ್ವಜನಿಕ ಕಾರ್ಯಕ್ರಮಾನೂ ನಮ್ಮ ತಂದೆಯಪ್ಪ (ಗುರುನಾಥ ರಾವ್ ಕೌಲಗೆ) ಹುಬ್ಬಳ್ಳಿಯಲ್ಲೇ ಮಾಡಿದ್ರು' ಎಂದು ಬಾಬುರಾವ್ ಹಾನಗಲ್ ನೆನಪಿಸಿಕೊಂಡರು. 'ಅಂವಾ ಕುಂದಗೋಳ ಸವಾಯಿ ಗಂಧರ್ವ ಸಮ್ಮೇಳನಕ್ಕ ಆದಾಗೆಲ್ಲ ಬರ್ತಿದ್ದ. ನಾವು ಹುಬ್ಬಳ್ಳಿ ಆರ್ಟ್ ಸರ್ಕಲ್‌ಗೆ ಯಾವಾಗ ಕರ್ದಾಗ್ಲೂ ಬಂದಾನ. ಭಾಳ ಸರಳ ಮನಷ್ಯಾ. ಮನಿಗೆ ಬಂದ್ರ, ಸೀದ ಅಡಿಗೆ ಮನೀಗೆ ಹೋಗಿದ್ದ, ಎಲ್ಲಾರ್ನೂ ಕೇಳತಿದ್ದ. ಅವಂಗ ಭಕ್ರಿ ಮತ್ತ ಬದ್ನಿಕಾಯಿ ಪಲ್ಲೆ ಭಾಳ ಸೇರತಿದ್ವು. ನಮ್ಮ ಮನೆಲ್ಲಿ ಏನೇ ಶುಭ, ಅಶುಭ ಆಗ್ಲಿ ಎಲ್ಲಾದಕ್ಕೂ ಬರ್ತಿದ್ದ. ನಮ್ಮ ಕಿಟ್ಟಕ್ಕ ಹೋದಾಗ್ಲೂ ಬಂದಿದ್ದ' ಎಂದು ಬಾಬುರಾವ್ ಹಾನಗಲ್ ನೆನಪಿಸಿಕೊಂಡರು.

೪. ಶಿಷ್ಯರ ಕಣ್ಣಲ್ಲಿ ಗಂಗೂಬಾಯಿ

ನಾಗನಾಥ ಒಡೆಯರ್

ಗಂಗೂಬಾಯಿ ಅವರ ಹಿರಿಯ ಶಿಷ್ಯರು. ತಮ್ಮ ಮಧುರ ಧ್ವನಿ ಮತ್ತು ಪಕ್ಕಾ ಕಿರಾಣಾ ಶೈಲಿಯ ಗಾಯನಕ್ಕೆ ಖ್ಯಾತರಾಗಿದ್ದಾರೆ. ಮೂಲತಃ ಸವದತ್ತಿಯವರು. ಹುಬ್ಬಳ್ಳಿಯ ರಾಜಸ್ಥಾನ ಹಿಂದಿ ವಿದ್ಯಾಲಯದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ೧೯೬೪ರಲ್ಲಿ ನೌಕರಿಗೆ ಸೇರಿದ ಮೇಲೆ ಗಂಗೂಬಾಯಿ ಅವರಲ್ಲಿ ಕಲಿಕೆ ಆರಂಭ. ಗಂಗೂಬಾಯಿ ಅವರ ಶಿಷ್ಯತ್ವಕ್ಕಿಂತ ಮುಂಚೆ ಸವದತ್ತಿಯ ಪ್ರಾಥಮಿಕ ಶಾಲೆಯಲ್ಲಿ ವಿ.ಎಚ್. ಇನಾಂದಾರ್ (ಕಾಗಲ್ಕರ್ ಬುವಾರ ಶಿಷ್ಯರು) ಎಂಬುವವರಲ್ಲಿ ಸುಮಾರು ಹತ್ತು ವರ್ಷ ಸಂಗೀತಾಭ್ಯಾಸ ಮಾಡಿದ್ದರು. ಅಲ್ಲಲ್ಲಿ ಕಾರ್ಯಕ್ರಮಗಳನ್ನೂ ನೀಡಿದ್ದರು. ತಮ್ಮ ಮತ್ತು ಗುರು ಗಂಗೂಬಾಯಿ ಅವರ ನಡುವಿನ ಬಾಂಧವ್ಯವನ್ನು ಅವರು ಬಿಡಿಸಿಟ್ಟಿದ್ದು ಹೀಗೆ – 'ನಮ್ಮ ಕಾಕಾ ರಾಘವೇಂದ್ರ ಚೌಟಿ ಅಂತ. ಅವ್ರಿಗೆ ಸವಾಯಿ ಗಂಧರ್ವರು, ಭೀಮಸೇನ ಜೋಶಿ, ಗಂಗೂಬಾಯಿ ಅವರೆಲ್ಲರ ನಿಕಟ ಪರಿಚಯ ಇತ್ತು. ಅವರು ಗಂಗೂಬಾಯಿ ಅವರಿಗೆ 'ಇಂವಾ ನಮ್ಮ ಹುಡುಗ. ನೀವು ಇವಂಗ ಪಾಠಾ ಹೇಳಬೇಕು' ಎಂದಾಗ ಅವರು ಒಪ್ಪಿಕೊಂಡರು'.

೧೯೬೭ರ ದೀಪಾವಳಿ ಪಾಡ್ಯದ ದಿನ ಗುರು ಪೂಜೆ ಮಾಡಿ ಪಾಠ ಶುರುವಾಯಿತು. ಅದರ ಹಿಂದಿನ ದಿನ ಮನೆಗೆ ಕರೆಸಿ ಹಾಡಿಸಿದ್ದರು. 'ಆವತ್ತ ನಾನು ಶುದ್ಧ ಕಲ್ಯಾಣ ಅಂದಿದ್ದೆ, ಆಲಾಪ, ತಾನ್ ಎಲ್ಲ ಮಾಡಿದ್ದೆ. ನಿಂದ ಆವಾಜ ಛಲೋ ಆದ. ಛಲೊ ಹಾಡ್ತಿ. ಆದ್ರ ನನ್ನ ಹತ್ರ ಕಲೀಬೇಕಾದ್ರ ಇಷ್ಟ ದಿನಾ ಕಲ್ತಿದ್ದನ್ನ ಮರೀಬೇಕು. ನಮ್ಮ ಪದ್ಧತೀನ ಕಲೀಬೇಕು ಅಂತ ಅಂದ್ರು. ನಾನು ಅದಕ್ಕ ಒಪ್ಪಿಕೊಂಡೆ. ಕೋಮಲ ರಿಷಭ ಆಸಾವರಿಯಲ್ಲಿ 'ಶ್ರೀ ಮಾತಾ ಭವಾನಿ' ಎಂಬ ಬಂದಿಶ್ ಕಲಿಸಿದರು. ಮಾರನೇ ದಿನ ತೋಡಿ ರಾಗದ ಪಾಠ ಶುರು ಮಾಡಿದರು. ಸರಳ ತಾನ್ ಹಾಡಿ ತೋರಿಸಿ ಅದನ್ನ ಹಾಡು ಅಂದರು. ನನಗ ಬರಲಿಲ್ಲ, ಡಬ್ಬಲ್‌ನಲ್ಲಿ ಅಂತಿದ್ದೆ ಮುಂದೆ ಅದನ್ನ ಕಲೀಬೇಕಾದರ ಎಂಟ ದಿನ ಬೇಕಾತು. ಊರಾಗಿದ್ದಾಗ ದಿನಾ ಪಾಠ ಹೇಳ್ತಿದ್ದರು. ಉಳಿದ ದಿನ ಅವನ್ನೇ ಅಭ್ಯಾಸ ಮಾಡಿಕೊಳ್ತಿದ್ದೆ. ನಮಗ ಒಂದ್ವಿಷ್ಯ ಹೇಳಿ, ಅದನ್ನ ನಾವು ಅಭ್ಯಾಸ ಮಾಡ್ತಿದ್ರೆ ತಾವು ಅಕ್ಕಿ ಹಸನು ಮಾಡೋದು, ಪಲ್ಲೆ ಸ್ವಚ್ಛ ಮಾಡೋದು ಮಾಡ್ತಾ ಇರೋವ್ರು. ಒಂದೊಂದು ರಾಗ ಆರಾರು ತಿಂಗಳ ಕಲಿಸಿದ್ರು. ಬರೀ ಆಕಾರದಾಗ ಕಲ್ಸವ್ರು. ಆಗಾಗ

ಕಿಟ್ಟಕ್ಕ ತಾನುಗಳನ್ನು ಅಭ್ಯಾಸ ಮಾಡಸ್ತಿದ್ರು.'

'ಭಾಳ ಸಾರೆ ಕಲಿಸಿದ್ರೂ ಸರೀ ಹಾಡ್ಲಿಲ್ಲಾಂದ್ರ ಸಿಟ್ಟು ಬರ್ತಿತ್ತು. ಆದರ ಕೆಟ್ಟದಾಗೇನೂ ಅಂತಿರ್ಲಿಲ್ಲ. ಸುಮ್ಮನೆ ಮನಿ ಒಳಗ ಹೋಗಿ ಬಿಡೋವ್ರು. ನಾವು ಅವ್ರಿಗೆ ತಿಂಗಳದ ಫೀಸು ಅಂತೇನೂ ಕೊಡ್ತಿರಲಿಲ್ಲ. ಅವ್ರು ಹಂಗ ಯಾರಿಂದಲೂ ತಗೋತಿರ್ಲಿಲ್ಲ. ಗಂಡಾ ಬಂಧನದ ವೇಳೆ (೧೯೭೫) ಗುರುದಕ್ಷಿಣೆ ಅಂತ ನಮಗ ತಿಳದಿದ್ ಕೊಟ್ಟಿದ್ವಿ ಅಷ್ಟ.'

'ನಾ ಹೇಳೊವರಿಗೆ ಹೊರಗೆ ಹಾಡೊಹಂಗಿಲ್ಲ ಅಂದಿದ್ರು. ಆಯ್ತು ಅಂದಿದ್ದೆ. ಕಲಿಯಲು ಶುರು ಮಾಡಿದ ಐದಾರು ವರ್ಷಕ್ಕೆ ಸವಾಯಿ ಗಂಧರ್ವ ಸಂಗೀತ ಸಮ್ಮೇಳನದಲ್ಲಿ ಹಾಡಲು ಆದೇಶ ಮಾಡಿದರು. ಪೂರಿಯಾ ಹಾಡಿದೆ. ಆಗಿನ್ನೂ ನಾನಾ ಸಾಹೇಬ ಇದ್ದರು. ಏನ ಛಲೊ ಹಾಡಿದಿಪ್ಪಾ ಎಂದು ಅಪ್ಪಿಕೊಂಡು ಬಿಟ್ರು. ಎಲ್ಲರೂ ಬಹಳ ಖುಷಿ ಪಟ್ಟರು'.

ರಾಮಣ್ಣ ಅವ್ರು ಸಂಗೀತದ ಸೂಕ್ಷ್ಮಗಳನ್ನು ತಿಳಿಸಿ ಹೇಳೋವ್ರು. ಭಾರೀ ಶಾಣ್ಯಾ ಮನಶ್ಯಾ. ಸಣ್ಣ ದನಿಯಲ್ಲಿ ಹಾಡಿ ತೋರಸ್ತಾ ಇದ್ರು. ಹೀಂಗಾಗಿ ಬಾಯಿ ಅವ್ರ ಗಾಯಕೀನ ನನಗ ಕೂಡೊ ಹಂಗ ಆತು'

'ಕ್ರಮೇಣ ಗಂಗೂಬಾಯಿ ಅವರಿಗೆ ಹಾರ್ಮೊನಿಯಂ ಸಾಥ್ ಕೊಡಲು ಶುರುಮಾಡಿದೆ. ಅವರ ಗಾಯಕಿ ಗೊತ್ತಿದ್ದ ಕಾರಣ ಸಾಥಿ ಭಾಳ ಛಲೊ ಆಗ್ತಿತ್ತು. ಹಿಂಗಾಗಿ ಅವರ ಜತೆ ಇಡೀ ಭಾರತ ಸುತ್ತಿ ಬಂದೆ. ಅವ್ರು ನನ್ನ ಪಟ್ಟಿ ಒಳಗ ಹಾಡಿ ಕಲಸ್ತಿದ್ರು. ೬೪ ರಿಂದ ೭೬ ತನಕ ಅವರಲ್ಲಿ ಅಭ್ಯಾಸ ಮಾಡಿದೆ'.

ಒಡೆಯರ್ ಅವರ ಗಂಡಾಬಂಧನ ಸಮಾರಂಭದಲ್ಲಿ ವರಕವಿ ಬೇಂದ್ರೆ ಅವರು ಉಪಸ್ಥಿತರಿದ್ದರು. ಅಂದು ಅವರು ಗಂಡಾಬಂಧನದ ಅರ್ಥ ವಿವರಿಸಿದರು; ಗಂಡಾ ಎಂದರೆ ಗ್ರಂಥಿ, ಗಂಟು ಎಂದರ್ಥ. ಗುರು ಶಿಷ್ಯರಿಗೆ ಗಂಟು ಇದ್ದಂತೆ. ಅದಕ್ಕೇ ಐದು ಬಣ್ಣದ ದಾರ ಸೇರಿಸಿ ಒಂದೇ ಮಾಡಿ ಕಟ್ಟುವುದು. ಆಗ ಶಿಷ್ಯನಿಗೆ ಇವರು ತನ್ನ ಗುರು ಎಂದು ಹೇಳಿಕೊಳ್ಳುವ ಅಧಿಕಾರ ಪ್ರಾಪ್ತವಾಗುತ್ತದೆ.

ಅಶೋಕ ನಾಡಿಗೇರ್

ಕುಂದಗೋಳದ ನಾಡಿಗೇರ ಮನೆತನದವರಾದ ಅಶೋಕ ಪ್ರಾರಂಭದಲ್ಲಿ ನಾಗನಾಥ ಒಡೆಯರ್ ಅವರಿಂದ ಸಂಗೀತಾಭ್ಯಾಸ ಮಾಡಿದರು. ನಂತರ ಗಂಗೂಬಾಯಿ ಅವರು ಜೀವಂತ ಇರುವವರೆಗೂ ಅವರಲ್ಲಿ ಶಿಷ್ಯವೃತ್ತಿ ಮಾಡಿದರು. ಗಂಗೂಬಾಯಿ ಅವರು ಹಾಡುವುದನ್ನು ನಿಲ್ಲಿಸಿದ ಮೇಲೂ ಪ್ರತಿ ದಿನ ಕುಂದಗೋಳದಿಂದ ಬಂದು ಗಂಗೂಬಾಯಿ ಅವರ ಎದುರು ಕುಳಿತು ಅಭ್ಯಾಸ ಮಾಡುತ್ತಿದ್ದರು. ಸುಮಾರು ಇಪ್ಪತ್ತು ವರ್ಷಗಳ ಕಾಲ, ಅಂದರೆ ಕೃಷ್ಣಾ ಅವರನ್ನು ಬಿಟ್ಟರೆ ಗಂಗೂಬಾಯಿ ಅವರಲ್ಲಿ ಅತ್ಯಂತ ಹೆಚ್ಚಿನ

ಕಾಲ ಶಿಷ್ಯವೃತ್ತಿ ಮಾಡಿದ್ದಾರೆ. ಕುಂದಗೋಳದ ಸವಾಯಿ ಗಂಧರ್ವ ಟ್ರಸ್ಟ್‌ನ ಕಾರ್ಯದರ್ಶಿಯಾಗಿದ್ದಾರೆ.

ಅಶೋಕ ನಾಡಿಗೇರ ಅವರು ಸಂಗೀತ ಕಲಿಯುವ ಉದ್ದೇಶದಿಂದ ಮೊದಲು ಗಂಗೂಬಾಯಿ ಅವರನ್ನೇ ಭೇಟಿ ಮಾಡಿದ್ದರು. ಅವರು ಕಛೇರಿಗಳಲ್ಲಿ ವ್ಯಸ್ತವಾಗಿರುತ್ತಿದ್ದರಿಂದ 'ಯಾರ ಕಡೇನಾದ್ರೂ ಕಲ್ತ್ ಬಾ, ನಾ ಕಲಸ್ತೇನಿ' ಅಂದರು.

'ನೀವ ಹೇಳ್ರೀ ಯಾರ ಕಡೆ ಕಲೀಬೇಕಂತ ಅವ್ರ ಕಡೆನೇ ಕಲೀತೀನಿ' ಎಂದು ಕೇಳಿದಾಗ ಅವರು ತಮ್ಮ ಹಿರಿಯ ಶಿಷ್ಯ ನಾಗನಾಥ ಒಡೆಯರ್ ಅವರಲ್ಲಿ ಕಳಿಸಿಕೊಟ್ಟರು. 'ಒಡೆಯರ್ ಅವ್ರು ಭಾಳ ಒಳ್ಳೆ ಫೌಂಡೇಶನ್ ಹಾಕಿದ್ರು. ಯಾರು ಏನೇ ಹಾಡಿದ್ರು ಅದನ್ನ ತಿಳ್ಕೋಳೊ ಹಂಗಾತು. ಆಮೇಲೆ ಅಕ್ಕಾ ಅವ್ರ ಕಡೆ ಬಂದೆ. ಅವ್ರದ್ದು, ಭಾಳ ಒಳ್ಳೆ ಸ್ವಭಾವ. ಆದ್ರ ಕಲ್ಸುವಾಗ ಕಟ್ಟುನಿಟ್ಟು. ಅವ್ರು ಹೇಳಿದ್ಹಂಗ ಬರ್ಬೇಕು. ಒಂದ ರಾಗ ಮನವರಿಕೆ ಆಗೋವರಿಗೆ – ಒಂದ್ವರ್ಷ ಆಗಲಿ, ಎರಡಾಗಲೀ ಅದನ್ನೇ ಅಭ್ಯಾಸ ಮಾಡಬೇಕು. ಅಕ್ಕಾ ಅವ್ರು ಮುಖಡಾ ಕಲಿಸಿ ಒಳಗ ಹೋದರ ಕೃಷ್ಣಾ ಅವರು ಉಳಿದದ್ದನ್ನ ಕಲ್ಸತಿದ್ರು. ಅವರಂತೂ ಭಾಳ ಮೆತ್ತನ್ನ ಸ್ವಭಾವ. ಒಮ್ಮೊಮ್ಮೆ ನನ್ನ ಸ್ವರ ಹತ್ತದಿದ್ರ ಗಂಗೂಬಾಯಿ ಅವರಿಗೆ ಸಿಟ್ಟ್ ಬಂದು ಒಳಗ ಹೋಗಿ ಬಿಡ್ತಿದ್ರು. ಕಿಟ್ಟಕ್ಕ ಅವರು ಸಣ್ಣ ಮಕ್ಕಳನ್ನ ರಮಿಸೋ ಹಂಗ ಸಮಾಧಾನ ಮಾಡಿ ಮತ್ತ ಹಾಡ್ಲಿಕ್ಕೆ ಹಚ್ಚತಿದ್ರು' ಎನ್ನುತ್ತಾರೆ ಅಶೋಕ ನಾಡಿಗೇರ.

'ಮೊದಲ ರಾಗದ ವಿಸ್ತಾರ ಕಲ್ಸೋವ್ರು. ಅದು ಸರಿಯಾಗಿ ಮನನ ಆದ ಮೇಲೆ ಬಂದಿಶ್. ಗಾಯಕಿ ಅಂಗಗಳು ಎಲ್ಲಾ. ಅವೆಲ್ಲ ಸರಿಯಾಗಿ ಬಂದ ಮೇಲೆ ತಬಲಾದ ಜತೆ ಅಭ್ಯಾಸ ಮಾಡಸ್ತಿದ್ರು'.

ಗಂಗೂಬಾಯಿ ಅವರ ಶೈಲಿಯನ್ನೇ ನೆನಪಿಸುವ ಗಾಯನ ಶೈಲಿಯನ್ನು ಹೊಂದಿರುವ ಅವರು ರಾಜ್ಯದಲ್ಲಿ ಮಾತ್ರವಲ್ಲದೇ ಹೊರ ರಾಜ್ಯಗಳಲ್ಲೂ ತಮ್ಮ ಸಂಗೀತಸುಧೆ ಹರಿಸಿದ್ದಾರೆ.

ಸುಲಭಾ ದತ್ತ ನೀರಲಗಿ

ಬೆಳಗಾವಿ ಜಿಲ್ಲೆ ಕಿತ್ತೂರಿನ ವಿದ್ಯಾವರ್ಧಕ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿಎಚ್‌ಡಿ ಪದವಿಯನ್ನೂ ಪಡೆದಿದ್ದಾರೆ.

ಕರ್ನಾಟಕ ವಿಶ್ವವಿದಾಲಯದಲ್ಲಿ ಸಂಗೀತ ವಿಭಾಗ ಆರಂಭವಾದಾಗಿನ ಮೊದಲ ಬ್ಯಾಚಿನ ವಿದ್ಯಾರ್ಥಿ ಸುಲಭಾ. ಮಲ್ಲಿಕಾರ್ಜುನ ಮನಸೂರ ವಿಭಾಗ ಮುಖ್ಯಸ್ಥರಾಗಿದ್ದರು. ಬಸವರಾಜ ರಾಜಗುರು, ಪಂಚಾಕ್ಷರ ಸ್ವಾಮಿ ಮತ್ತಿಗಟ್ಟಿ, ಸಂಗಮೇಶ್ವರ ಗುರವ್ ಮತ್ತು ಗಂಗೂಬಾಯಿ ಹಾನಗಲ್ ಗೌರವ ಪ್ರಾಧ್ಯಾಪಕರಾಗಿದ್ದರು. ಮೊದಲ ತರಗತಿಯಲ್ಲಿ

ಗಂಗೂಬಾಯಿ ಅವರಲ್ಲಿ ಹೆಚ್ಚಿನ ಅಧ್ಯಯನ ಮಾಡಬೇಕು ಎಂದು ಅನ್ನಿಸಿದ್ದರಿಂದ ಸುಲಭಾ ತಮ್ಮ ಅಣ್ಣನ ಜತೆ ಗಂಗೂಬಾಯಿ ಅವರನ್ನು ಭೇಟಿ ಮಾಡಿದರು. 'ಇದಕ್ಕ ಭಾಳ ತಾಳ್ಮೆ ಬೇಕು. ಅರ್ಧಕ್ಕ ಬಿಡೋದಾದ್ರ ನಾನ್ ಕಲ್ಸಂಗಿಲ್ಲ'. ಅದನ್ನು ಒಪ್ಪಿದ ಮೇಲೆ ಸರಸ್ವತಿ ಪೂಜೆ ಮಾಡಿ ಪಾಠ ಶುರು ಮಾಡೋಣ ಎಂದರು. ಸುಲಭಾ ಅವರು ಎಂ. ಮ್ಯೂಸಿಕ್‌ಗೆ ಸೇರಿದ ವರ್ಷ (೧೯೭೭ ರಲ್ಲಿ) ಗಂಗೂಬಾಯಿ ಅವರ ಶಿಷ್ಯತ್ವವೂ ಶುರುವಾಯಿತು. ಸುಲಭಾ ಅವರಿಗೂ ನಾಗನಾಥ ಒಡೆಯರ್ ಅವರಿಗೆ ಕಲಿಸಿದಂತೆಯೇ ಮೊದಲು ಕೋಮಲ ರಿಷಭ ಆಸಾವರಿ ರಾಗದಲ್ಲಿ ಶ್ರೀಮಾತಾ ಭವಾನಿ ಎಂಬ ಬಂದಿಶ್ ನಿಂದಲೇ ಪಾಠ ಆರಂಭವಾಯಿತು. ನಂತರ ತೋಡಿ ರಾಗವನ್ನು ಕಲಿಸಿದರು. ಅದರಲ್ಲಿ ಮೊದಲು ಮಂದ್ರ ಸಪ್ತಕದ ಸ್ವರಗಳು ನಂತರ ಮಧ್ಯ ಸಪ್ತಕದ ಸ್ವರಗಳ ಅಭ್ಯಾಸ. ಅವರು ಹೇಳಿದ್ದನ್ನು ಚಾಚೂ ತಪ್ಪದೇ ಹಾಗೇ ಹಾಡಬೇಕು. ಗಂಗೂಬಾಯಿ ಅವರಿಗೆ ಸರಿ ಅನ್ನಿಸುವವರೆಗೂ ಅದನ್ನೇ ಮತ್ತೆ ಮತ್ತೆ ಹಾಡುತ್ತಲೇ ಇರಬೇಕು. ಅದನ್ನೇ ಹಾಡಿ ಹಾಡಿ ಬೇಜಾರು ಬಂದು ಅಳು ಬಂದಂತೆ ಹೊಟ್ಟೆ ನೋವು ಬಂದಂತೆ ಅನ್ನಿಸುತ್ತಿತ್ತಂತೆ. ಆದರೂ ಅವರ ಆದೇಶ ಮೀರುವಂತಿರಲಿಲ್ಲ. 'ಅವರು ಒಳಗ ಹೋಗ್ಯಾರ ಅಂತ ಮುಂದಿನ ಸ್ವರಕ್ಕ ಹೋದರ, ಹೊರಗ ಬಂದು ಮತ್ತ ಅದೇ ಸ್ವರಾನ ಇನ್ನೊಮ್ಮೆ ತಿಳಿಸಿ ಹೋಗಾವ್ರು' ಗಂಗೂಬಾಯಿ ಅವರು ಊರಲ್ಲಿ ಇಲ್ಲದಾಗಲೂ ಮನೆಗೆ ಬಂದು ಅಭ್ಯಾಸ ಮಾಡಿ ಹೋಗುವಂತೆ ಸುಲಭಾ ಅವರಿಗೆ ತಾಕೀತು ಮಾಡುತ್ತಿದ್ದರು. ಹೀಗೆ ಆರಂಭವಾದ ಅವರ ಕಲಿಕೆ ಸುಮಾರು ಹತ್ತು ವರ್ಷ ಹಾಗೇ ಮುಂದುವರಿಯಿತು.

ಗಂಗೂಬಾಯಿ ಅವರಲ್ಲಿ ಸೇರುವುದಕ್ಕೆ ಮುಂಚೆ ಸುಲಭಾ (ಡಂಬಳ) ನಾರಾಯಣ ರಾವ್ ಮುಜುಂದಾರ್ ಮತ್ತು ದಂಡಾಪೂರ್ ಅವರಲ್ಲಿ ಅಭ್ಯಾಸ ಮಾಡಿದ್ದರು. ಗಂಗೂಬಾಯಿ ಅವರು ತಾಲೀಮಿನ ಅವಧಿಯಲ್ಲಿ ಸಾರ್ವಜನಿಕ ಕಛೇರಿಗಳಿಗೆ ಅನುಮತಿ ನೀಡುತ್ತಿರಲಿಲ್ಲ. ಆದರೆ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅನುಮತಿ ನೀಡುತ್ತಿದ್ದರು. ಅಲ್ಲದೇ ಯಾವುದಾದರೂ ರಾಗವನ್ನು ಸ್ಪರ್ಧೆಯ ಅವಶ್ಯಕತೆಗೆ ತಕ್ಕಂತೆ ತಯಾರು ಮಾಡಿಸುತ್ತಿದ್ದರು. ಸುಲಭಾ ಅವರ ಅನುಭವದಲ್ಲಿ 'ಅಭೋಗಿ ಮತ್ತು ಮಾರವಾ ಅವರಿಗೆ ಪ್ರಿಯವಾದ ರಾಗಗಳು. ಪೂರಿಯಾ ಮತ್ತು ದರ್ಬಾರಿ ಕೂಡ ಅವರಿಗೆ ಇಷ್ಟವಾದ ರಾಗಗಳೇ'.

೫. ಪ್ರಶಸ್ತಿ ಪುರಸ್ಕಾರಗಳು

೧) ಪದ್ಮವಿಭೂಷಣ– ಭಾರತ ಸರಕಾರದಿಂದ ೨೦೦೨

೨) ಪದ್ಮಭೂಷಣ – ಭಾರತ ಸರಕಾರದಿಂದ ೧೯೭೧

೩) ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ –ಕರ್ನಾಟಕ ಸರಕಾರದಿಂದ ೧೯೬೨

೪) ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ – ಭಾರತ ಸರಕಾರದಿಂದ. ೧೯೭೩

೫) ತಾನಸೇನ ಪ್ರಶಸ್ತಿ – ಮಧ್ಯಪ್ರದೇಶ ಸರಕಾರದಿಂದ – ೧೯೮೪

೬) ಕನಕಪುರಂದರ ಪ್ರಶಸ್ತಿ – ಕರ್ನಾಟಕ ಸರಕಾರದಿಂದ–೧೯೯೨

೭) ಐಟಿಸಿ ಸಂಗೀತ ಅಕಾಡೆಮಿ ಪ್ರಶಸ್ತಿ–ಐಟಿಸಿ ಸಂಗೀತ ಸಂಶೋಧನ ಅಕಾಡೆಮಿ, ಕಲ್ಕತ್ತಾ–೧೯೯೨

೮) ಶ್ರೀಮಂತ ಶಂಕರದೇವ್ ಪ್ರಶಸ್ತಿ – ಅಸ್ಸಾಂ ಸರಕಾರದಿಂದ. ೧೯೯೩

೯) ಡಾಕ್ಟರೇಟ್ ಪದವಿ – ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೬

೧೦) ಡಾಕ್ಟರೇಟ್ ಪದವಿ – ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೧೯೮೬

೧೧) ನಾಡೋಜ ಪದವಿ – ಹಂಪಿ ಕನ್ನಡ ವಿಶ್ವವಿದ್ಯಾಲಯ. ೧೯೯೫

೧೨) ಡಾಕ್ಟರೇಟ್ ಪದವಿ – ದೆಹಲಿ ವಿಶ್ವವಿದ್ಯಾಲಯ, ದೆಹಲಿ. ೧೯೯೮

೧೩) ಡಾಕ್ಟರೇಟ್ ಪದವಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು. ೨೦೦೮

೧೪) ಡಾಕ್ಟರೇಟ್ ಪದವಿ – ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ. ೨೦೦೯

ಬಿರುದುಗಳು

* ಸಂಗೀತ ಶಿರೋಮಣಿ
* ಸಂಗೀತ ಸರಸ್ವತಿ
* ಸಂಗೀತ ಕಲಾರತ್ನ
* ಸಂಗೀತ ರತ್ನ
* ಸಂಗೀತ ಸಾಮ್ರಾಜ್ಞಿ
* ಗಾನರತ್ನ
* ಸ್ವರಕಲ್ಪದ್ರುಮ
* ರಾಗಭೂಷಣ
* ಸ್ವರಚಿಂತಾಮಣಿ
* ಗುರುಗಂಧರ್ವ
* ರಾಗರಾಗೇಶ್ರೀ
* ನಾದಬ್ರಹ್ಮಿಣಿ
* ಸ್ವರಸರಸ್ವತಿ
* ಗಾನಗಂಗಾಮಯಿ
* ಗಾನಸರಸ್ವತಿ

೬. ಧ್ವನಿಮುದ್ರಿಕೆಗಳ ವಿವರ

(ಕ್ರಮವಾಗಿ ಧ್ವನಿಮುದ್ರಿಕೆಯ ಹೆಸರು, ಕಂಪನಿ ಮತ್ತು ರಾಗಗಳ ವಿವರ)

೧) ಶಕ್ತಿ ಮತ್ತು ಶಾಂತಿ: ನಿನಾದ್– ಭಾಗ ೧– ಮೇಘ ಮಲ್ಹಾರ, ಪೂರಿಯಾ ಧನಾಶ್ರೀ. ಭಾಗ ೨– ಭೀಂಪಲಾಸ್ ಭೈರವಿ

೨) ಸವಾಯಿ ಗಂಧರ್ವ ಸಂಗೀತ ಸಮಾರೋಹ ಪುಣೆ: ಅಲೂರ್ಕರ್ ಮ್ಯೂಸಿಕ್ಸ್. ಭಾಗೇಶ್ರೀ, ಅಢಾಣಾ.

೩) ಸವಾಯಿ ಗಂಧರ್ವ ಸಂಗೀತ ಸಮಾರೋಹ ೧೯೮೨ (ಲೈವ್). ಭೈರವ ಹಿಂಡೋಲ್

೪) ಕ್ಲಾಸಿಕಲ್ ಗೋಲ್ಡನ್, ರೋಶನಾರಾ ಬೇಗಂ, ಗಾಂಧಾರಿ ಹಾನಗಲ್: ಎಚ್.ಎಂ.ವಿ. ದೇಸ್ಕಾರ್, ದುರ್ಗಾ, ಕಾಮೋದ್, ಖಂಬಾವತಿ, ಭಾಗೇಶ್ರೀ, ಮಾಲಕಂಸ್, ಮಿಯಾಮಲ್ಹಾರ್.

೫) ಪರಂಪರಾ: ಗಂಗೂಬಾಯಿ ಹಾನಗಲ್ ಮತ್ತು ಭೀಮಸೇನ ಜೋಶಿ: ಎಚ್.ಎಂ.ವಿ: ಮಿಯಾಕಿ ತೋಡಿ, ಪೂರಿಯಾ, ದರಬಾರಿ ಕಾನಡಾ, ಅಭೋಗಿ.

೬) ಸವಾಯಿ ಗಂಧರ್ವ ಸಂಗೀತ ಸಮಾರೋಹ (ಲೈವ್): ಅಲೂರ್ಕರ್ ಮ್ಯೂಸಿಕ್ಸ್– ತೋಡಿ

೭) ಸ್ವರ ಶೋಧ: ಮ್ಯೂಸಿಕ್ ಟುಡೇ– ಬಿಹಾಗ್

೮) ವರ್ಜಿನ್ ಮ್ಯೂಸಿಕ್– ಶುದ್ಧ ಕಲ್ಯಾಣ್, ಬಹಾರ್, ಜೋಗಿಯಾ ವಿಸಿಡಿಗಳು

೧) ಕೋಹಿನೂರ್ : ಸಾರೆಗಾಮಾ– ಮಿಯಾ ಮಲ್ಹಾರ್, ಭೈರವ್, ಜೋಗಿಯಾ, ಪೂರಿಯಾ, ಕಾಮೋದ್ –ತರಾನಾ, ದೇಸಕಾರ್, ದುರ್ಗಾ, ಖಂಬಾವತಿ, ಭಾಗೇಶ್ರೀ, ಮಾಲಕಂಸ್, ಬಿಹಾಗ್ ಚಂದ್ರಕಂಸ್.

೨) ಪದ್ಮವಿಭೂಷಣ: ಮ್ಯೂಸಿಕ್ ಟುಡೇ– ಬಿಹಾಗ್, ಜೈಜೈವಂತಿ.

೩) ವಾಯ್ಸ್ ಆಫ್ ಟ್ರೆಡಿಶನ್– ವೆಲ್ಟ್ ಮ್ಯೂಸಿಕ್ ಕಂ.– ಶುದ್ಧ ಕಲ್ಯಾಣ, ಆಭೋಗಿ, ಬಸಂತ್.

೪) ಗಂಗೂಬಾಯಿ ಹಾನಗಲ್, ಗಂಧರ್ವ ಮ್ಯೂಸಿಕ್ ಫೆಸ್ಟಿವಲ್: ಫೌಂಟೇನ್ ಮ್ಯೂಸಿಕ್– ಭಾಗೇಶ್ರೀ, ಅಡಾನಾ, ಭೈರವ, ಹಿಂಡೋಲ.

೫) ಕ್ಲಾಸಿಕಲ್ ರಾಗಾ ಕಲೆಕ್ಷನ್: ವೀನಸ್– ಭೈರವ್, ಮಿಯಾ ಮಲ್ಹಾರ್, ಬಿಹಾಗ್, ಭಾಗೇಶ್ರೀ

೬) ದಿ ಗ್ರಾಮಾಫೋನ್ ಎರಾ: ಸಾರೆಗಾಮಾ– ಆಸಾವರಿ, ದೇವಗಿರಿ, ಯಮನ್, ಚಂದ್ರಕಂಸ್, ಜೈಜೈವಂತಿ, ಅಭೋಗಿ.

೭) ಉ. ಅಮೀರ್ ಖಾನ್, ಗಂಗೂಬಾಯಿ ಹಾನಗಲ್: ಫೌಂಟೇನ್ ಮ್ಯೂಸಿಕ್– ಅಹಿರ್ ಭೈರವ್, ಮಾರವಾ.

ಗ್ರಂಥ ಋಣ

ಗಂಗಾವತರಣ– ದಮಯಂತಿ ನರೇಗಲ್

ನನ್ನ ಬದುಕಿನ ಹಾಡು– ಎನ್ಕೆ

ಮ್ಯೂಸಿಕ್ ಮೇಕರ್ಸ್– ಅಶೋಕ ರಾನಡೆ

ದಿ ವರ್ಲ್ಡ್ ಆಫ್ ಗಂಧರ್ವಾಸ್ – ಅಖಿಲ ಭಾರತ ಗಂಧರ್ವ ಮಹಾ ವಿದ್ಯಾಲಯ

ಆನ್ ಗಂಗೂಬಾಯಿ– ಸಬೀಹಾ ಸೆಹೆಗಲ್

ಮತ್ತು ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪತ್ರಿಕೆಗಳಲ್ಲಿ ಗಂಗೂಬಾಯಿ ಅವರ ಬಗ್ಗೆ ಪ್ರಕಟವಾದ ಲೇಖನಗಳು

ಲೇಖಕಿಯ ಪರಿಚಯ

ಶ್ರೀಮತಿ ರೇಖಾ ಹೆಗಡೆ ಅರವಿಂದ್ ಬರವಣಿಗೆ ಮತ್ತು ಶಾಸ್ತ್ರೀಯ ಸಂಗೀತ ಎರಡರಲ್ಲೂ ಅಭಿವ್ಯಕ್ತಿಯನ್ನು ಕಂಡುಕೊಂಡವರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಅಖಿಲಭಾರತ ಗಂಧರ್ವ ಮಹಾವಿದ್ಯಾಲಂಯದಿಂದ 'ಸಂಗೀತ ವಿಶಾರದ' ಪದವಿ ಪಡೆದವರು. ಶಿರಸಿಯ ಶ್ರೀ ಜಿ.ಎಸ್. ಹೆಗಡೆ ಬೆಳ್ಳಿಕೇರಿ, ಪಂ. ಕಮಲಾಕರ ಭಟ್ ಮತ್ತು ಪಂ. ಪರಮೇಶ್ವರ ಹೆಗಡೆ ಅವರಿಂದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಶಿಕ್ಷಣವನ್ನು ಪಡೆದು ಗ್ವಾಲಿಯರ್ ಮತ್ತು ಪಟಿಯಾಲಾ ಗಾಯನಶೈಲಿಯನ್ನು ರೂಢಿಸಿಕೊಂಡವರು.

'ಪ್ರಜಾವಾಣಿ' ಪತ್ರಿಕೆಯಲ್ಲಿ (೧೯೯೫–೨೦೦೨) ಪತ್ರಕರ್ತೆಯಾಗಿ, ತುಮಕೂರಿನ 'ಅಂಕುರ್' ಪ್ರಾಥಮಿಕ ಶಾಲೆಯಲ್ಲಿ (೨೦೦೫–೨೦೧೦) ಸಂಗೀತಶಿಕ್ಷಕಿಯಾಗಿ ಇವರು ಸೇವೆಸಲ್ಲಿಸಿದ್ದಾರೆ. ಗದುಗಿನ ಶ್ರೀ ವಿರೇಶ್ವರ ಪುಣ್ಯಾಶ್ರಮವು ಇವರಿಗೆ 'ನಾದಶ್ರೀ' ಎಂಬ ಬಿರುದು ನೀಡಿ ಸನ್ಮಾನಿಸಿದೆ. ಇವರ 'ಪ್ರಥಮ್ ಸುರ್' ಎಂಬ ಶಾಸ್ತ್ರೀಯ ಸಂಗೀತದ ಆಡಿಯೋ ಸಿ.ಡಿ.ಯನ್ನು ಬೆಂಗಳೂರಿನ 'ಲಹರಿ' ಸಂಸ್ಥೆ ಹೊರತಂದಿದೆ. ಮೈಸೂರು ದಸರಾ ಮಹೋತ್ಸವ (೧೯೯೮), ಬನವಾಸಿಯ ಕದಂಬೋತ್ಸವ (೧೯೯೯), ಕುಂದಗೋಳದ ಸವಾಯಿ ಗಂಧರ್ವ ಸಂಗೀತ ಸಮ್ಮೇಳನ (೨೦೧೦) ಮುಂತಾದ ಅನೇಕ ಪ್ರತಿಷ್ಠಿತ ಸಂಗೀತಸಮಾರಂಭಗಳಲ್ಲಿ ಇವರು ತಮ್ಮ ಸಂಗೀತಕಚೇರಿ ನಡೆಸಿ ಅಪಾರಸಂಖ್ಯೆಯ ಶ್ರೋತೃಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪ್ರಸಾರಾಂಗದ ಪ್ರಕಟಣೆಗಳು

ಪುಸ್ತಕಗಳು :

- **ಸಂಗೀತಸಾಮ್ರಾಟ್ : ಪಂ. ಬಸವರಾಜ ರಾಜಗುರು :**
  ಲೇಖಕರು : ನಿಜಗುಣ ರಾಜಗುರು. ಬೆಲೆ : ರೂ. 100 /-

- **ಗಾಯನಗಂಗೆ ಡಾ. ಗಂಗೂಬಾಯಿ ಹಾನಗಲ್ :**
  ಲೇಖಕರು : ರೇಖಾ ಹೆಗಡೆ ಅರವಿಂದ್. ಬೆಲೆ : ರೂ. 50/-

- **ರಂಗಸಂಗೀತ :**
  ಸಂಪಾದಕರು : ಡಾ. ರಾಮಕೃಷ್ಣ ಮರಾಠೆ. ಬೆಲೆ : ರೂ. 150/-

ಸಾಕ್ಷ್ಯಚಿತ್ರದ ಅಡಕಮುದ್ರಿಕೆ :
ರಾಷ್ಟ್ರಕವಿ ಕುವೆಂಪುರವರ ರಾಮಾಯಣದರ್ಶನಂ :
ಗಮಕವಾಚನ ಮತ್ತು ವ್ಯಾಖ್ಯಾನ : ಬೆಲೆ : ರೂ. 120/-

ಈ ಎಲ್ಲ ಪ್ರಕಟಣೆಗಳನ್ನು ಪಡೆದುಕೊಳ್ಳ ಸಂಪರ್ಕಿಸಬಹುದಾದ ವಿಳಾಸ :
ಪ್ರಸಾರಾಂಗ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಅಶೋಕವೃತ್ತ, ಜೆ.ಎಲ್.ಬಿ. ರಸ್ತೆ, ಲಕ್ಷ್ಮೀಪುರಂ, ಮೈಸೂರು – 4, ಕರ್ನಾಟಕ.
ದೂರವಾಣಿ : 0821 2402141, 2402114,

ಇಮೇಲ್ : musicuniversitymys@gmail.com, Website :
www.musicuniversity.ac.in

ಗಾಯನಗಂಗೆ ಡಾ. ಗಂಗೂಬಾಯಿ ಹಾನಗಲ್

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಸಂಗೀತಾದಿ ಪ್ರದರ್ಶಕ ಕಲೆಗಳು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರಮುಖ ರಾಯಭಾರಿಗಳು. ಇವು ಮನುಕುಲದಷ್ಟೇ ಆರ್ಷೇಯ ಸ್ಥಾನ ಪಡೆದಿದ್ದು, ಆನಂದ ಮತ್ತು ಸೌಹಾರ್ದತೆಗಳನ್ನು ಜೀವಾಳವಾಗಿ ಉಳ್ಳವು. ಇವುಗಳ ಸಹಚರ್ಯದಿಂದ ಮನುಕುಲವು ಸಮೃದ್ಧಿಯತ್ತ ಸಾಗಿ ಮುನ್ನಡೆದಿರುವುದು ಕಂಡುಬರುತ್ತದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಇವುಗಳ ಅಗತ್ಯತೆಯೂ ಹೆಚ್ಚಾಗಿದ್ದು, ಪ್ರಸ್ತುತವೂ ಆಗಿದೆ. ಇದನ್ನು ಮನಗಂಡು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕರ್ನಾಟಕ ಸರ್ಕಾರದಿಂದ 2008ರಲ್ಲಿ ಸಂಗೀತ ವಿಶ್ವವಿದ್ಯಾಲಯ ಸ್ಥಾಪನೆಗೊಂಡು ಅನಂತರ 2009ರಲ್ಲಿ 'ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ' ಎಂದು ಘೋಷಿತವಾಗಿದೆ. ಈ ವಿಶ್ವವಿದ್ಯಾಲಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಅಧ್ಯಯನ – ಅಧ್ಯಾಪನ – ಸಂಶೋಧನ – ಸಂಗೋಪನ ಮತ್ತು ಪ್ರಸರಣ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಮೇಲ್ಕಂಡ ಕಲೆಗಳ ಉನ್ನತಿಗೆ ತನ್ನನ್ನು ಮುಡುಪಾಗಿಸಿಕೊಂಡಿದೆ.

ವಿಶ್ವವಿದ್ಯಾಲಯವು ಪ್ರದರ್ಶಕ ಕಲೆಗಳ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದರೊಂದಿಗೆ ಆಧುನಿಕ ತಂತ್ರಜ್ಞಾನವನ್ನು, ವೈಜ್ಞಾನಿಕ ನೆಲೆಗಟ್ಟುಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಒಂದು ಪೂರಕ ವಾತಾವರಣವನ್ನು ಸೃಜಿಸುವತ್ತ ಮುನ್ನಡೆದಿದೆ. ಅಲ್ಲದೆ, ಸರ್ಟಿಫಿಕೇಟ್, ಡಿಪ್ಲೊಮಾ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಂತಹ ಶೈಕ್ಷಣಿಕ ವಿದ್ಯಾಭ್ಯಾಸವನ್ನು ನೀಡುತ್ತಿದೆ.

ಮುಂದೆ, ವಿಶ್ವವಿದ್ಯಾಲಯವು ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದ ಧ್ವನಿದೃಶ್ಯ ಮುದ್ರಣ, ಹಸ್ತಪ್ರತಿ ಸಂಗ್ರಹ, ಸಂಗ್ರಹಾಲಯ, ಕಲಾ ದಿಗ್ಗಜರನ್ನು ಕುರಿತ ದಾಖಲೀಕರಣ, ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಪ್ರಸಾರಾಂಗದ ಮೂಲಕ ಗ್ರಂಥಪ್ರಕಟಣೆಯಂಥ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಇನ್ನೂ ಹೆಚ್ಚು ಗ್ರಂಥಮಾಲೆಗಳನ್ನು ರೂಪಿಸಿ ಅವುಗಳನ್ನು ಲೋಕಾರ್ಪಣೆ ಮಾಡುವ ಮೂಲಕ ಕಲಾವಿದರು, ಕಲಾರಸಿಕರು, ಸಂಶೋಧಕರು ಹಾಗೂ ಸಹೃದಯರನ್ನು ತಲುಪುವ ಅಭಿಲಾಷೆಯನ್ನು ಹೊಂದಿದೆ. ವಿಶ್ವವಿದ್ಯಾಲಯದ ಈ ಎಲ್ಲಾ ಕಾರ್ಯಗಳಿಗೆ ತಮ್ಮ ಸಲಹೆ ಮತ್ತು ಸಹಕಾರಗಳನ್ನು ಯಾಚಿಸುತ್ತೇನೆ.

ಡಾ. ಸರ್ವಮಂಗಳ ಶಂಕರ್
ಕುಲಪತಿ

